ಸಾಹಿತ್ಯ ದಾಸೋಹ – ೧೯೯

೧೨ ಮಾರ್ಚ್ ೨೦೨೨ರ ೧೯೯ನೇ ಸಾಹಿತ್ಯ ದಾಸೋಹದಲ್ಲಿ
ಪ್ರಸ್ತುತಪಡಿಸಿದ ಬರಹಗಳ ಸಂಕಲನ



ಸಮನ್ವಯ ಸಮಿತಿ * ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಪ್ರಿಯರೆ,

೨೦೨೨ರ ಮಾರ್ಚ್ ೧೨ರಂದು ನಡೆದ ೧೯೯ನೆಯ ನೋಡಿಯೋ ಸಾಹಿತ್ಯ ದಾಸೋಹದ ಪ್ರಸ್ತುತಿಗಳ ಪಿಡಿಎಫ್ ಸಂಚಿಕೆ ಇಲ್ಲಿದೆ. ಈ ಸಂಚಿಕೆಗೆ ಸಕಾಲಕ್ಕೆ ತಮ್ಮ ಬರಹಗಳನ್ನು ಕಳುಹಿಸಿದ ಎಲ್ಲ ಲೇಖಕರಿಗೂ, ದಾಸೋಹದ ಅಧ್ಯಕ್ಷತೆ ವಹಿಸಿ, ಎಲ್ಲ ಪ್ರಸ್ತುತಿಗಳನ್ನೂ ವಿಶ್ಲೇಷಿಸಿ ತಮ್ಮ ಅನಿಸಿಕೆಗಳನ್ನು ಬರಹ ರೂಪದಲ್ಲಿ ನೀಡಿದ ಶ್ರೀಮತಿ ರೇಣುಕಾ ದೇಸಾಯಿಯವರಿಗೂ, ತಾಂತ್ರಿಕ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

೧೯೯ನೇ ದಾಸೋಹವು ಎರಡು ವಿಷಯಗಳಿಗಾಗಿ ಮುಖ್ಯವೆನಿಸುತ್ತದೆ. ಬಹು ನಿರೀಕ್ಷಿತ ೨೦೦ನೇ ದಾಸೋಹಕ್ಕೆ ಇದು ಒಂದೇ ಒಂದು ಹೆಜ್ಜೆ ಹಿಂದಿದೆ ಹಾಗೂ ಕೋವಿಡ್ ಪಿಡುಗಿನ ಪರಿಣಾಮವಾಗಿ ಕಳೆದ ಎರಡು ವರ್ಷಗಳಿಂದ ದಾಸೋಹಿಗಳು ಮುಖಾಮುಖಿ ಭೇಟಿಯಾಗದೆ, ಅಂತರ್ಜಾಲದ ಮುಖೇನ ತಪ್ಪದೇ ನಡೆಸಿಕೊಂಡು ಬಂದ ಅರವತ್ತಕ್ಕೂ ಹೆಚ್ಚು ಅಂತರಜಾಲ ಆಧಾರಿತ ಸರಣಿ ಕಾರ್ಯಕ್ರಮಗಳ ಪೈಕಿ ಇದು ಕೊನೆಯ ದಾಸೋಹ ಕಾರ್ಯಕ್ರಮ.

ನಾವೆಲ್ಲಾ ಮುಖಾಮುಖಿ ಭೇಟಿಯಾಗೋದು ಯಾವಾಗ ಎಂದು ಸದಾ ಕೇಳುತ್ತಿದ್ದ ಸದಸ್ಯರಿಗೆ ಇದೋ ಇನ್ನೇನು ೧೯೯ ಮುಗಿಯಲಿ, ೨೦೦ಕ್ಕೆ ಎಲ್ಲರೂ ಒಂದೆಡೆ ಸೇರೋಣ ಎಂದು ಧೈರ್ಯವಾಗಿ ಹೇಳಿದ ವೇದಿಕೆ ಈ ೧೯೯ನೆಯ ದಾಸೋಹ.

ಕಳೆದ ಎರಡು ವರ್ಷಗಳಲ್ಲಿ ಹೊಸದಾಗಿ ವೇದಿಕೆಗೆ ಸೇರಿದ ಸಾಹಿತ್ಯಾಸಕ್ತರ ಸಂಖ್ಯೆ ಬಹಳ. ಇದುವರೆಗೆ ಅಂತರ್ಜಾಲದಲ್ಲಿಯೇ ಮುಖ ತೋರಿಸಿ, ಧ್ವನಿ ಹೊರಡಿಸುತ್ತಿದ್ದ ಇವರೆಲ್ಲರಿಗೂ, ೨೦೦ನೆಯ ದಾಸೋಹದಲ್ಲಿ ದಾಸೋಹಿ ಮಿತ್ರರನ್ನು ಪರಸ್ಪರ ಮುಖತಃ ಭೇಟಿಯಾಗುವ ಕಾತುರ. ಹಾಗೆಯೇ, ಎಷ್ಟೇ ದೂರದಲ್ಲಿರಲಿ, ತಮ್ಮ ಗಣಕಯಂತ್ರ, ಮೊಬೈಲನ್ನು ಮ್ಯೂಟ್ ಮಾಡಿಕೊಂಡು, ಕಡಲೆಬೀಜ, ಚಕ್ಕುಲಿ, ಕೋಡುಬಳೆ, ಮೆಲ್ಲುತ್ತಾ, ಕಾಫಿ ಕುಡಿಯುತ್ತಾ ತಮ್ಮದೇ ಆದ ಭಂಗಿಯಲ್ಲಿ ಮನೆಯಲ್ಲೋ, ವಾಹನದಲ್ಲೋ ಕುಳಿತು ಸರ್ವತಂತ್ರ ಸ್ವತಂತ್ರರಾಗಿ ದಾಸೋಹವನ್ನು ವೀಕ್ಷಿಸಲು ಅವಕಾಶ ನೀಡಿದ ಈ ಗೂಗಲ್ ಮೀಟ್ ಆಧಾರಿತ ನೋಡಿಯೋ ದಾಸೋಹದ ವೈಶಿಷ್ಟ್ಯವನ್ನು ಬಿಡುವುದಾದರೂ ಹೇಗೆ? ಎಂಬ ಚಿಂತೆ ಹಲವರದು.

ಊರು, ರಾಜ್ಯ, ದೇಶ, ಖಂಡ ಇವೆಲ್ಲದರ ಎಲ್ಲೆಯನ್ನು ದಾಟಿ ಸದಸ್ಯರನ್ನು ಒಂದೆಡೆ ಸೇರಿಸುತ್ತಿರುವ ನೋಡಿಯೋ ವೇದಿಕೆಯೊಂದು ಮುಖಾಮುಖಿ ಭೇಟಿಯತ್ತ ಮುಖ ಮಾಡಿದರೆ ದೂರದೂರಿನ ಮಂದಿ ದಾಸೋಹದಿಂದ ವಂಚಿತರಾಗುವುದು ಸಹಜ.

ಅಷ್ಟೇ ಅಲ್ಲ, ದಾಸೋಹದಲ್ಲಿ ಯಾವುದೇ ಪ್ರಸ್ತುತಿಗಳನ್ನು ಮಂಡಿಸದೆ, ಕೇವಲ ತಮ್ಮ ಸಾಹಿತ್ಯಾಸಕ್ತಿಯಿಂದ ಕಿವಿಗೊಂದು ಶ್ರವಣಸಾಧನ ಸಿಕ್ಕಿಸಿಕೊಂಡು ದಾಸೋಹವನ್ನು ಸವಿದ ಕೇಳುಗರು ಸುಮ್ಮನಿರುವರೇ? ೨೦೦ನೆಯ ದಾಸೋಹವು ಅಂತರ್ಜಾಲದ ನೋಡಿಯೋ ಹಾಗೂ ಮುಖಾಮುಖಿ ದಾಸೋಹಗಳೆರಡನ್ನೂ ಒಳಗೊಂಡ ಒಂದು ಹೊಸ ಮಿಶ್ರತಳಿಯ (ಹೈಬ್ರೀಡ್) ಸೃಷ್ಟಿಗೆ ನಾಂದಿಯಾಗುವುದೇ? ಕಾದು ನೋಡೋಣ.

ರಷ್ಯಾ-ಯುಕ್ರೇನ್ ಯುದ್ಧ ಆರಂಭವಾಗುತ್ತಿದ್ದಂತೆ, ಟಿವಿ ವಾಹಿನಿಗಳಿಗೆ ಅಂಟಿ ಕೊಂಡಿದ್ದ ಕೋವಿಡ್ ರೋಗ ತಾನೇತಾನಾಗಿ ಮಾಯವಾದರೂ ಕೆಲವರ ಮನಸ್ಸಿನಲ್ಲಿ ಕರೋನಾ ಭಯ' ಇನ್ನೂ ಇದೆ. ಅಂತಹವರು ಮನೆಯಿಂದ ಹೊರಹೋಗಲು ಭಯಪಟ್ಟು ಮುಖಭೇಟಿಯ ದಾಸೋಹಕ್ಕೆ ಗೈರಾಗುವರೇ? ಮುಖಾಮುಖಿ ದಾಸೋಹದಲ್ಲಿ ಊಟ, ಉಪಾಹಾರಗಳ ಆಕರ್ಷಣೆ ಕೆಲವರಿಗಾದರೆ ಇನ್ನು ಕೆಲವರಿಗೆ ಸಾರ್ವಜನಿಕ ಸ್ಥಳದಲ್ಲಿ ಮಾಸ್ಕ್ ತೆಗೆಯದೇ, ಆಹಾರ ಸೇವಿಸದೇ ದೂರವಿರುವುದು ಹೇಗೆ? ಎಂಬ ಚಿಂತೆ.

ಕೋವಿಡ್ ಕಾರಣದಿಂದ ಎರಡು ವರ್ಷ ಕಾಲ ಹೊರಜಗತ್ತಿನಿಂದ ಹೊರಗುಳಿದು ಮನೆ ಯಲ್ಲಿಯೇ ಕಛೇರಿ ಕೆಲಸ ನಿರ್ವಹಿಸುತ್ತಿದ್ದವರೆಲ್ಲ ಒಮ್ಮಿಂದೊಮ್ಮೆಲೇ, ಕೋವಿಡ್ ಮೇಲಿನ ಸೇಡು ತೀರಿಸಿಕೊಳ್ಳಲು ವಾರಾಂತ್ಯದಲ್ಲಿ ಸೇಡಿನ ಪ್ರವಾಸದತ್ತ (ರಿವೆಂಜ್ ಟೂರಿಸಂ) ಮುಖ ಮಾಡಿದ್ದಾರೆ. ಇದು ಪ್ರತಿ ತಿಂಗಳು ವಾರಾಂತ್ಯದಲ್ಲಿ ನಡೆಯುವ ನಮ್ಮ ಮುಖಾಮುಖಿ ದಾಸೋಹದ ಹಾಜರಾತಿಯ ಮೇಲೆ ದುಷ್ಪರಿಣಾಮ ಬೀರದಿರಲಿ ಎಂಬ ಆಶಯ ನಮ್ಮದು. ನೋಡಿಯೋ ದಾಸೋಹವನ್ನು ಪ್ರವಾಸ, ಓಡಾಟಗಳ ಮಧ್ಯೆಯೇ ಮೊಬೈಲಿನಲ್ಲಿ ಆಸ್ವಾದಿಸಲು ಸಾಧ್ಯವಿತ್ತು.

ಅದೇನೇ ಇರಲಿ, ಕಾಲ ಬದಲಾದಂತೆ, ವಿಜ್ಞಾನ ಬೆಳೆದಂತೆ, ಹೊಸ ಹೊಸ ಪ್ರಯೋಗ, ಚಿಂತನೆಗಳಿಗೆ ಸಮಾಜವು ತೆರೆದು ಅರಳಿದಂತೆ, ಅವಕ್ಕೆ ಪೂರಕವಾಗಿ ಸಕಾರಾತ್ಮಕವಾಗಿ ಸ್ಪಂದಿಸುವ ವೇದಿಕೆ ನಮ್ಮದು. ೨೦೦ನೆಯ ಸಾಹಿತ್ಯ ದಾಸೋಹ ಕಾರ್ಯಕ್ರಮವು ನಮ್ಮ ವೇದಿಕೆಯ ಇತಿಹಾಸದಲ್ಲೊಂದು ಮೈಲಿಗಲ್ಲು. ಎರಡು ವರ್ಷಗಳ ನಂತರ ವೇದಿಕೆಯ ಸದಸ್ಯರೆಲ್ಲರೂ ಒಂದೆಡೆ ಸೇರಿ, ಪರಸ್ಪರ ಭೇಟಿಯಾಗಿ, ಮುಕ್ತ ಚಿಂತನೆ ನಡೆಸಲು ದೊರೆಯುವ ಒಂದು ಅಪೂರ್ವ ಅವಕಾಶ. ಈ ಸಂಭ್ರಮದ ಹಬ್ಬದಲ್ಲಿ ವೇದಿಕೆಯ ಸದಸ್ಯರೆಲ್ಲರೂ ಹೆಚ್ಚು ಉತ್ಸಾಹದಿಂದ ಪಾಲ್ಗೊಂಡು ಮುನ್ನಡೆಯೋಣ.

ಶುಭಾಶಯ ಗಳೊಂದಿಗೆ,

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ

ನೋಡಿಯೋ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ....

ಮುಖಚಿತ್ರ : 'ಗುಲ್‌ಮೊಹರಿನ ತೊಂಗಲಲ್ಲಿ..' (ಕೃಪೆ: ವಾಟ್ಸಾಪ್)

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ನೋಡಿಯೋ ಸಾಹಿತ್ಯ ದಾಸೋಹ ೧೯೯

ಕಾರ್ಯಕ್ರಮ ವರದಿ : ಹು.ವಾ.ಶ್ರೀಪ್ರಕಾಶ್

ದಿನಾಂಕ ೧೨ನೆಯ ಮಾರ್ಚ್ ೨೦೨೨ರಂದು ಶನಿವಾರ ಶ್ರೀಮತಿ ರೇಣುಕಾ ದೇಸಾಯಿಯವರ ಅಧ್ಯಕ್ಷತೆಯಲ್ಲಿ ೧೯೯ನೆಯ ಸಾಹಿತ್ಯ ದಾಸೋಹ ಕಾರ್ಯಕ್ರಮ ನಮ್ಮ ಅಂತರಜಾಲ ವೇದಿಕೆಯಲ್ಲಿ ಯಶಸ್ವಿಯಾಗಿ ಜರುಗಿತು.



ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿ ಅಧ್ಯಕ್ಷರನ್ನು ಪರಿಚಯಿಸಿದರು.

ಶ್ರೀಮತಿ ರೇಣುಕಾ ದೇಸಾಯಿಯವರು ಉತ್ತರ ಕರ್ನಾಟಕದ ಸುಸಂಸ್ಕೃತ ಕೃಷಿ ಕುಟುಂಬದ ಶ್ರೀ ಕೃಷ್ಣಮೂರ್ತಿ ಹಾಗೂ ಶ್ರೀಮತಿ ರುಕ್ಮಿಣಿಯವರ ಪುತ್ರಿ.. ವಿದ್ಯಾರ್ಥಿಯಾಗಿದ್ದಾಗಲೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಬ್ಯಾಂಕ್ ಅಧಿಕಾರಿಯಾಗಿ ನಿವೃತ್ತಿ ಹೊಂದಿರುವ ಇವರಿಗೆ ಕತೆ, ಕವನ, ಲೇಖನಗಳನ್ನು ಬರೆಯುವ ಪ್ರವೃತ್ತಿ. ಇವರ ಕವನಕ್ಕೆ ೨೦೧೯ರಲ್ಲಿ ಕರ್ನಾಟಕ ಲೇಖಕಿಯರ ಸಂಘದ ಬಹುಮಾನ ಬಂದಿದೆ. ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲೂ ಇವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು, ಹಿಂದೂ ಸೇವಾ ಪ್ರತಿಷ್ಠಾನದ ವಿಕಲಚೇತನ ಮಕ್ಕಳ ಶಾಲಾ ಸಮಿತಿಯ ಸಹಕಾರ್ಯದರ್ಶಿಯಾಗಿ, ಕರ್ನಾಟಕ ಲೇಖಕಿಯರ ಸಂಘದ ಖಜಾಂಚಿಯಾಗಿ ಹಾಗೂ ನಮ್ಮ ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಾಪ್ ವೇದಿಕೆಯ ಸಂಚಾಲಕರಲ್ಲಿ ಒಬ್ಬರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಓರ್ವ ಗೃಹಿಣಿಯಾಗಿ, ಬ್ಯಾಂಕ್ ಉದ್ಯೋಗಿಯಾಗಿ ತನ್ನ ವಿವಿಧ

ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವುದರೊಂದಿಗೆ ಸಾಹಿತ್ಯಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾ ತಮ್ಮ ವ್ಯಕ್ತಿತ್ವಕ್ಕೆ ಇನ್ನಷ್ಟು ಮೆರಗು ತಂದುಕೊಂಡಿದ್ದಾರೆ ಎಂದು ಶ್ರಿಮತಿ ರೇಣುಕಾ ದೇಸಾಯಿಯವರನ್ನು ವೇದಿಕೆಗೆ ಪರಿಚಯಿಸಿ ಸ್ವಾಗತಿಸಿದರು.

ನಂತರ ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ಪ್ರಾಸ್ತಾವಿಕ ಮಾತುಗಳನ್ನಾಡಿ, ದಾಸೋಹ ಕಾರ್ಯಕ್ರಮವು ಇನ್ನೂರರ ಗಡಿ ತಲುಪುತ್ತಿದ್ದು, ಸಾಹಿತ್ಯ ಚಟುವಟಿಕೆ ಇಷ್ಟು ದೂರ ನಡೆದುಕೊಂಡು ಬಂದಿರುವುದು ಸಂತಸ ತರುತ್ತಿದೆ ಎಂದರು. ಕಳೆದ ಎರಡು ವರ್ಷಗಳಿಂದ ಅಂತರಜಾಲ ಸಭೆಗಳ ಮೂಲಕವೇ ಭೇಟಿಯಾಗುತ್ತಿದ್ದ ನಾವುಗಳು ಮುಂದಿನ ತಿಂಗಳು ನಡೆಯಲಿರುವ 'ಸಾಹಿತ್ಯ ದಾಸೋಹ ೨೦೦' ಕಾರ್ಯಕ್ರಮದಲ್ಲಿ ಮುಖಾಮುಖಿಯಾಗಿ ಭೇಟಿಯಾಗಲಿದ್ದೇವೆ. ಅಂದು ದಾಸೋಹ ಮಾತ್ರವಲ್ಲದೆ, ಎಚ್ಚೆಸ್ಕೆ ಬೆಳಕು ಕಾರ್ಯಕ್ರಮವೂ ನಡೆಯಲಿದೆ ಎಂದು ಹೇಳಿದರು.

ನಂತರ ಹದಿನೇಳು ಜನ ಬರಹಗಾರರು ತಮ್ಮ ಪ್ರಸ್ತುತಿಗಳನ್ನು ದಾಸೋಹದಲ್ಲಿ ಮಂಡಿಸಿದರು.

ಶ್ರೀ ಶೃಂಗೇಶ್ವರ ಶರ್ಮರವರು ಸಿದ್ಧಪಡಿಸಿದ ಸಾಹಿತ್ಯ ದಾಸೋಹ ೧೯೮ರ ಪಿಡಿಎಫ್ ಸಂಚಿಕೆಯನ್ನು ಬಿಡುಗಡೆ ಮಾಡಿದ ಶ್ರೀಮತಿ ರೇಣುಕಾ ದೇಸಾಯಿಯವರು ಮುಖಪುಟವನ್ನು ವಿಶೇಷವಾಗಿ ಪ್ರಶಂಸಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ರೇಣುಕಾ ದೇಸಾಯಿಯವರು ದಾಸೋಹದಲ್ಲಿ ಪ್ರಸ್ತುತಪಡಿಸಲಾದ ಎಲ್ಲ ಬರಹಗಳನ್ನು ವಿಶ್ಲೇಷಿಸಿ ಮಾತನಾಡಿದರು. (ಅಧ್ಯಕ್ಷರ ಅನಿಸಿಕೆಗಳ ಪೂರ್ಣ ಪಾಠ ಈ ಪಿಡಿಎಫ್ ಸಂಚಿಕೆಯ ಕೊನೆಯಲ್ಲಿ ಲಭ್ಯವಿದೆ. ಸದಸ್ಯರು ಗಮನಿಸಬಹುದು)

ಕೊನೆಯಲ್ಲಿ ಸಾಹಿತ್ಯ ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್.ಮಹಾಬಲರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀಮತಿ ರೇಣುಕಾ ದೇಸಾಯಿಯವರಿಗೆ, ದಾಸೋಹದಲ್ಲಿ ಪಾಲ್ಗೊಂಡ ಎಲ್ಲ ಪ್ರಸ್ತುತಿಕಾರರಿಗೆ, ಹಾಗೂ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.

*****

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ


ಚೆನ್ನಭೈರಾದೇವಿ (ಕಾಳುಮಣಸಿನ ರಾಣಿಯ ಅಕಳಂಕ ಚರಿತೆ)

ಕಾದಂಬರಿಕಾರ ಡಾ ಗಜಾನನ ಶರ್ಮ ಅವರೊಡನೆ ಸಂವಾದ

ಕಾರ್ಯಕ್ರಮ ವರದಿ – ಹು.ವಾ.ಶ್ರೀಪ್ರಕಾಶ್

ಇತ್ತೀಚೆಗೆ ಬಿಡುಗಡೆಯಾಗಿ ಬಹುಚರ್ಚಿತವಾಗುತ್ತಿರುವ ಕಾದಂಬರಿ 'ಚೆನ್ನಭೈರಾದೇವಿ (ಕಾಳುಮಣಸಿನ ರಾಣಿಯ ಅಕಳಂಕ ಚರಿತೆ)'. ಕಾದಂಬರಿಯ ಕರ್ತೃ ಡಾ.ಗಜಾನನ ಶರ್ಮ ಅವರಿಂದ ಕೃತಿ ರಚನೆಯ ಹಿನ್ನೆಲೆ ಮತ್ತು ಅನುಭವಗಳ ಬಗ್ಗೆ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ನೋಡಿಯೋ ಸಾಹಿತ್ಯ ವೇದಿಕೆಯು ೨೦ನೆಯ ಮಾರ್ಚ್ ೨೦೨೨ರಂದು ಭಾನುವಾರ ಸಂಜೆ ೫.೦೦ ಗಂಟೆಗೆ ಅಂತರಜಾಲ ಮುಖೇನ ಏರ್ಪಡಿಸಿತ್ತು.

ಶ್ರೀಮತಿ ಮಾಲತಿ ಶ್ರೀನಿವಾಸನ್‌ರವರು ಪ್ರಾರ್ಥನಾ ಗೀತೆಯಾಗಿ 'ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ' ಎಂಬ ಶ್ರೀ ಗಜಾನನ ಶರ್ಮರವರ ರಚನೆಯನ್ನೇ ಭಾವಪೂರ್ಣವಾಗಿ ಹಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀ ಎನ್.ವಿ.ರಘುರಾಂರವರು ಕಾರ್ಯಕ್ರಮವನ್ನು ವೀಕ್ಷಿಸುತ್ತಿರುವ ಎಲ್ಲರನ್ನೂ ಸ್ವಾಗತಿಸಿ ಶ್ರೀ ಗಜಾನನ ಶರ್ಮ ಅವರನ್ನು ಸಭೆಗೆ ಪರಿಚಯಿಸಿದರು.



ಶರಾವತಿ ವಿದ್ಯುತ್ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಶಾಲೆಯೇ ಇಲ್ಲದಿರುವ ಹಳ್ಳಿಯೊಂದರಲ್ಲಿ ೨೨, ಫೆಬ್ರವರಿ, ೧೯೫೪ ರಂದು ಜನಿಸಿದ ಶರ್ಮರವರು, ಮೊದಲೆರಡು ವರ್ಷ ವಿದ್ಯಾಭ್ಯಾಸದಿಂದ ವಂಚಿತರಾಗಿ ಕೊನೆಗೆ

ಸಾಗರದ ಪರಿಚಿತರೊಬ್ಬರ ಮನೆಗೆ ಬಂದು ನೇರವಾಗಿ ಮೂರನೆಯ ತರಗತಿ ಸೇರುತ್ತಾರೆ. ಆ ನಂತರ ಪ್ರತಿನಿತ್ಯ ತನ್ನ ಮನೆಯಿಂದ ಸುಮಾರು ನಾಲ್ಕು ಮೈಲಿ ನಡೆದು ಹೋಗಿ ಜೋಗದ ಪ್ರೌಢಶಾಲೆಯಲ್ಲಿ ಓದಿ, ನ್ಯಾಷನಲ್ ಮೆರಿಟ್ ಸ್ಕಾಲರ್ಶಿಪ್ ಪಡೆಯುತ್ತಾರೆ. ದಾವಣಗೆರೆಯ ಬಿ.ಡಿ.ಟಿ.ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಷಯದಲ್ಲಿ ಪದವಿ ಪಡೆದು, ಅಂದಿನ ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ (ಕೆ.ಇ.ಬಿ.) ಉದ್ಯೋಗ ಗಳಿಸುತ್ತಾರೆ. ವಿದ್ಯುತ್ ಜಾಲ ರಕ್ಷಣೆಯ ವಿಷಯದಲ್ಲಿ ವಿಶೇಷವಾಗಿ ಅಧ್ಯಯನ ಮಾಡಿದ ಅವರು ಸಂಸ್ಥೆಯ ವತಿಯಿಂದ ಮೈಸೂರಿನ ಎನ್.ಐ.ಇ. ಇಂಜಿನಿಯರಿಂಗ್ ಕಾಲೇಜಿಗೆ ನಿಯೋಜನೆಗೊಂಡು ಎಂ.ಟೆಕ್ ಪದವಿಯನ್ನು ಪಡೆದಿದ್ದಾರೆ. ಕಾರ್ಯಪಾಲಕ ಅಭಿಯಂತರರಾಗಿದ್ದಾಗ ತಾಳಗುಪ್ಪದ ೪೦೦ ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆಯ ಜವಾಬ್ದಾರಿ ಯನ್ನು ಸಮರ್ಥವಾಗಿ ನಿರ್ವಹಿಸಿರುವರಲ್ಲದೆ, ಅಂದಿನ ಕರ್ನಾಟಕ ಸರ್ಕಾರದ ಇಂಧನ ಸಚಿವರಿಗೆ ತಾಂತ್ರಿಕ ಸಲಹೆಗಾರರಾಗಿಯೂ ಎರಡು ವರ್ಷ ಕೆಲಸ ಮಾಡಿದ್ದಾರೆ. ತಮ್ಮ ತಾಂತ್ರಿಕ ನಿಪುಣತೆಯಿಂದ ವೃತ್ತಿ ಧರ್ಮಕ್ಕೆ ಮತ್ತು ಸಂಸ್ಥೆಗೆ ನಿಷ್ಠಾವಂತ ಅಭಿಯಂತರರಾಗಿ ಸುಮಾರು ೩೫ ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ವೃತ್ತಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಅಧೀಕ್ಷಕ ಅಭಿಯಂತರಾಗಿ ನಿವೃತ್ತಿ ಹೊಂದಿರುವ ಶ್ರೀ ಗಜಾನನ ಶರ್ಮರು ಪ್ರವೃತ್ತಿಯಲ್ಲಿ ನಟ, ನಾಟಕಕಾರ, ನಿರ್ದೇಶಕ, ಚಲನಚಿತ್ರ ಸಂಭಾಷಣಾಕಾರ, ಸಾಹಿತಿಯಾಗಿದ್ದಾರೆ. ಕೆಲಸಕ್ಕೆ ಸೇರಿದ ಪ್ರಾರಂಭದ ದಿನಗಳಲ್ಲಿ ಜೋಗದ ಮಿತ್ರ ಮಂಡಲಿಯಲ್ಲಿ ಸ್ವತಃ ನಾಟಕಗಳನ್ನು ಮಾಡುವುದಲ್ಲದೆ ಸಣ್ಣ ಮಕ್ಕಳಿಂದಲೂ ನಾಟಕಗಳನ್ನು ಆಡಿಸುತ್ತಾ, ೧೦ಕ್ಕೂ ಹೆಚ್ಚು ಮಕ್ಕಳ ನಾಟಕಗಳನ್ನು ಬರೆದಿದ್ದಾರೆ. ಮುಳುಗಡೆ ಸಮಸ್ಯೆಯನ್ನು ಕುರಿತ 'ಬೆಳ್ಳಿ ಬೆಳಕಿನ ಹಿಂದೆ' ಹಾಗೂ 'ನಾಣೀ ಭಟ್ಟನ ಸ್ವರ್ಗದ ಕನಸು', 'ಗೊಂಬೆ ರಾವಣ', 'ಮೃಗ ಮತ್ತು ಸುಂದರಿ', 'ಹಂಚಿನ ಮನೆ ಪರಸಪ್ಪ', 'ಪುಸ್ತಕ ಪಾಂಡಿತ್ಯ', 'ಕನ್ನಂಬಾಡಿ ಕಟ್ಟದಿದ್ದರೆ', 'ದ್ವಂದ್ವ ದ್ವಾಪರ' ಮುಂತಾದ ನಾಟಕಗಳು ಪ್ರಕಟವಾಗಿವೆ.

ಮೈಸೂರು ರಾಜ್ಯ ಕಂಡ ಶ್ರೇಷ್ಠ ದಿವಾನರಾದ ಸರ್ ಎಂ.ವಿಶ್ವೇಶ್ವರಯ್ಯನವರ ವೃತ್ತಿ ಜೀವನದ ಆತ್ಮಕಥೆಯನ್ನು ಕನ್ನಡದಲ್ಲಿ 'ನನ್ನ ವೃತ್ತಿಜೀವನದ ನೆನಪುಗಳು' ಎಂದು ಪ್ರಕಟಿಸಿರುವರಲ್ಲದೆ, ಇನ್ನೊಬ್ಬ ಶ್ರೇಷ್ಠ ದಿವಾನರಾಗಿದ್ದ ಶ್ರೀ ಮಿರ್ಜಾ ಇಸ್ಮಾಯಿಲ್‌ರವರ "ಮೈ ಪಬ್ಲಿಕ್ ಲೈಫ್" ಪುಸ್ತಕವನ್ನೂ ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ.

ಮೈಸೂರಿನಲ್ಲಿ ಎನ್.ಐ.ಇ. ಸೇರಿದಾಗ ಸಾಹಿತ್ಯಾಭ್ಯಾಸದತ್ತ ಆಕರ್ಷಿತರಾಗಿ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಎಂ.ಎ. ಪದವಿ ಪಡೆದ ಗಜಾನನ ಶರ್ಮರು, ನಂತರ 'ಕನ್ನಡದಲ್ಲಿ ಮಕ್ಕಳ ನಾಟಕ ಮತ್ತು ರಂಗಭೂಮಿ' ಎಂಬ ಮಹಾಪ್ರಬಂಧಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಈ ಮಹಾಪ್ರಬಂಧ ವನ್ನು ಅಕ್ಷರ ಪ್ರಕಾಶನ ಪ್ರಕಟಿಸಿದೆ.

ಹಿಮಾಲಯವನ್ನು ಪ್ರೀತಿಸುವ ಇವರು, 'ಕೈಲಾಸ ಮಾನಸ' ಮತ್ತು 'ಗೋಮುಖ-ಕರಗಿ ಹೋಗುವ ಮುನ್ನ ಕಣ್ತುಂಬಿ ಕೊಳ್ಳೋಣ' ಎಂಬ ಪ್ರವಾಸ ಕಥನ ಪ್ರಕಟಿಸಿದ್ದಾರೆ. 'ಕಾಡು ಕಣಿವೆಯ ಹಾಡುಹಕ್ಕಿ ಗರ್ತಿಕೆರೆ ರಾಘಣ್ಣ' ಇವರ ಇನ್ನೊಂದು ಮಹತ್ತರ ಕೃತಿ. ಶರಾವತಿ ಯೋಜನೆಯ ಸುತ್ತಮುತ್ತಲೂ ಬದುಕಿದ ಜನರ ಕಥನ "ಪುನರ್ವಸು" ಇವರ ಮೊದಲ ಕಾದಂಬರಿ. ಶ್ರೀ ಗಿರೀಶ್ ಕಾಸರವಳ್ಳಿಯವರ 'ನಾಯಿ ನೆರಳು' ಚಲನಚಿತ್ರಕ್ಕೆ ಸಂಭಾಷಣೆ ಬರೆದಿರುವ ಶ್ರೀ ಗಜಾನನ ಶರ್ಮ ಅವರು, 'ದ್ವೀಪ' ಚಲನಚಿತ್ರಕ್ಕೂ ಶ್ರೀ ಜಯಂತ ಕಾಯ್ಕಿಣಿಯವರ ಜೊತೆಗೂಡಿ ಸಂಭಾಷಣೆ ಬರೆದಿದ್ದಾರೆ.

'ಚೆನ್ನಭೈರಾದೇವಿ–ಕರಿಮೆಣಸಿನ ರಾಣಿಯ ಅಕಳಂಕ ಚರಿತೆ'ಯು ಶ್ರೀ ಗಜಾನನಶರ್ಮರ ಎರಡನೆಯ ಕಾದಂಬರಿ. ಈಗಾಗಲೇ ಇದರ ನಾಲ್ಕನೆಯ ಆವೃತ್ತಿಯೂ ಪ್ರಕಟವಾಗಿದೆ. ಬಾಲ್ಯದಲ್ಲಿ ಕೇಳಿದ್ದ ರಾಣಿ ಚೆನ್ನಭೈರಾದೇವಿಯ ಬಗ್ಗೆ ಗಜಾನನ ಶರ್ಮರಿಗೆ ಕುತೂಹಲ ಮೂಡಿ ಬಹಳಷ್ಟು ಸಂಶೋಧನೆ ನಡೆಸಿ, ಚರಿತ್ರೆಯ ಎಳೆಗಳಿಂದ ಈ ರಂಗೋಲಿ ರಚಿಸಿದ್ದಾರೆ. ಈ ರಂಗೋಲಿಯಲ್ಲಿ ರಾಣಿಯಾಗಿ, ವೀರವನಿತೆಯಾಗಿ, ತಾಯಿಯಾಗಿ, ವಿರಾಗಿಯಾಗಿ ನಾಲ್ಕು ದಿಕ್ಕಿನಿಂದಲೂ ಆಕೆಯೇ ಕಾಣಿಸಿಕೊಳ್ಳುತ್ತಾಳೆ. ಕೃತಿಯೊಂದು ಸಮಾಜದ ಮೇಲೆ ಎಂತಹ ಪರಿಣಾಮ ಬೀರಬಹುದು ಎನ್ನುವುದಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆಯವರು ಹೊನ್ನಾವರದ ಬಳಿ ಚೆನ್ನಭೈರಾದೇವಿಯ ಬಗ್ಗೆ ಒಂದು ಥೀಮ್‌ಪಾರ್ಕ್ ಮಾಡಹೊರಟಿರುವುದೇ ಸಾಕ್ಷಿ ಎಂದು ಶ್ರೀ ರಘುರಾಂ ಅವರು, ಡಾ.ಗಜಾನನ ಶರ್ಮರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

ನಂತರ ತಮ್ಮ ಮಾತುಗಳನ್ನು ಆರಂಭಿಸಿದ ಶ್ರೀ ಗಜಾನನ ಶರ್ಮರವರು, ಸಮನ್ವಯ ಸಮಿತಿಯ ಈ ವೇದಿಕೆಯಲ್ಲಿ ಚನ್ನಭೈರಾದೇವಿ ಕೃತಿಯ ಬಗ್ಗೆ ಹಲವರು ಕವನ, ಲೇಖನಗಳನ್ನು ಬರೆದು ನನ್ನನ್ನು ಪುಳಕಗೊಳ್ಳುವಂತೆ ಮಾಡಿದ್ದಾರೆ ಎಂದು ಹೇಳಿ, ಕಾದಂಬರಿ ಮೂಡಿದ ಬಗೆಯನ್ನು ಮುಕ್ತವಾಗಿ, ಸ್ವಾರಸ್ಯಕರವಾಗಿ ಹಂಚಿಕೊಂಡರು. ಕಾದಂಬರಿ ರಚನೆಯ ಕುರಿತು ಅವರು ವ್ಯಕ್ತಪಡಿಸಿದ ಕೆಲವು ಮುಖ್ಯ ಆಂಶಗಳು ಹೀಗಿವೆ:

- ಚೆನ್ನಭೈರಾದೇವಿಯ ಕಾಲಘಟ್ಟದ ಚರಿತ್ರೆಯ ಕುರಿತು ಮಾತಾಡುವಾಗ ಬಹಳ ಸೂಕ್ಷ್ಮವಾಗಿರಬೇಕು. ಈಕೆಯ ಬಗ್ಗೆ ಚರಿತ್ರೆ ಬಿಚ್ಚಿಡುವುದಕ್ಕಿಂತ ಮುಚ್ಚಿಟ್ಟಿರುವುದೇ ಹೆಚ್ಚು.
- ಕ್ರಿ.ಶ. ೧೫೫೨ರಿಂದ ೧೬೦೬ರವರೆಗೆ ಇಂದಿನ ಉತ್ತರ ಕನ್ನಡ ಜಿಲ್ಲೆಯ ನಗಿರೆ ಮತ್ತು ಹಾಡುವಳ್ಳಿಗಳ ರಾಣಿಯಾಗಿ ೫೪ ವರ್ಷಗಳ ಕಾಲ ಚೆನ್ನಭೈರಾದೇವಿ ರಾಜ್ಯಭಾರ ಮಾಡಿದ್ದಳು. ಹೊನ್ನಾವರ ತಾಲ್ಲೂಕಿನ ಜೋಗ ಜಲಪಾತದ ಬಳಿಯ ಗೇರುಸೊಪ್ಪೆ ಇವಳ ರಾಜ್ಯದ ಭಾಗವಾಗಿತ್ತು
- ದಕ್ಷಿಣ ಕೊಂಕಣ ಮತ್ತು ಮಲೆನಾಡನ್ನು ೫೪ ವರ್ಷಗಳ ಕಾಲ ಆಳಿದ ರಾಣಿ ಇತ್ತೀಚಿನವರೆಗೂ ಅಪರಾಚಿತಳಾಗೇ ಉಳಿದಿದ್ದಳು.
- ಈಕೆಯು ವಿಜಯನಗರದ ಚಕ್ರವರ್ತಿಗಳ ಮಹಾ ಮಾಂಡಳೀಕಳಾಗಿದ್ದವಳು.
- ಪ್ರಜೆಗಳ ಬದುಕಿನ ಸುಖ, ನೆಮ್ಮದಿಯು ರಾಜ್ಯ ವಿಸ್ತರಣೆಗಿಂತ ಮುಖ್ಯ ಎಂದು ತಿಳಿದಿದ್ದ ಈಕೆ, ಸರ್ವ ಜನಾಂಗವನ್ನೂ ಸಮಾನತೆಯಿಂದ ಕಂಡು, ದತ್ತಿ ದಾನ ಕೊಟ್ಟು ತನ್ನ ರಾಜ್ಯದಲ್ಲಿ ಧರ್ಮ ಸಮನ್ವಯತೆ ಕಾಪಾಡಿದವಳಲ್ಲದೆ ತಾನಾಗಿಯೇ ಯಾರೊಬ್ಬರ ಮೇಲೂ ಯುದ್ಧ ಘೋಷಿಸದೆ, ಆಕ್ರಮ ಮಾಡಿದವರಿಗೆ ತಲೆ ತಗ್ಗಿಸದೇ ಎಲ್ಲ ಸವಾಲುಗಳನ್ನೂ ಎದುರಿಸಿದ ದಿಟ್ಟ ಮಹಿಳೆ.
- ಗೋವೆಯಲ್ಲಿ ಇನಾಕ್ವ್ ಬಂದಾಗ ಪರಂಗಿಗಳ ಹಿಂಸೆ ಅತಿಯಾಗಿ ಜನ ಬೇರೆ ರಾಜ್ಯಗಳಿಗೆ ವಲಸೆ ಹೋದರು. ಆಗ ವಲಸೆ ಬಂದ ಸಾರಸ್ವತ ಸಮಾಜದವರಿಗೆ ಆಶ್ರಯವನ್ನೂ, ವೃತ್ತಿಯನ್ನೂ ನೀಡಿ 'ಅವ್ವರಸಿ' ಎನಿಸಿಕೊಂಡಳು. ಜನತೆ ರಾಣಿಯನ್ನು ಪ್ರೀತಿಯಿಂದ 'ಅವ್ವರಸಿ ಸಣ್ಣಮ್ಮ' ಎಂದು ಸಂಬೋಧಿಸುತ್ತಿದ್ದರು.
- ದಾಲ್ಚಿನ್ನಿ, ಬೆಲ್ಲ, ಕೆಂಪಕ್ಕಿಯನ್ನು ನಿರ್ಯಾತ ಮಾಡಿ ಅಪಾರ ಸಂಪತ್ತುಗಳಿಸಿದ ಆಕೆ ಪೋರ್ಚುಗೀಸರೊಂದಿಗೇ ವ್ಯಾಪಾರ ಕುದುರಿಸಿದ, ತನ್ನ ಬುದ್ಧಿವಂತಿಕೆಯಿಂದ ಬಂಗಾರದ ಬದಲು ಬೆಳ್ಳಿಯ ವಿನಿಮಯಕ್ಕೆ ಒಪ್ಪಿದ ವ್ಯವಹಾರ ಚತುರೆ. .
- ಕಾಡು ಹಳ್ಳಿಯ ಹೆಣ್ಣು. ಯುರೋಪಿನೊಡನೆ ಕಾಳುಮೆಣಸಿನ ವ್ಯವಹಾರ ನಿರ್ದೇಶಿಸುತ್ತಿದ್ದುದು ಅಚ್ಚರಿಯೇ ಸರಿ. ಕಾಳುಮೆಣಸಿನ ಬೆಲೆ ಕುಸಿದಾಗ ಬಿಳಿಮೆಣಸು ಮಾಡುವ ತಾಂತ್ರಿಕತೆಯನ್ನು ಅನುಷ್ಠಾನಗೊಳಿಸಿ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿದ ಈಕೆ 'ಕರಿಮೆಣಸಿನ ರಾಣಿ' ಎಂದೇ ಪ್ರಸಿದ್ಧಳಾಗಿದ್ದಳು.

- ಇಂತಹ ಹಲವು ಸಾಧನೆಗೈದ ರಾಣಿಯನ್ನು ಇತಿಹಾಸ ಏಕೆ ಮರೆಯಿತು ಎಂಬುದು ಶೇಷಪ್ರಶ್ನೆ. ಹೆಣ್ಣು ಎಂಬ ಕಾರಣಕ್ಕೋ ಅಥವಾ ಜೈನ ಸಮುದಾಯದ ಹೆಣ್ಣಾಗಿದ್ದಕ್ಕೋ, ಉತ್ತರ ಕನ್ನಡದವಳಾಗಿದ್ದಕ್ಕೋ, ಶರಾವತಿ ಕಣಿವೆ ಆಳಿದವಳೆಂದೋ. . . ಹೀಗೆ ಹಲವು ಪ್ರಶ್ನೆಗಳು ಮೂಡುತ್ತವೆ.
- ಇಡೀ ಪ್ರಾಂತ್ಯವು ಆಕೆಯನ್ನು ತಾಯಿಯ ಸಮಾನವಾಗಿ ಕಂಡಿತ್ತು. ವಿದೇಶಿಯನೊಬ್ಬ ತನ್ನ ಬರಹದಲ್ಲಿ ರಾಣಿಯ ನೈತಿಕತೆಯ ಪ್ರಶ್ನೆ, ಚಾರಿತ್ರ್ಯವಧೆಯ ಬಗ್ಗೆ ಹೇಳಿರುವುದು ಬಿಟ್ಟರೆ ಬೇರೆಲ್ಲೂ ಈಕೆಯ ಬಗ್ಗೆ ಕೆಟ್ಟ ಅಭಿಪ್ರಾಯಗಳಿಲ್ಲ
- ಛಲದಿಂದ ಮೆರೆದ ರಾಣಿಯನ್ನು ಸೋಲಿಸಿದ ವಿವರಗಳು 'ಕೆಳದಿಯ ನೃಪವಿಜಯ' ದಲ್ಲಿವೆ.
- ಕೆಳದಿಯ ಅರಸರು ಕೊನೆಯಲ್ಲಿ ಈಕೆಯನ್ನು ವಂಚನೆಯಿಂದ ಗೆದ್ದು ಇಕ್ಕೇರಿಯ ಸೆರೆಮನೆಯಲ್ಲಿರಿಸಿದಾಗ ವಿರಾಗಿಯ ಬದುಕು ಬದುಕಿದ ಈ ರಾಣಿ ಅವಿವಾಹಿತೆ, ಜನಸಾಮಾನ್ಯರಂತೆ ಸರಳವಾಗಿ ಬದುಕಿದ ಜಿನಭಕ್ತೆ.
- ಪೋರ್ಚುಗೀಸರು ವಿಜೃಂಭಿಸುತ್ತಿದ್ದ ಕಾಲದಲ್ಲಿ ಅವರನ್ನು ಸೋಲಿಸಿದ ಇಬ್ಬರು ಮಹಿಳಾ ರಾಣಿಯರೆಂದರೆ ರಾಣಿ ಅಬ್ಬಕ್ಕ ಮತ್ತು ಚೆನ್ನಭೈರಾದೇವಿ.
- ಈಕೆಯ ಐತಿಹ್ಯದ ಬಗ್ಗೆ ಅಲ್ಲಲ್ಲಿ ಮುರಿದು ಬಿದ್ದ ಶಾಸನಗಳು, ದೇಗುಲ ಮತ್ತಿತರ ಕುರುಹುಗಳು ಮಾತ್ರ ಇಂದು ಕಾಣಸಿಗುತ್ತವೆ

ಹೀಗೆ ಚನ್ನಭೈರಾದೇವಿಯ ಚರಿತ್ರೆಯನ್ನು ಲೇಖಕ ಗಜಾನನ ಶರ್ಮರು ತೆರೆದಿಡುತ್ತಾ, ಅವರಿಗೆ ದೊರೆತ ಹಲವು ಕುರುಹುಗಳು ಮತ್ತು ಆಧಾರ ಗ್ರಂಥಗಳ ನೆರವಿನಿಂದ ಈ ಕೃತಿಯನ್ನು ರಚಿಸಿರುವುದಾಗಿ ತಿಳಿಸಿದರಲ್ಲದೆ, ಕ್ವೀನ್ ಎಲಿಜಬೆತ್ ಮತ್ತು ರಾಣಿ ಚೆನ್ನಭೈರಾದೇವಿಯ ಬದುಕಿನ ಹಲವು ಘಟನೆಗಳನ್ನು ಸಮೀಕರಿಸಿ ವಿವರಿಸಿದರು.

ಸುಮಾರು ಒಂದು ಗಂಟೆ ಕಾಲ ಸಭಿಕರೊಡನೆ ಸಂವಾದ ಕಾರ್ಯಕ್ರಮ ನಡೆಯಿತು.

ನಂತರ ಪ್ರಾಸ್ತಾವಿಕ ಮಾತುಗಳನ್ನಾಡಿದ ವೇದಿಕೆಯ ಸಂಚಾಲಕ ಶ್ರೀ ಬೆಂ.ಶ್ರೀ.ರವೀಂದ್ರರು ಬರುವ ಏಪ್ರಿಲ್ ೨ಳರಂದು ೨೦೦ನೇ ಸಾಹಿತ್ಯ ದಾಸೋಹದ ಜೊತೆಗೆ 'ಎಚ್ಚಸ್ಕೆ ಬೆಳಕು' ಕಾರ್ಯಕ್ರಮದ ಏಳನೇ ಆವೃತ್ತಿಯೂ ನಡೆಯಲಿದ್ದು, ಇದು ಅಂತರಜಾಲ ಆಧಾರಿತ ಕಾರ್ಯಕ್ರಮವಾಗಿರದೆ, ಸಭಾಗೃಹದಲ್ಲಿ ನಡೆಯುವ ಕಾರ್ಯಕ್ರಮ. ಸುಮಾರು ಎರಡು ವರ್ಷಗಳ ನಂತರ ಸದಸ್ಯರೆಲ್ಲರೂ ಮುಖಾಮುಖಿ ಭೇಟಿಯಾಗುವ ಅವಕಾಶ ದೊರೆಯಲಿದೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಕೋರಿದರು. .

ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಶ್ರೀ ಜಿ.ವಿ ಅರುಣರವರು, ಚನ್ನಭೈರಾದೇವಿ ಕೃತಿಯು, ಹಿಂದೆ ನಡೆದಿರಬಹುದಾದ ಘಟನೆಗಳ ಬಗ್ಗೆ ಓದುಗರಲ್ಲಿ ಆಸಕ್ತಿ ಮೂಡಿಸಿತ್ತು. 'ಚೆನ್ನಭೈರಾದೇವಿ ಎಂಬ ರಾಣಿ ಇದ್ದಳಂತೆ' ಎಂಬುದನ್ನು ಹುಡುಕಿಕೊಂಡು ಹೋಗಿ, ಸಂಶೋಧನೆ ಮಾಡಿದ ಲೇಖಕರು ರಾಣಿಯ ಅಕಳಂಕ ಚರಿತ್ರೆಯನ್ನು ಪೋಣಿಸಿಕೊಟ್ಟಿದ್ದಾರೆ. ಇದಕ್ಕಾಗಿ ಅವರು ಕ್ರಮಿಸಿದ ಪಯಣ ಕಾದಂಬರಿಯಷ್ಟೇ ರೋಚಕವಾಗಿತ್ತು. ಕಾದಂಬರಿಯ ಓದುಗರಿಗೆ ರಾಣಿಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕು ಎನಿಸಿದರೆ ಆಶ್ಚರ್ಯವಿಲ್ಲ. ಸಂವಾದದಲ್ಲಿಯೂ ಕೇಳುಗರ ಪ್ರಶ್ನೆಗಳಿಗೆ ಲೇಖಕರು ಅಪ್ಯಾಯಮಾನವಾಗಿ ಉತ್ತರಿಸಿದ್ದಾರೆ. ಈ ಕೃತಿ ಮೊದಲು ಇಂಗ್ಲೀಷ್, ಹಿಂದಿ ಹಾಗೂ ಕೊಂಕಣಿಗೆ ಭಾಷಾಂತರವಾಗಲಿ ಎಂದು ಆಶಿಸಿದರು.

"ಇನ್ನಷ್ಟು ಬೇಕೆನ್ನ ಓದಿಗೆ" ಎಂದು ಗಜಾನನ ಶರ್ಮರಿಗೆ ಹೇಳಿದ ಅರುಣರವರು, ಚಾರಿತ್ರಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಅಭಿನಂದನಾಪೂರ್ವಕ ವಂದನೆಗಳನ್ನು ಅರ್ಪಿಸಿದರು. ***

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಹೊಂಗೆ ಹೂವ ತೊಂಗಲಲ್ಲಿ – ಉಗಾದಿ ಉತ್ಸವ

ಕಾರ್ಯಕ್ರಮ ವರದಿ – ಹು.ವಾ.ಶ್ರೀಪ್ರಕಾಶ್

ದಿನಾಂಕ ೦೯.೦೪.೨೦೨೨ ರಂದು ಶನಿವಾರ ಸಂಜೆ ೬.೦೦ ಗಂಟೆಗೆ ಶುಭಕೃತ್ ನಾಮ ಸಂವತ್ಸರದ ಯುಗಾದಿಯ ಅಂಗವಾಗಿ ಡಿ.ವಿ.ಜಿಯವರ 'ಮಂಕುತಿಮ್ಮನ ಕಗ್ಗ'ದಿಂದ ಆಯ್ದ ಮುಕ್ತಕಗಳ ಗಾಯನ, ವ್ಯಾಖ್ಯಾನ' ಕಾರ್ಯಕ್ರಮನ್ನು ವೇದಿಕೆಯ ಸದಸ್ಯರಾದ ಶ್ರೀ ಎಂ.ಎಸ್.ರವಿಶಂಕರ್ ಹಾಗೂ ಶ್ರೀಮತಿ ಶೀಲಾ ಅರಕಲಗೂಡು ಅವರಿಂದ ಆಯೋಜಿಸಲಾಗಿತ್ತು.



ಅಂತರಜಾಲದ ಮುಖೇನ ನಡೆದ ಈ ಕಾರ್ಯಕ್ರಮದ ಆರಂಭದಲ್ಲಿ ಶ್ರೀಮತಿ ಮಂಗಳಾ ನಾಡಿಗ್‌ರವರು, ಶ್ರೀ ಬೆಂಶ್ರೀ ರವೀಂದ್ರರು ರಚಿಸಿದ 'ಇತ್ತ ಚೈತ್ರವು ಅತ್ತ ವೈಶಾಖವು' ಎಂಬ ಕವನವನ್ನು ಪ್ರಾರ್ಥನಾಗೀತೆಯಾಗಿ ಹಾಡಿದರು.

ಶ್ರೀ ಸುನೀಲ್ ಹಳೆಯೂರು ಅವರು ಎಲ್ಲರನ್ನೂ ಸ್ವಾಗತಿಸಿ, ಗಾಯನ ಮತ್ತು ವ್ಯಾಖ್ಯಾನ ಮಾಡಲಿರುವ ಅತಿಥಿಗಳನ್ನು ಸಭಿಕರಿಗೆ ಪರಿಚಯಿಸಿದರು. ಶ್ರೀ ಎಂ.ಎಸ್.ರವಿಶಂಕರ್‌ರವರು ಬೆಂಗಳೂರಿನ ಶಾರದಾದೇವಿ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ಆಂಗ್ಲ ಭಾಷಾ ಉಪನ್ಯಾಸಕರಾಗಿದ್ದು, ಸಂಗೀತ, ಕಲೆ, ಅನುವಾದ, ಚಿತ್ರಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿರುವರಲ್ಲದೆ, ತಮ್ಮ ಸಿರಿಕಂಠದಿಂದ ಮಂಕುತಿಮ್ಮನ ಕಗ್ಗದ ವಾಚನವನ್ನು ಬಹಳ ಸೊಗಸಾಗಿ ಮಾಡುತ್ತಾರೆ ಎಂದರು

ಶ್ರೀಮತಿ ಶೀಲಾ ಅರಕಲಗೂಡುರವರು ಬೆಂಗಳೂರಿನ ಪ್ರತಿಷ್ಠಿತ ಪ್ರಾರ್ಥನಾ ಶಾಲೆಯಲ್ಲಿ ಎರಡು ದಶಕಗಳ ಕಾಲ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ, ಸಹಸ್ರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದವರು. ಉತ್ತಮ ಲೇಖಕಿಯೂ ಆಗಿದ್ದಾರೆ. 'ತೊದಲು ಮಾತು' ಎಂಬ ಚೌಪದಿಗಳನ್ನು ರಚಿಸಿರುವ ಇವರು 'ಅಂಕುರವಿದು ಸಂಕುಲಕೆ' ಎಂಬ ಕವನ ಸಂಕಲನ ಹೊರತಂದಿದ್ದಾರೆ –ಎಂದು ಪರಿಚಯಿಸಿದರು

ನಂತರ ಪ್ರಾಸ್ತಾವಿಕ ಮಾತುಗಳನ್ನಾಡಿದ ಶ್ರೀ ಬೆಂ.ಶ್ರೀರವೀಂದ್ರರವರು ಏಪ್ರಿಲ್ ೨೪ರಂದು ನಡೆಯಲಿರುವ 'ಎಚ್ಚೆಸ್ಕೆ ಬೆಳಕು' ಹಾಗೂ ೨೦೦ನೇ ಸಾಹಿತ್ಯ ದಾಸೋಹದ ಬಗ್ಗೆ ವಿವರಣೆ ನೀಡಿದರು. ಕನ್ನಡ ಪರ ಹೋರಾಟಗಾರರಾದ ಹಿರಿಯ ಸಾಹಿತಿ ಶ್ರೀ ಪಿ.ವಿ.ನಾರಾಯಣರವರು ಅಂದಿನ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪ್ರಾ. ಎಚ್ಚೆಸ್ಕೆಯವರ 'ಬ್ಯಾಂಕಿಂಗ್ ಪ್ರಪಂಚ' ಸಂಪಾದಕೀಯ ಲೇಖನಗಳ ಸಂಗ್ರಹ ಹಾಗೂ ಐವತ್ತರ ಕಲರವ' ಮತ್ತು 'ಸಾಹಿತ್ಯ ದಾಸೋಹ ೧೯೯' ರ ಪಿಡಿಎಫ್ ಸಂಚಿಕೆಗಳು ಬಿಡುಗಡೆಯಾಗಲಿವೆ ಎಂದರು.

ನಂತರ ಮಂಕುತಿಮ್ಮನ ಕಗ್ಗ ವಾಚನ, ವ್ಯಾಖ್ಯಾನ ಕಾರ್ಯಕ್ರಮ ಆರಂಭವಾಯ್ತು. ಹೊಸ ವರ್ಷದ ಹೊಸತನ ಮುಂದಿನ ಯುಗಾದಿಯವರೆಗೂ ಮುಂದುವರೆಯಬೇಕು. ಪ್ರಕೃತಿಯಲ್ಲಿ ನಿರಂತರವಾಗಿ ಹೊಸತನದ ಈ ಸಂಭ್ರಮ ನಡೆಯುತ್ತಲೇ ಇರುತ್ತದೆ. ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಎಂಬ ಪೀಠಿಕೆಯೊಡನೆ ಶ್ರೀಮತಿ ಶೀಲಾ ಅರಕಲಗೂಡು ತಮ್ಮ ವಾಚನ ಆರಂಭಿಸಿದರು

ಶ್ರೀ ಎಂ.ಎಸ್.ರವಿಶಂಕರ್ ಅವರ ಕಗ್ಗದ ಗಾಯನವೂ ಬಹಳ ಮಧುರವಾಗಿತ್ತು. ಯುಗಾದಿ ಉತ್ಸವವಾದ ಕಾರಣ ಕಾಲಸೂಚಕ ಮುಕ್ತಕಗಳಿಗೆ ಆದ್ಯತೆ ನೀಡಲಾಗಿತ್ತು.

ಕಗ್ಗಗಳ ವ್ಯಾಖ್ಯಾನದ ಜೊತೆಗೇ, ಡಿವಿಜಿಯವರ ಬದುಕಿನ ಹಲವಾರು ಸ್ವಾರಸ್ಯಕರ ಪ್ರಸಂಗಗಳನ್ನು ಉದಾಹರಿಸುವುದರ ಮೂಲಕ ಶ್ರೀಮತಿ ಶೀಲಾ ಅರಕಲಗೂಡುರವರು ತಮ್ಮ ವ್ಯಾಖ್ಯಾನಕ್ಕೆ ಹೆಚ್ಚಿನ ಮೆರಗು ನೀಡಿದರು.

ಸುಮಾರು ಒಂದು ಗಂಟೆಗಳ ಕಾಲ ನಡೆದ ಕಾರ್ಯಕ್ರಮ ವೀಕ್ಷಕರಿಂದ ಅಪಾರ ಮೆಚ್ಚುಗೆ ಗಳಿಸಿತು.

ಕಾರ್ಯಕ್ರಮ ನಿರೂಪಣೆ ಮಾಡಿದ ಶ್ರೀ ಹು.ವಾ.ಶ್ರೀಪ್ರಕಾಶ್ ಎಲ್ಲರಿಗೂ ವಂದನಾರ್ಪಣೆ ಮಾಡಿದರು.

*****

ಹಲ್ಲಿದ್ದಾಗ ಕಡ್ಲೆ ಇಲ್ಲ, ಕಡ್ಲೆ ಇದ್ದಾಗ ಹಲ್ಲಿಲ್ಲ

- ಮಾಲತಿ ಶ್ರೀನಿವಾಸನ್

"ಹಲ್ಲಿದ್ದಾಗ ಕಡ್ಲೆ ಇಲ್ಲ ಕಡ್ಲೆ ಇದ್ದಾಗ ಹಲ್ಲಿಲ್ಲ" ಅನ್ನೋ ಗಾದೆ ಹಳೆಯದಾದರೂ, 'ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ' ಅನ್ನುವಂತೆ ಅನೇಕ ಬಾರಿ ಇದು ಎಷ್ಟು ನಿಜ ಅನಿಸುತ್ತೆ. ಜೀವನದಲ್ಲಿ ಒಮ್ಮೊಮ್ಮೆ ಇದ್ದದ್ದನ್ನು ಅನುಭವಿಸದೆ ಇಲ್ಲದ್ದಕ್ಕೆ ಕೊರಗೋ ಮನಸ್ಥಿತಿಯಲ್ಲಿ ಇಂತಹ ಮಾತು ಸತ್ಯ ಅನಿಸದೆ ಸಣ್ಣಸಣ್ಣ ತಿರುವುಗಳಲ್ಲಿ ಇದರ ನೆನಪಾಗಿ ನನ್ನ ಮನಸ್ಸನ್ನು ಚಿಂತನೆಗೆ ದೂಡಿದೆ.

ಹೀಗೆ ಒಮ್ಮೆ ಮನೆ ಎಲ್ಲ ಸ್ವಚ್ಛ ಮಾಡೋ ಅಭಿಯಾನ ತಿಂಗಳು ಎರಡು ತಿಂಗಳಿಗೊಮ್ಮೆ ತಲೆಗೆ ಹೊಕ್ಕಾಗ, ಒಂದು ದಿನ ಡ್ರಾಯರುಗಳನ್ನೆಲ್ಲ ಎಳೆದು ಒಳಗಿರುವ ಸಾಮಾನುಗಳನ್ನು ಹೊರಹಾಕಿ, ಜಿರಳೆ ಔಷಧಿ ಹೊಡೆಯುತ್ತಿದ್ದಾಗ ಕಣ್ಣಿಗೆ ಬಿದ್ದದ್ದು ತಲೆಕೂದಲು ಒಣಗಿಸಿಕೊಳ್ಳೋ ಹೇರ್ ಡ್ರೈಯರ್ ಮತ್ತು ಕೂದಲು ಸುರಳಿ ಸುತ್ತಿಕೊಳ್ಳದೇ ಸೀದಾಮಾಡಲು ಸಹಾಯವಾಗುವ ಹೇರ್ ಸ್ಟ್ರೈಟ್ನರ್. ಐದಾರು ವರ್ಷಗಳ ಹಿಂದೆ ಇವೆರಡನ್ನೂ ಮಗಳು, ಸೊಸೆ ತಂದುಕೊಟ್ಟಿದ್ದು. ಅದನ್ನ ನೋಡಿದಾಗೆಲ್ಲ ಕೈಯಲ್ಲಿ ಹಿಡಿದು ಜೋರಾಗಿ ನಗಬೇಕೆನಿಸಿತು. ಒಂದು ಕಾಲದಲ್ಲಿ ಜಡೆ ಸೊಂಟದಿಂದ ಕೆಳಗಿಳಿದು ಮಂಡಿ ಮುಟ್ಟೋ ಪ್ರಯತ್ನದಲ್ಲಿದ್ದ ದಟ್ಟ ಕಪ್ಪುರಾಶಿ. ನಾಗವೇಣಿ, ನೀಲವೇಣಿ ಅಂತ ರೇಗಿಸಿಕೊಂಡ ದಿನಗಳು. ನಡೆದಾಗ ಅತ್ತಿಂದಿತ್ತ, ಇತ್ತಿಂದತ್ತ ತೂಗಾಡುತ್ತ ಕಾಲೇಜಿನಲ್ಲಿ 'simple pendulum' ಅಂತ ಜೊತೆ ಓದುತ್ತಿದ್ದವರು ರೇಗಿಸಿದಾಗ ಕೋಪದ ಜೊತೆ ಖುಷಿನೂ ಆಗ್ತಾ ಇತ್ತು. ಆ ಕಾಲದಲ್ಲಿ ಈ ಉಪಕರಣಗಳೆಲ್ಲ ಇದ್ದರೂ ಕೊಳ್ಳೋ ಸ್ಥಿತೀಲಿ ನಾವಿರಲಿಲ್ಲ. ತಲೆಸ್ನಾನ ಮಾಡಿದ ದಿನ ಒಂದೇ ಫಜೀತಿ, ಒಂಬತ್ತು ಗಂಟೆಗೆ ಕಾಲೇಜು ಮುಟ್ಟೋ ಸಂಭ್ರಮದಲ್ಲಿ ಈ ಉದ್ದ ಕೂದಲು ಗಟ್ಟಿಯಾಗಿ ಹಣೆದು ಹೊರಟರೆ ಸಂಜೆ ಬಂದಾಗ ಅಜ್ಜಿ ನೆಗಡಿ ಆಗುತ್ತೆ ಅಂತ ಬಿಚ್ಚಿ ಘಂ ಅಂತ ಸಾಂಬ್ರಾಣಿ ಹೊಗೇಲಿ ಒಣಗಿಸುತ್ತಿದ್ದ ಉಪಚಾರ ಇನ್ನೂ ನೆನಪಿದೆ. ಹಾಗೇ ಬಿಟ್ಟ ದಿನ ತಲೆಭಾರ, ತಲೆನೋವು ಗ್ಯಾರಂಟಿ.

ಈಗ ಚಿತ್ರಣವೇ ಬೇರೆ. ಇಂದಿನ ಪೆಟ್ರೋಲ್-ಡೀಸೆಲ್ ಬೆಲೆಯಂತೆ ನನ್ನ ಜಡೆ ಮೇಲೆ ಏರಿ ಏರಿ ತಲೆಯಿಂದ ಹತ್ತು-ಹನ್ನೆರಡು ಇಂಚು ಕೆಳಗೆ. ತೆಳ್ಳನೆ ಪರದೆಯಂತಹ ಕೇಶರಾಶಿಗೆ ಇವುಗಳ ಅವಶ್ಯಕತೆಯೇ ಇಲ್ಲ, ತಲೆ ಸ್ನಾನ ಮಾಡಿದ ಹತ್ತು ನಿಮಿಷದಲ್ಲಿ ಹುಲ್ಲುರಾಶಿಯಂತೆ ತಾವೇ ಒಣಗುವಾಗ ಈ ಉಪಕರಣಗಳನ್ನು ನೋಡಿದಾಗೆಲ್ಲ ಜೀವನದ ವಿಪರ್ಯಾಸದ ಒಂದು ಚಿತ್ರ ಕಣ್ಣಮುಂದೆ.

ಇದೇ ಯೋಚನೆಯಲ್ಲಿ ಮನೇಲಿ ಕಣ್ಣು ಹಾಯಿಸಿದಾಗ ಗಮನ ಸೆಳೆದದ್ದು ನನ್ನ ಗ್ಯಾಸ್ ಸ್ಟೌವ್, ಓವನ್ ಜೊತೆ ಎಕ್ಸ್ಟ್ರಾ ಇರೋ ಒಲೆ. ದಶಕಗಳ ಹಿಂದೆ ತುಂಬು ಸಂಸಾರ, ಅತ್ತೆ, ಮಾವ, ಬಂದು ಹೋಗೋ ಜನ ಇದ್ದಾಗ, ಮಕ್ಕಳು ನಮ್ಮತ್ತೆ ಮನೇಲಿ ಸೀಮೆಎಣ್ಣೆ ಸ್ಟೋವ್ ಮೇಲೆ ಕೇಕು, ಬಿಸ್ಕತ್ತು ಮಾಡೋ ಸಂಭ್ರಮ ನೆನಪಾಯಿತು. ಅತ್ತೆ ಮಕ್ಕಳೊಡನೆ ಮಗುವಾಗಿ, ಅಗಲದ ಬಾಂಡ್ಲೆಲಿ ಮರಳು ಸುರಿದು ಮಾಡಿದ makeshift oven ಮೊದಲು ಸಿದ್ಧ.

ಮಗಳು ಅವರ ಸಹಾಯಕಿ ಹಾಜರ್. ಸಕ್ಕರೆಪುಡಿ, ಹಿಟ್ಟು, ಎಸ್ಸೆನ್ಸ್ ಎಲ್ಲ ಕಲಸಿ ಬೇಯಿಸಿದ ಕೇಕು ತಳಹತ್ತದಂತೆ ನೋಡುವುದೇ ಒಂದು ಮೋಜು. "ನಮ್ಮಜ್ಜಿ ಓವನ್ ಇಲ್ಲದೆ ಕೇಕ್ ಮಾಡ್ತಾರೆ ಗೊತ್ತಾ" ಅಂತ ಜಂಭವಾಗಿ ಎಲ್ಲರಿಗೂ ಕೇಕು ಚೂರು ಹಂಚುವಾಗ ಎಷ್ಟು ಖುಷಿ ಮಗಳ ಮುಖದಲ್ಲಿ. ಇಂದು ಭಾರಿ ಓವನ್, ರುಬ್ಬೊ ಮಿಕ್ಸಿ ಎಲ್ಲ ಮನೇಲಿ, ಆದರೆ ಹಿರಿಯರು ಹಿಂತಿರುಗದ ಸ್ಥಳದಲ್ಲಿ. ಮಕ್ಕಳು, ಮೊಮ್ಮಕ್ಕಳು ದೂರ, ಈ ವಿದ್ಯುತ್ ಚಾಲಿತ ಒವೆನ್ ಉಪಯೋಗಿಸಿ ಕೇಕು ಬಿಸ್ಕುತ್ತು ಅಂತ ಮಾಡಿದ್ದೇ ಇಲ್ಲ, ಬರಿ ತರಕಾರಿ ಬೇಯಿಸೋಕೆ ಅಥವಾ ಅಂಗಡಿಯಿಂದ ತಂದ ಬನ್ನು, ಪಿಜ್ಜಾ ಬಿಸಿ ಮಾಡೋಕೇ ಇದರ ಉಪಯೋಗ. ಹೆಚ್ಚು ತಿನ್ನೋಹಾಗಿಲ್ಲ, ಖಾಯಿಲೆಗಳ ಭಯ. ಎಂದೋ ಒಂದು ದಿನ ಬೇಕೆನಿಸಿದಾಗ ತಂದು ತಿನ್ನಲು ಊರು ತುಂಬ ಅಂಗಡಿಗಳು. ಶ್ರಮ ಯಾಕೆ ಅನಿಸೋದು ಸಹಜ ಅಲ್ಲವೇ? ಈ ವಯಸ್ಸಿನಲ್ಲಿ ಈ ಪರಿಸ್ಥಿತೀಲಿ ಹೊಳೆದಿದ್ದು - ಗಾದೆ ಸ್ವಲ್ಪ ಬದಲಾಯಿಸಿದರೆ, "ಕೇಕ್ ಮಾಡಿದಾಗ ಒವೆನ್ ಇಲ್ಲ, ಒವೆನ್ ಇದ್ದಾಗ ಕೇಕ್ ಮಾಡೋ ಹಂಗಿಲ್ಲ" ಅಂತ.

ಮನೇಲಿ ಸುತ್ತ ಕಣ್ಣು ಹಾಯಿಸಿದಾಗ ಬೀರು ತುಂಬಿದ್ದ ಪಿಂಗಾಣಿ ಪಾತ್ರೆಗಳು, ಕಪ್ಪುಗಳು, ತಾಟುಗಳು, ಮರದ ಬಣ್ಣಬಣ್ಣದ ಸೌಟುಗಳು, ಅನೇಕ ರೀತಿಯ ವಸ್ತುಗಳು. ಇವೆಲ್ಲ ಹಿಂದೆ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು. ಈಗ ಇರೋ ಇಬ್ಬರಿಗೆ, ಅಪರೂಪಕ್ಕೆ ಬರೋ ನೆಂಟರಿಗೆ ಕೂಡ ಇದು ಜಾಸ್ತಿನೇ. ಬರೀ ಪ್ರದರ್ಶನಕ್ಕಿಟ್ಟ ಭಾವ ತರುತ್ತೆ. ಎಸೆಯಲು ಮನಸ್ಸು ಒಪ್ಪುವುದಿಲ್ಲ, ಉಪಯೋಗಿಸಲು ಅವಕಾಶಗಳಿಲ್ಲ. ಇದು ಒಂದು ವಿಪರ್ಯಾಸವೇ ಸರಿ. ಈ ಜೀವನಾನೆ ಹೀಗೆಯೇ ಏನೋ. ಎಷ್ಟೇ ನಾವು ಇರೋದ್ರಲ್ಲಿ ಖುಷಿ ಕಾಣ್ತೀವಿ ಅಂತ ಮನಸ್ಸನ್ನು ನಿಯಂತ್ರಿಸಿದರೂ ಅದು ಇಲ್ಲದರೆಡೆಗೆ ಜಾರೋದು, ನಾವು ಹಿಂದೆ ಇದ್ದದ್ದನ್ನು ಪೂರ್ತಿ ಮನಸ್ಸಿನಿಂದ ಅನುಭವಿಸಿ ಸುಖಿಸಿದ್ದೇವೆಯೆ? ಇಂದಿರುವುದನ್ನು ಒಪ್ಪಿಕೊಂಡು ಸಂತೋಷದಿಂದ ಸ್ವೀಕರಿಸಿದ್ದೇವೆಯೆ? ಮುಂದಿನ ಜೀವನದ ಬಗ್ಗೆ ಆತಂಕದ ಮನದಿಂದ ದೂರವಿಟ್ಟಿದ್ದೇವೆಯೆ? - ನಮ್ಮನ್ನು ನಾವೇ ಆಗಾಗ್ಗೆ ಈ ನಿಟ್ಟಿನಲ್ಲಿ ಪ್ರಶ್ನಿಸಿಕೊಳ್ಳುತ್ತಿರಬೇಕು. ಈ ರೀತಿಯ ಚಿಂತನೆ ಜೀವನದ ಸತ್ಯತೆಯನ್ನು ತೆರೆದಿಡುತ್ತದೆ. ಇರುವುದನ್ನು ನೋಡಿ ಇಲ್ಲದರ ಕಡೆ ಮನ ಜಾರಲು ಬಿಡದೆ ಸಂತೃಪ್ತಿ, ಸಂಯಮದಿಂದ ಪಯಣ ಸಾಗಿಸಬಹುದೆ?

ಕಡಲೆ ಸಿಕ್ಕಾಗ ಹಲ್ಲಿಲ್ಲದಿದ್ದರೆ ಏನಂತೆ, ಕುಟ್ಟಿ ತಿನ್ನೋಣ ಅಥವಾ ಕೃತಕವಾದ ಗಟ್ಟಿ ಹಲ್ಲುಸೆಟ್ಟು ಹಾಕಿಸಿಕೊಂಡರಾಯ್ತು ಬಿಡಿ, ಸ್ವಲ್ಪ ಮಟ್ಟಿಗಾದರೂ ಹಳೆ ಗಾದೆಯನ್ನು ಸುಳ್ಳಾಗಿಸೋಣ. ಏನಂತೀರಾ?

*****

ಸಣ್ಣ ಕತೆ

ಹೊಂದಾಣಿಕೆ ಎಂಬ ಮರೀಚಿಕೆ

– ಎಲ್. ಗಿರಿಜಾ ರಾಜ್

(ಈ ಕತೆಯ ಬಗ್ಗೆ ಎರಡು ಮಾತು... ಪತ್ರ ಹೃದಯಕ್ಕೆ ಹತ್ರ. ಪತ್ರಗಳಿಂದಲೇ ಕತೆ ಸೃಷ್ಟಿ ಮಾಡುವ ಪ್ರಯತ್ನ ಇದು. ಇಮೇಲ್, ವಾಟ್ಸ್ ಆ್ಯಪ್, ಫೋನ್ ಇವೆಲ್ಲಕ್ಕಿಂತ ಪತ್ರದಲ್ಲಿ ಆಪ್ತವಾಗಿ ಹೃದಯ ಬಿಚ್ಚಿಡಬಹುದು. ಈ ಕತೆಯಲ್ಲಿ ಎರಡು ಮುಕ್ತಾಯ ಕೊಟ್ಟಿರುವುದು ಹೊಸತನಕ್ಕಾಗಿ).

ಮೊದಲ ಪತ್ರ

ಪ್ರಿಯ ಗೆಳತಿ ನಿರ್ಮಲ,

ನಾನು ಚೆನ್ನಾಗಿರುವೆ ಎಂದು ಹೇಗೆ ಹೇಳಲಿ? ನಿನ್ನ ಬಳಿ ನನ್ನೆದೆಯನ್ನು ಸುಡುತ್ತಿರುವ ನೋವನ್ನು ತೋಡಿಕೊಂಡರೆ ನನ್ನ ಮನ ಹಗುರಾಗುತ್ತದೆ. ನನ್ನ ಸ್ಥಿತಿ ಉತ್ತಮವಾಗಲು ನೀನೇನಾದರೂ ಸಲಹೆ ಸೂಚನೆ ನೀಡುವ ಹಾಗಿದ್ದರೆ ಕೊಡು ಗೆಳತಿ. ನಿನಗೆ ಗೊತ್ತಿರುವ ಹಾಗೆ ನಾನೇನೋ ಕುರುಡಿಯಲ್ಲ, ಕುಂಟಿಯಲ್ಲ. ತಕ್ಕಮಟ್ಟಿಗೆ ಚೆನ್ನಾಗಿಯೇ ಇದ್ದೇನೆ. ನನ್ನನ್ನು ಅಷ್ಟೊಂದು ಓದಿಸಿದ್ದರೂ ಗಂಡನ ಮನೆಯ ಅಡುಗೆಕೋಣೆಯಲ್ಲಿ ನನ್ನ ಜೀವನದ ಬಹುಭಾಗ ಕಳೆದುಹೋಗುತ್ತಿದೆ. ಹೋದರೆ ಹೋಗಲಿ, ಒಂದು ಸಂತೋಷ, ನೆಮ್ಮದಿ ಇದೆಯೇ? ನನ್ನಂಥವಳನ್ನು ಕಟುಕರ ಮನೆಗೆ ಕೊಟ್ಟ ಅಪ್ಪ-ಅಮ್ಮನನ್ನು ನಿಂದಿಸಲು ನನ್ನ ಮನಸ್ಸು ಒಪ್ಪುವುದಿಲ್ಲ. ಅವರು ಎಲ್ಲಿದ್ದರೂ ಚೆನ್ನಾಗಿರಲಿ.

ನನ್ನ ಗಂಡ ನನ್ನನ್ನು ಇಂದು ಚೆನ್ನಾಗಿ ಹೊಡೆದ. ಹೀಗೆ ಹೊಡೆಯುವವರನ್ನು ಕಂಡರೆ ನನಗೆ ಮೈಯೆಲ್ಲ ಉರಿಯುತ್ತದೆ. 'ನನಗೆ ಹಕ್ಕಿದೆ ನೀನು ನನ್ನ ಹೆಂಡತಿ' ಎನ್ನುತ್ತಾನೆ. ಹೊಡೆದದ್ದು ಎಂಥ ಸಣ್ಣ ಕಾರಣಕ್ಕೆ ಅಂತೀಯಾ? ಅವರ ತಾಯಿಗೆ ಬಡಿಸಿದ ಪಲ್ಯ ಕಡಿಮೆಯಾಯಿತೆಂದು. ಅವರು ಹೊಡೆದಾಗ ತುಂಬಾ ಸಂಕಟವಾಗುತ್ತದೆ ಕಣೆ, ಏಕೆ ಬದುಕಬೇಕು ಎನಿಸುತ್ತದೆ. ಮೂರುನಾಲ್ಕು ದಿನ ಅದನ್ನು ಮರೆಯುವುದಕ್ಕೇ ಆಗದೆ ಜೀವ ತಳಮಳಿಸುತ್ತದೆ. ಕಣ್ಣಿನಿಂದ ನಿರಂತರವಾಗಿ ಕಂಬನಿ ಸುರಿಯುತ್ತಿರುತ್ತದೆ. ಬಹಳ ಹೊತ್ತಾದ ನಂತರ ಸ್ವಲ್ಪ ಮೃದುವಾಗುತ್ತಾರೆ. ಒಂದೊಂದು ಸಲ ಒಂದು ವಾರವಾದರೂ ಮಾತನಾಡಿಸುವುದಿಲ್ಲ. ರಾತ್ರಿ ಬಳಿ ಬಂದಾಗ ತಪ್ಪಾಯಿತು ಅನ್ನುತ್ತಾರೆ, ಮೈಮೇಲೆ ಕೈ ಇಟ್ಟರೆ ಬೆಂಕಿ ಇಟ್ಟಂತೆ ಎನಿಸುತ್ತದೆ. ಮನಃಶಾಸ್ತ್ರದಲ್ಲಿ ನಾನು ಸ್ನಾತಕೋತ್ತರ ಪದವೀಧರೆ. ಆದರೆ ನಾನೇ ಮನೋರೋಗಕ್ಕೆ ಒಳಗಾಗುತ್ತೇನೇನೋ ಎನ್ನಿಸುತ್ತಿದೆ. ಪುಟ್ಟ ಅಶೋಕ ಇಲ್ಲದಿದ್ದರೆ ನಾನೆಂದೋ ಅವರನ್ನು ತೊರೆದು ಹೊರಟುಬಿಡುತ್ತಿದ್ದೆ. ಪ್ರಪಂಚ ವಿಶಾಲವಾಗಿದೆ. ಎಲ್ಲೋ ಬದುಕಬಹುದು ಅಲ್ಲವಾ?

ಹೆಣ್ಣಿನ ಶೋಷಣೆಗೆ ಕೊನೆಯಿಲ್ಲ, ಗಂಡ-ಹೆಂಡತಿಯನ್ನು ಪ್ರೀತಿಸುವುದು, ಹೂ ಮುಡಿಸುವುದು, ಸುಮಧುರವಾಗಿ ಅವಳೆದೆಗೆ ಪ್ರೀತಿದನಿಯ ತಂಪೆರೆಯುವುದು ಬರೀ ಸಿನಿಮಾ ದೃಶ್ಯಗಳೇನೋ! ನಿನಗೆ ಗೊತ್ತಿದೆ, ನಾನು ಶಾಯರಿಗಳನ್ನು ಬರೆಯುತ್ತಿದ್ದೆ. ಈಗ ನನ್ನ ಬದುಕಿನ ಬಗ್ಗೆಯೇ ಬರೆದುಕೊಳ್ಳಬೇಕಾಗಿದೆ.

'ಪ್ರೀತಿ ಎನ್ನುವುದು ಸುಮ ಕೋಮಲ ಹಕ್ಕಿ, ನೀನು ಬಿಗಿಯಾಗಿ ಹಿಡಿದರೆ ಸಾಯುತ್ತದೆ, ಎತ್ತರದಲ್ಲಿ ಮೃದುವಾಗಿ ಹಿಡಿದರೆ ಸ್ವಚ್ಛಂದ ಹಾರುತ್ತದೆ!'

ನನ್ನ ಪ್ರೀತಿ ಹಕ್ಕಿ ಇವರ ಕಠೋರ ಮುಷ್ಟಿಯಲ್ಲಿ ನರಳಾಡುತ್ತಿದೆ. ವಿವಾಹ ವಿಚ್ಛೇದನದ ಬಗ್ಗೆ ಯೋಚಿಸುತ್ತಿದ್ದೇನೆ. ಬದುಕು ತೀರಾ ಅಸಹನೀಯ ಅನ್ನಿಸಿದರೆ ಮಾಡಬೇಕೇನು? ಪತ್ರ ಬರೆ, ಗೆಳತಿ.

ಇಂತಿ ನಿನ್ನ ಪ್ರೀತಿಯ,

ಅಶಾ

**

ಎರಡನೇ ಪತ್ರ

(15 ದಿನಗಳ ನಂತರ)

ಪ್ರೀತಿಯ ಗೆಳತಿ ನಿಮ್ಮಿ,

ನಾನು ತುಂಬಾ ಚೆನ್ನಾಗಿದ್ದೀನಿ. ನೀನು ಹೇಗಿದ್ದೀಯಾ? ಹದಿನೈದು ದಿನಗಳ ಹಿಂದೆ ಇದ್ದ ಬೇಸರವೆಲ್ಲ ಓಡಿ ಹೋಯಿತು. ಈ ದೇವರ ಸೃಷ್ಟಿ ಎಷ್ಟೊಂದು ಸುಂದರ ಅನಿಸುತ್ತಿದೆ! ಈ ಬಂಧನವನ್ನು ಬಿಡಿಸಿಕೊಂಡು ಅಗಲುವುದು ಅಷ್ಟು ಸುಲಭವೇ? ನಾನೇಕೆ ಅಷ್ಟು ದೂರ ಯೋಚನೆ ಮಾಡಿದೆ ಎಂದು ಅಚ್ಚರಿಯಾಗುತ್ತಿದೆ! ಹೊಡೆದದ್ದಕ್ಕೆ ತಪ್ಪುಕಾಣಿಕೆ ಸಲ್ಲಿಸಿದ್ದಾರೆ ನನ್ನವರು! ಕೆನ್ನೆ ತುಂಬ ಮುತ್ತು ಕೊಟ್ಟು, ಎರಡು ಸುಂದರ ರೇಷ್ಮೆ ಸೀರೆಗಳನ್ನು ತೆಗೆದುಕೊಟ್ಟಿದ್ದಾರೆ. "ಸ್ವಲ್ಪ ಮುಂಗೋಪ ನನಗೆ, ಸ್ವಲ್ಪ ಅಡ್ಜಸ್ಟ್ ಮಾಡ್ಕೋ.. ನನ್ನ ಮುದ್ದಿನ ಮಡದಿ" ಎಂದರು ಗೊತ್ತಾ? ಸೀರೆಗಳು ಎಷ್ಟು ಚೆನ್ನಾಗಿವೆ ಗೊತ್ತಾ? ಒಂದು ತಿಳಿ ಆಕಾಶ ಬಣ್ಣದ ಒಡಲಿಗೆ ಕಪ್ಪು ಬಣ್ಣದ ದೊಡ್ಡ ಅಂಚಿನ ಝರಿ! ಇನ್ನೊಂದು ಗುಲಾಬಿ ಬಣ್ಣದ ಒಡಲಿಗೆ ನವಿಲು ಬಣ್ಣದ ಗ್ರಾಂಡ್ ಪಲ್ಲು! ನನ್ನ ಪುಟ್ಟ ಅಶೋಕನಿಗೆ ಹೊಸ ಬಟ್ಟೆಗಳು. "ಸಾರಿ ಕಣೆ, ಇನ್ನೊಂದ್ಸಲ ಹೊಡೆಯುವುದಿಲ್ಲ" ಅಂತ ತುಂಬಾ ಕೇಳಿಕೊಂಡರು. ಪಾಪ! ಅನ್ನಿಸಿತು.

ಅವರಮ್ಮ ಪಾಪ! ವಯಸ್ಸಾಗಿದೆ, ಇದ್ದುಕೊಳ್ಳಲಿ ಬಿಡು, ನಮ್ಮ ತಾಯಿಯ ಹಾಗಲ್ಲವಾ? ಒಂದೊಂದು ಸಲ ಗೊಣಗುಟ್ಟಿದರೂ, ಬೇಗ ಮರೆತುಬಿಡುತ್ತಾರೆ, ನಿನಗೆ ಈ ಸೀರೆ ಚೆನ್ನಾಗಿ ಕಾಣುತ್ತೆ, ಒಳ್ಳೆ ಗೊಂಬೆ ಹಾಗೆ ಮುದ್ದಾಗಿ ಕಾಣುತ್ತೀಯ ಅಂತೆಲ್ಲ ಹೊಗಳುತ್ತಾರೆ. ಇಂಥ ಬದುಕನ್ನು ಬೇಡವೆನ್ನಲೇ?

ಗೆಳತಿ, ನೀನು ಬರೆದಂತೆ ತುಂಬಾ ತಾಳ್ಮೆ ಬೇಕು! ನಿಜ, ನೀನು ಬರೆದಿರುವ "ಸಮಯ ಒಂದು ನದಿ, ನೀನು ಸ್ಪರ್ಶಿಸಿದ ನೀರನ್ನು ಎರಡನೆಯ ಬಾರಿ ಮುಟ್ಟಲಾರೆ, ಏಕೆಂದರೆ ಅದು ನಿನ್ನ ಕೈಗೆ ಸಿಗುವುದಿಲ್ಲ, ಹರಿದು ಹೋಗಿರುತ್ತದೆ. ಆದ್ದರಿಂದ ನಿನ್ನ ಜೀವನದ ಪ್ರತಿ ಕ್ಷಣವನ್ನು ಸವಿ" ಎಂಬ ಮಾತುಗಳು ಎಷ್ಟು ಚೆನ್ನಾಗಿವೆ. ಥ್ಯಾಂಕ್ಸ್! ನಿನ್ನ ಮನೆಯವರಿಗೆಲ್ಲ ಪ್ರೀತಿಯ ನಮಸ್ಕಾರಗಳು.

ಅಶೋಕ ಶಾಲೆಯಿಂದ ಬರುವ ಹೊತ್ತಾಯಿತು. ಅತ್ತೆಗೆ ಹೊಟ್ಟೆ ಹಸಿವಾದರೆ ಪಾಪ ತಡೆಯಲಾರರು! ಇನ್ನೇನು ನನ್ನವರು ಬಂದುಬಿಡುತ್ತಾರೆ. ಬರಲೇ ಇನ್ನು ಗೆಳತಿ.

ಇತಿ ನಿನ್ನ ಪ್ರೀತಿಯ,

ಆಶಾ

***

ಮೂರನೇ ಪತ್ರ

(ಎರಡು ತಿಂಗಳ ನಂತರ)

ಪ್ರೀತಿಯ ಗೆಳತಿಗೆ,

ಚೆನ್ನಾಗಿದೀನೋ ಚೆನ್ನಾಗಿಲ್ಲವೋ... ನನಗೇ ಗೊತ್ತಾಗುತ್ತಿಲ್ಲ. ಏನೋ ಬೇಜಾರು. ಸಾಕು ಈ ಬದುಕು ಅನ್ನಿಸುತ್ತದೆ ಕಣೇ. ಅದೇ ಮುದುಕಿ, ಇವರ ತಾಯಿ, ಸಾಲದು ಗೋಳು ಹುಯ್ಕೊಳ್ಳಕ್ಕೆ ಅಂತ ಅವರ ತಮ್ಮನ ಮಗನ್ನ ಬೇರೆ ಕರ್ಕೊಂಡು ಬಂದಿದ್ದಾರೆ ಓದಿಸಬೇಕೆಂದು. ಒಬ್ಬರು ಜಾಸ್ತಿಯಾದರೆ ಎಷ್ಟು ಕೆಲಸ ಹೆಚ್ಚಾಗುತ್ತೆ ಅಂತ ನಿನಗೆ ಗೊತ್ತಲ್ಲ! ತುಂಬಾ ಕಷ್ಟ ಆಗ್ತಿದೆ ಕಣೆ.

ಮೂರು ದಿನದ ಹಿಂದೆ ಆ ಹುಡುಗ ಶೋಕೇಸಿನಲ್ಲಿ ಇಟ್ಟಿದ್ದ ಮಣ್ಣಿನ ಬೊಂಬೆ ಕೆಳಗೆ ಬೀಳಿಸಿ ಹಾಳುಮಾಡಿದ. ಎಷ್ಟು ಚೆನ್ನಾಗಿತ್ತು ಗೊತ್ತಾ? ಕೋಪ ಬಂತು. ಒಂದೇಟು ಕಪಾಳಕ್ಕೆ ಬಿಗಿದೆ. ಇವರು ನನ್ನನ್ನು ತುಂಬಾ ಹೊಡೆದರು ಕಣೇ.. ನೆನೆದುಕೊಂಡರೆ ಈಗಲೂ ತುಂಬಾ ಅಳು ಬರುತ್ತೆ. ನನ್ನ ಬೆನ್ನು ಈಗಲೂ ನೋಯುತ್ತಿದೆ. ಆ ಹುಡುಗನಿಗೆ ಸದಾ ಏನಾದರೂ ತಿನ್ನುವ ಖಯಾಲಿ. ಅದು ಓದುತ್ತದೆ ಅನ್ನುವ ನಂಬಿಕೆ ನನಗಿಲ್ಲ. ಇನ್ನು ನನ್ನ ಮಗನನ್ನೂ ಕೆಡಿಸುತ್ತಾನೆ ಅಷ್ಟೇ!

ಇವರು ಬದಲಾಗುತ್ತಾರೆ ಅನ್ನೋದೆಲ್ಲ ಬರೀ ಭ್ರಮೆ ಕಣೆ! ಇವರು ಮಾಡಿದ್ದಕ್ಕೆಲ್ಲ ಕ್ಷಮೆ ಕೇಳುವುದು, ಅದಾದ ಒಂದು ವಾರಕ್ಕೆ..., ಅಷ್ಟೊತ್ತಿಗೆ ಅತ್ತು ಅತ್ತು ಕೊರಗಿ ಅರ್ಧ ಸತ್ತಿರುತ್ತೇನೆ. ಇಲ್ಲ, ಈ ಸಲ ನಾನು ಗಂಭೀರವಾಗಿ ಯೋಚಿಸುತ್ತಿದ್ದೇನೆ. ಖಂಡಿತ ವಿವಾಹ ವಿಚ್ಛೇದನಕ್ಕೆ ಅಪ್ಲೈ ಮಾಡಲೇಬೇಕು. ಹೆಣ್ಣು ಅಂದರೆ ಇಷ್ಟೇ. ಇಪ್ಪತ್ತೊಂದನೇ ಶತಮಾನ ಅಲ್ಲ, ಎಷ್ಟನೇ ಶತಮಾನ ಬಂದರೂ ಅಷ್ಟೇ ಕಣೆ! ನಮಗೆ ದಾಸ್ಯ ತಪ್ಪುವುದಿಲ್ಲ. ಇವರ ಮನೆಗೋಸ್ಕರ ಜೀವ ತೇಯ್ದಿದ್ದೇನೆ! ಒಂದಿಷ್ಟು ಕೃತಜ್ಞತೆ ಬೇಡವೇನೇ? ಏನೇ ಓದಿರಲಿ, ಎಷ್ಟೇ ದುಡೀಲಿ, ನಮಗೆ ಇಷ್ಟೇ ಬೆಲೆ! ಆದರೆ ಎಲ್ಲಿಗೆ ಹೋಗಲಿ ಹೇಳು. ತವರಿಗೆ ಹೋದರೆ ಎಷ್ಟು ದಿನ ಅಲ್ಲಿ ಇರಲು ಸಾಧ್ಯ? ಅಣ್ಣ ಅತ್ತಿಗೆ ಎಷ್ಟು ದಿನ ಆದರಿಸಿಯಾರು? ಅಪ್ಪ-ಅಮ್ಮನಿಗೆ ಇನ್ನೂ ನೋವು ಕೊಡುವುದಕ್ಕೆ ಇಷ್ಟ ಇಲ್ಲ ಕಣೆ.

ಅಶೋಕ ಇನ್ನೇನು ಬಂದುಬಿಡುತ್ತಾನೆ, ಆ ಮುದುಕಿ ಬೇರೆ ಹಸಿವು ಅಂತ ಹೊಡ್ಕೊತಾ ಇದೆ. ನನ್ನ ಗಂಡ ಅನ್ನಿಸಿಕೊಂಡವನು ಇನ್ನೇನು ಹಾಜರಾಗುತ್ತಾನೆ.

ಗೆಳತಿ ಯಾವುದಾದರೂ ಆಶ್ರಮದ ಬಗ್ಗೆ ಗೊತ್ತಿದ್ದರೆ ತಿಳಿಸು. ಬಹಳ ದಿನ ಇರಲಾರೆ ಇಲ್ಲಿ. ಬರಲೇ ಇನ್ನು ಗೆಳತಿ, ಕಂಬನಿ ತುಂಬಿದ ಕಣ್ಣುಗಳಿಂದ ಬೀಳ್ಕೊಡುತ್ತಿದ್ದೇನೆ.

ಇತಿ ನಿನ್ನ ಪ್ರೀತಿಯ,

ಆಶಾ

**

ನಾಲ್ಕನೆಯ ಪತ್ರ

(ಒಂದೂವರೆ ತಿಂಗಳ ನಂತರ)

ಪ್ರೀತಿಯ ಗೆಳತಿ ನಿರ್ಮಲಾ

ನನ್ನ ಕಣ್ಣುಗಳಲ್ಲಿ ಈಗ ಒಂದು ಹನಿಯೂ ಇಲ್ಲ. ಅತ್ತು ಅತ್ತು ಬತ್ತಿ ಹೋಗಿವೆ. ನೀನು ಇನ್ನೂ ನನಗೆ ಸಹನೆಯ ಮಂತ್ರಬೋಧನೆ ಮಾಡ್ತಿದೀಯ! ಇಲ್ಲಿ ನನಗೆ ಒಂದೊಂದು ದಿನ ಕಳೆಯುವುದೂ ಕಷ್ಟ ಆಗ್ತಿದೆ. ಆ ಮುದುಕಿ ಸಮಯ ಸಮಯಕ್ಕೆ ಗಡದ್ದಾಗಿ ಉಂಡು ಸುಮ್ಮನೆ ಆರಾಮವಾಗಿ ಕುಳಿತಿರುತ್ತಾರೆ. ಒಂದು ಮನರಂಜನೆಯೇ, ಟಿವಿನೇ, ಸಿನಿಮಾನೇ, ಏನೂ ಇಲ್ಲ. ಬದುಕು ನರಕವಾಗಿದೆ. ಮೊದಲು ಸಂಜೆಯ ಹೊತ್ತಿನಲ್ಲಿ ಹೊರಗೆ ಕರೆದುಕೊಂಡು ಹೋಗುತ್ತಿದ್ದರು. ಹುಡುಗ ಬಂದಮೇಲೆ ಅದೂ ಇಲ್ಲ. ಅವನಿಗೆ ಪಾಠ ಹೇಳಿಕೊಡುತ್ತಾ ಕುಳಿತುಕೊಳ್ಳುತ್ತಾರೆ. ಅಶೋಕನ ಮುದ್ದುಮುಖ ನೋಡುತ್ತ ದಿನ ದೂಡುತ್ತಿದ್ದೇನೆ. ಒಂದು ವಾರವಾದರೂ ಇವರೇನು ಜಪ್ಪಯ್ಯ ಅನ್ಲಿಲ್ಲ, ಮಾತನಾಡಿಸಲೂ ಇಲ್ಲ, ಸಮಾಧಾನ ಮಾಡಲೂ ಇಲ್ಲ! ರಾತ್ರಿಯ ನಿದ್ದೆ ಮಾಡಿ ದಿನಗಳಾಯಿತು. ಮಲಗಿದರೆ ಸಾಕು, ವ್ಯಥೆ ಎದೆ ತುಂಬಿ ಬರುತ್ತದೆ.

ಇವರ ತಮ್ಮ ಸೈಟ್ ತಗೋತಾನಂತೆ. ಅದಕ್ಕೆ ಆ ಮುದುಕಿ ದುಡ್ಡಿಗೆ ಒಂದೇ ಸಮ ಇವರಿಗೆ ಗಂಟುಬಿದ್ದಿದೆ. ಎರಡು ಲಕ್ಷ ಕೊಡಬೇಕಂತೆ. ಇವರೇನು ಸುಮ್ನಿರಲ್ಲ ಬಿಡು, ಸಾಲ ಮಾಡಿಯಾದರೂ ತಂದುಕೊಡ್ತಾರೆ. ಹೀಗೆ ಮಾಡ್ತಾ ಹೋದರೆ ನಾವು ಸಾಲದ ಶೂಲಕ್ಕೆ ಸಿಕ್ಕಿ ಸಾಯ್ಬೇಕು ಅಷ್ಟೇ!

ನಾನು ನಿರ್ಧರಿಸಿಬಿಟ್ಟಿದ್ದೀನಿ, ನನ್ನ ಹಣೆಬರಹವೇ ಇಷ್ಟು! ನೆಮ್ಮದಿ, ಸಂತೋಷ ಕೇಳಿಕೊಂಡು ಬಂದಿಲ್ಲ ಬಿಡು! ಆಶ್ರಮದ ಬಗ್ಗೆ ತಿಳಿಸು. ಅಲ್ಲಿ ಅನಾಥರ ಸೇವೆ ಮಾಡಿದರೆ ಪುಣ್ಯ ಬರುತ್ತೆ, ಇಂಥವರಿಗೆ ಮಾಡೋದಕ್ಕಿಂತ....

ಬರಲೇ ಇನ್ನು ಗೆಳತಿ,

ನಿರಾಶೆಯಲ್ಲಿ ಮುಳುಗಿರುವ,

ಆಶಾ

***

ಐದನೆಯ ಪತ್ರ

(ಒಂದು ತಿಂಗಳ ನಂತರ)

ಪ್ರೀತಿಯ ಗೆಳತಿ ನಿಮ್ಮಿ,

ನಾನು, ನಮ್ಮ ಮನೆಯವರೆಲ್ಲ ಚೆನ್ನಾಗಿದ್ದೇವೆ. ನೀನು ಹೇಗಿರುವೆ? ನಿಮ್ಮ ಮನೆಯವರಿಗೆ ನನ್ನ ವಂದನೆಗಳನ್ನು ತಿಳಿಸು.

ನನ್ನ ಯಜಮಾನರು ತುಂಬಾ ಬದಲಾಗಿದ್ದಾರೆ ಕಣೆ, ಮೊದಲಿನ ಹಾಗಿಲ್ಲ, ನನ್ನ ಕೈ ಮೇಲೆ ಕೈ ಹಾಕಿ ಭಾಷೆ ಕೊಟ್ಟಿದ್ದಾರೆ ಇನ್ನು ಯಾವತ್ತೂ ಹೊಡೆಯೋಲ್ಲ ಅಂತ. ವಿಚ್ಛೇದನ, ಆಶ್ರಮ ಅಂತೆಲ್ಲ ಯೋಚನೆ ಮಾಡಬೇಡ ಅಂತ ಆಣೆ ಮಾಡಿಸಿಕೊಂಡರು. ಈ ಸಲ ಅಂತೂ ನಾಲ್ಕು ಒಳ್ಳೊಳ್ಳೆಯ ಸೀರೆಗಳನ್ನು ತೆಗೆದುಕೊಟ್ಟರು. ಪಾಪ ಅವರು ಒಂದು ಷರ್ಟ್ ಪೀಸೂ ತಗೊಳ್ಳಿಲ್ಲ. ಅವರಮ್ಮ ಒಂದು ಸೀರೆ ತಗೊಂಡ್ರು....ಪಾಪ!

ಹೋಗಲಿ ಬಿಡೆ, ಅತ್ತೇಗೂ ವಯಸ್ಸಾಗಿದೆ, ಏನೋ ಅಷ್ಟಿಷ್ಟು ಸಹಾಯ ಮಾಡ್ತಾರೆ, ತರಕಾರಿ ಹೆಚ್ಚೋದು ಮಾಡೋದು ಎಲ್ಲ! ನಾನೇ ಚಾಕು ಎಲ್ಲಿ ಕೈಮೇಲೆ ಹಾಕಿಕೊಳ್ತಾರೋ ಅಂತ ಬೇಡ ಅಂತೀನಿ. ಕೇಳ್ಬೇಕಲ್ಲ!

ನನ್ನನ್ನು ನನ್ನವರು ಎರಡು ಪಿಕ್ಚರಿಗೆ ಕರೆದುಕೊಂಡು ಹೋಗಿದ್ದರು.

ಪ್ರೀತಿಯ ಮುತ್ತುಗಳೊಂದಿಗೆ ಗೆಳತಿ,

"ಹೃದಯ ಒಂದು ರತ್ನದ ಹಾಗೆ, ಅದನ್ನು ಜೋಪಾನ ಮಾಡಿಡು. ಪ್ರೀತಿ ಗಂಧದ ಹಾಗೆ, ತೇಯ್ದು ಎಲ್ಲೆಡೆ ಹರಡು. ಭಾವನೆಗಳು ದ್ರವವಿದ್ದ ಹಾಗೆ, ಅವನ್ನು ಹರಿಯಬಿಡು. ಸ್ನೇಹ ಕೊಡೆಯಿದ್ದ ಹಾಗೆ, ಬಾ ಇಬ್ಬರೂ ಹಂಚಿಕೊಳ್ಳೋಣ"

ಇಂತಿ ನಿನ್ನ ಗೆಳತಿ,

ಆಶಾ

**

ಮುಕ್ತಾಯ- 1

ಒಂದು ತಿಂಗಳ ನಂತರ ಆರನೇ ಪತ್ರ ಬಂದರೂ, ನಿರ್ಮಲ ಅದರೊಳಗಿರುವ ಪದಗಳು ಏನಿರಬಹುದೆಂದು ಊಹಿಸಬಲ್ಲವಳಾದುದರಿಂದ ತೆರೆಯಲೇ ಇಲ್ಲ. ನಕ್ಕು ಸುಮ್ಮನಾದಳು.

ಎಫ್‌ಎಂ ರೇಡಿಯೋ ಹಾಡುತ್ತಿತ್ತು ... ಕವಿ ಜಿಎಸ್ ಶಿವರುದ್ರಪ್ಪನವರ "ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ.... ಎಷ್ಟು ಕಷ್ಟವೋ ಹೊಂದಿಕೆ ಎಂಬುದು ನಾಲ್ಕು ದಿನದ ಈ ಬದುಕಿನಲಿ.....

ಮುಕ್ತಾಯ-2

ಆಶಾ ತನ್ನ ಗೆಳತಿಗೆ ಇನ್ನೂ ಮುಂದಿನ ಪತ್ರ ಬರೆದಿರಲಿಲ್ಲ, ಯೋಚಿಸುತ್ತಾ ನಿಂತಿದ್ದಳು. ನನ್ನ ನೋವು ನಲಿವುಗಳನ್ನು ನಿರ್ಮಲಳಿಗೆ ಹೇಳಿಕೊಂಡ ಹೊರತು ತನಗೆ ಸಮಾಧಾನವಾಗುತ್ತಿರಲಿಲ್ಲ. ಆದರೆ ನಿರ್ಮಲಳ ಸಂಸಾರ ಹೇಗಿರಬಹುದು? ಒಂದು ದಿನವೂ ತನ್ನವರ ಬಗ್ಗೆ ಅವಳು ಹೇಳಿಕೊಂಡವಳಲ್ಲ. ತಾನೆಂತಹ ಸ್ವಾರ್ಥಿ! ನನ್ನ ನೋವು, ಸಂಭ್ರಮಗಳೇ ದೊಡ್ಡದಾಗಿಬಿಡುತ್ತಿತ್ತು. ದೂರದಿಂದ ಪೋಸ್ಟ್ ಮನ್ ಬರುತ್ತಿರುವುದು ಗೋಚರಿಸಿತು. ನಿರ್ಮಲಳ ಕಾಗದ ಬಂದಿರಬಹುದೇ? ಅಂದುಕೊಳ್ಳುತ್ತಿದ್ದ ಹಾಗೇ ಇವರ ಮನೆ ಕಡೆ ಬಂದವನು ಒಂದು ಪತ್ರ ಕೊಟ್ಟು ಹೊರಟುಬಿಟ್ಟ. ಮನೆಯ ಮುಂಭಾಗದಲ್ಲಿ ಇದ್ದ ಗುಲಾಬಿ ಗಿಡದಲ್ಲಿ, ಬಿಳಿಯ ಗುಲಾಬಿಯೊಂದು ತನ್ನ ನಿರ್ಮಲವಾದ ಬಿಳಿಯ ಬಣ್ಣ ಸೂಸುತ್ತ ಗಾಳಿಗೆ ಓಲಾಡುತ್ತಿತ್ತು . ಗೆಳತಿ ನಿರ್ಮಲೆಯದೇ ... ಖುಷಿಯಿಂದ ಪತ್ರ ತೆರೆದಳು.

ಪ್ರಿಯ ಗೆಳತಿ ಆಶಾ,

ದೈವಕೃಪೆಯಿಂದ ನೀನು ನಿನ್ನ ಕುಟುಂಬದವರೆಲ್ಲ ಆರೋಗ್ಯವಾಗಿರುವಿರಿ ಎಂದು ನಂಬಿದ್ದೇನೆ. ನಿನ್ನ ನೋವುಗಳನ್ನು ನೀನು ಹಂಚಿಕೊಳ್ಳುವಾಗ ನನ್ನದೂ ಹೇಳಿ ನಿನಗೆ ಮತ್ತಷ್ಟು ಹತಾಶೆಯಾಗದಿರಲಿ ಎಂದು ಏನೂ ಹೇಳಿಕೊಳ್ಳುತ್ತಿರಲಿಲ್ಲ. ಆದರೆ ಈಗ ಒಂದೇ ಸಲ ಆಘಾತದ ಸುದ್ದಿ ಕೊಡುತ್ತಿದ್ದೇನೆ, ಕ್ಷಮಿಸು! ನಾನು ನನ್ನ ಗಂಡನಿಗೆ ವಿಚ್ಛೇದನ ನೀಡಿದ್ದೇನೆ. ನಾನು ನಿನಗೆ ತಾಳ್ಮೆಯ ಬೋಧನೆ ಮಾಡುತ್ತಿದ್ದೆ. ಆದರೆ ನನಗೆ ಅವರೊಂದಿಗೆ ಇನ್ನೂ ಬದುಕು ಮುಂದುವರೆಸುವುದರಲ್ಲಿ ಅರ್ಥವಿಲ್ಲ ಎನಿಸಿತು.

ನಿನ್ನ ಗಂಡ ಹೊಡೆದರೂ ಮತ್ತೆ ಕಲ್ಲಾಗಿಯೇ ಇರುವುದಿಲ್ಲ ಕರಗುತ್ತಾರೆ ಅಲ್ಲವೇ? ನೀನೂ ಅಷ್ಟೇ! ಎಷ್ಟೇ ಕೋಪವಿದ್ದರೂ ಕ್ಷಮಾಶೀಲೆ. ನಿನ್ನ ಅಂತಃಕರಣ ಒಳ್ಳೆಯದು! ನಿನ್ನವರನ್ನು ಬೇಗ ಕ್ಷಮಿಸಿಬಿಡುತ್ತೀಯ. ಆದರೆ ನನ್ನ ದುರದೃಷ್ಟಕ್ಕೆ ನನ್ನ ಮನೆಯ ಸನ್ನಿವೇಶ ಘೋರವಾದುದು! ನನ್ನ ಗಂಡ ಎಲ್ಲ ದುಶ್ಚಟಗಳ ದಾಸ. ಎಲ್ಲ ಥರದ ದುರಭ್ಯಾಸಗಳೂ ಇವೆ, ಹೆಣ್ಣು, ಹೆಂಡ ಎಲ್ಲ.. ಹೆಣ್ಣಿಗಾಗಿ ಸೃಷ್ಟಿಸಲ್ಪಟ್ಟ ಸಿದ್ಧತಂತ್ರಕ್ಕೆ ಶರಣಾಗದೆ ಇವರಿಗೆ ಮಾಡುವ ಸೇವೆಯನ್ನು ಆಶ್ರಮದ ಅನಾಥರಿಗೆ ಮಾಡಿದರೆ ಮಹಾಪುಣ್ಯ ಬರುತ್ತದೆ. ಗೆಳತಿ, ನೀನು ನಿನ್ನವರು ಅನ್ಯೋನ್ಯತೆಯಿಂದಿರಿ ಎಂದು ಹಾರೈಸುತ್ತೇನೆ. ನಿನ್ನ ಪುಟ್ಟ ಅಶೋಕನಿಗೆ ನನ್ನ ಪ್ರೀತಿಯ ಮುತ್ತುಗಳು. ಬೆಳಗಾವಿಯ ಬಳಿಯಲ್ಲಿ ಒಂದು ಆಶ್ರಮವಿದೆಯಂತೆ. ಅಲ್ಲಿಗ ಹೊರಟಿದ್ದೇನೆ....

ನೆನಪಿರಲಿ.....

ಇಂತಿ ನಿನ್ನ ಪ್ರೀತಿಯ ಗೆಳತಿ

ನಿಮ್ಮಿ

"ನಿಮ್ಮಿ ಯಾಕೆ ಹೀಗೆ ಮಾಡಿದೆ?" ನಿಟ್ಟುಸಿರಿನೊಂದಿಗೆ ಪದಗಳು ಹೊರಬಿದ್ದವು. ಕಣ್ಣುಗಳಿಂದ ಹನಿಗಳು ನಿರಂತರವಾಗಿ ಹೊಮ್ಮುವಾಗ ಆಶಾಳ ಕೈಯಿಂದ ಪತ್ರ ಜಾರಿತು

*****

ತಲೆ ತಲವಾರ್ ಮತ್ತು ತಲ್ವೈವರುಗಳು

- ಬೆಂ.ಶ್ರೀ. ರವೀಂದ್ರ

ತಲೆಗಳು ಈಗ ವಾರ್ ನಲ್ಲಿವೆ
ತಲ್ವೈವರುಗಳು ಆರಾಮದಲ್ಲಿದ್ದಾರೆ
ಬಿದ್ದ ಹೆಣಗಳಿಗೆ ಲೆಕ್ಕವಿಲ್ಲ;
ಎಣಿಕೆಗಳು ಎಗರಿಹೋಗಿವೆ.
ಸಾವೆಂಬ ಅರಿಯ ಸವಾರಿ
ಹೆಸರು ಕಳೆದ ಹೆರವರ ಮಕ್ಕಳ ಸುಪಾರಿ.

ಯುದ್ಧವೇಕೆ?
ನಮಗೇಕದು ! ಯಜಮಾನ ಹೇಳಿದ್ದಾನೆ
ಸಾವೇಕೆ?
ದೇಶಕ್ಕಾಗಿ - ಯಜಮಾನ ಹೇಳಿದ್ದಾನೆ.

ಮೈತುಂಬ ಶಸ್ತ್ರಾಸ್ತ್ರ ಎದೆಯಲೇನೋ ಬೆಂಕಿ
ತುಟಿಯಲಿನ್ನೂ ಮೊಲೆಹಾಲು ಆರದವ,
ಎದುರಿಗಿದ್ದವಗೆ ಆಗಿನ್ನೂ ಬರಲೋ ಬೇಡವೋ
ಎಂದಿಣುಕುವ ಕುಡಿ ಮೀಸೆ

ಎದುರುಬದರಾದವರು ಯುದ್ಧದಲಿ
ಒಬ್ಬರಿನ್ನೊಬ್ಬರ ಅರಿಯದ ಅರಿಗಳು
ದ್ವೇಷ ಮತ್ಸರಗಳಿಲ್ಲ ಆದರೆ ಸಾಯಿಸುತ್ತಾರೆ

ಎದುರುಬದುರಾಗದ ಧುರೀಣರು
ಒಬ್ಬರಿನ್ನೊಬ್ಬರ ಅರಿತಿಹರು
ದ್ವೇಷ ಮತ್ಸರಗಳ ಉಳ್ಳವರು
ಆದರೆ ಸಾಯಿಸುವುದಿಲ್ಲ

ಬೆವರಲ್ಲಿ ಕಟ್ಟಿದ ಊರುಕೇರಿಗಳು
ಸಮರದಲಿ ಸುಟ್ಟು ದೆವ್ವಗಳ ಬೀಡಾಗಿವೆ
ಕಿತ್ತೆಸೆದ ತಾಯ್ಬೇರುಗಳು ಕೊಳೆಯತೊಡಗಿದೆ
ಜಗವೆರಡು ಬಣವಾಗಿ ರಣಾಂಗಣದಲಿ
ಕೊಂಬು ಕಹಳೆ ಭೇರಿಗಳ ಹುಂಕಾರ ಮಾರ್ಮೊಳಗುತ್ತಿವೆ

ಹೆಣಗಳೆದೆ ಮೇಲೆ ಅಟ್ಟಹಾಸದಿ
ಟ್ಯಾಂಕರುಗಳು ಉರುಳುತ್ತಿವೆ
ನರಿ ನಾಯಿಗಳು ಊಳಿಡುತ್ತಿವೆ
ದಂತ ಮುರಿದ ಗಜಗಳು ಘೀಳಿಡುತ್ತಿವೆ.

ಮೈಯ್ಯ ಬಣ್ಣಗಳು ನಾಲಿಗೆಯುಲಿಗಳು
ನರಕದ ಬಾಗಿಲುಗಳ ತೆರೆದಿವೆ
ನರರ ನಡುವೆ ಸೀಳುನಾಯಿಗಳ ಬಿಟ್ಟು
ಎದೆಯ ಹರಿದಿದ್ದಾರೆ;
ಹರಿ ನಿನಗಿಲ್ಲ ಇಲ್ಲಿ ಅವಕಾಶ.

ಊಳಿಗದ ಮಕ್ಕಳು ಊಳಿಟ್ಟರೆ ಯಾರು ಕೇಳುವರು
ಬೀದಿನಾಯಿಗಳ ಬೊಗಳಿಗೆ ಭೂಗೋಳ
ಬದಲಾಗದೆಂಬರು ಭಂಡರು
ಬಕಾಸುರ ಕೀಚಕರಿಗೀಗ ನಿರ್ಭೀತಿ

ನಾಳೆ ಇವರು
ಅವರ ಮೂಗಿನ ನೇರಕ್ಕೆ
ಊದುತ್ತಾರೆ ಶಾಂತಿಯ ತುತೂರಿ
ಒಂದಾದ ಜಗವ ನೂರಾಗಿ ಒಡೆದು
ಮುಂದಿನ ಯುದ್ಧಕ್ಕೆ ಅಣಿಮಾಡುತ್ತಾರೆ.

ಎದೆಯಲ್ಲಿ ಹುಟ್ಟುವ ಯುದ್ಧಗಳು
ಸುಡುವುದು ಎದೆಯನ್ನು
ಯುದ್ಧ ಅಕ್ಷರವಾಗಿ ಇತಿಹಾಸವಾಗುತ್ತದೆ
ಬದುಕುಗಳು ಕ್ಷರವಾಗಿ ಮುರುಟುತ್ತದೆ.

ಅಲೆಕ್ಸಾಂಡರ್, ಚೆಂಗೀಸ್ಖಾನ್,
ಬಾಬರ್ ನೆಪೋಲಿಯನ್
ಹಿಟ್ಲರುಗಳಾರೂ ಸತ್ತಿಲ್ಲ
ಸತ್ತವರು ಬುದ್ಧ ಗಾಂಧಿ.

ಹೆಣಗಳು ಬೆಂಕಿಗೋ ಭುವಿಗೋ ಸೇರುತ್ತವೆ
ಮುಗಿಯದ ದಾಹ ಮುಳುವಾಗಿ
ಮತ್ತೆ ತಲೆ ಎತ್ತುತ್ತದೆ

ಯುದ್ಧ ಅಲ್ಲೇ ಆಗಬೇಕಿಲ್ಲ
ಇಲ್ಲೂ ಆಗುತ್ತದೆ
ನಂನಾಡಿನಲ್ಲಿ ತಲವಾರುಗಳು ಮಾತನಾಡುತ್ತಿವೆ
ತಲ್ವೈವರುಗಳು ಆರಾಮದಲ್ಲಿದ್ದಾರೆ.


*****

ಕವಿ ನೆನಪು

ಚೆಂಬೆಳಕಿನತ್ತ ಒಂದು ಅನಿರೀಕ್ಷಿತ ಭೇಟಿ

- ಮಹಾಬಲ

ಬಹುಶಃ ೧೯೯೬ನೆಯ ವರ್ಷ ಎಂದು ತೋರುತ್ತದೆ. ಪ್ರಜಾವಾಣಿ ದಿನಪತ್ರಿಕೆಗಾಗಿ ನಾನು ಹಾಗೂ ಹಲವು ಸ್ನೇಹಿತರು, ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಿಕೊಡಲು ಒಪ್ಪಿದ್ದೆವು.



ಚನ್ನವೀರ ಕಣವಿ

ಆ ಸಂಬಂಧ ರಾಜ್ಯಾದ್ಯಂತ ಪ್ರತಿ ಜಿಲ್ಲೆಯನ್ನೂ ಸಂಚರಿಸಿ ಜಿಲ್ಲಾ ಮಟ್ಟದ ಸ್ಪರ್ಧೆ ನಡೆಸಿ ಅಂತಿಮ ವಿಜೇತರನ್ನು ಆಯ್ಕೆ ಮಾಡಬೇಕಾಗಿತ್ತು. ಹಾಗೆಯೇ ಧಾರವಾಡಕ್ಕೂ ಹೋಗಿದ್ದೆವು. ಹುಬ್ಬಳ್ಳಿಯಲ್ಲಿ ವಾಸ್ತವ್ಯ ಮಾಡಿ ಬೆಳಿಗ್ಗೆ ಮುಂಚೆ ತಲುಪುವ ಇರಾದೆಯಿಂದ ಒಂಬತ್ತಕ್ಕೇ ಹೋಟೆಲ್ ಬಿಟ್ಟು ಧಾರವಾಡದ ಸ್ಪರ್ಧೆ ನಡೆಯುವ ಸಭಾಂಗಣವಾದ 'ಗಣಿತಲೋಕ' ತಲುಪಿದಾಗ ಹತ್ತು ಗಂಟೆಯಾಗಿತ್ತು.

ಅಲ್ಲಿ ಕಸ ಗುಡಿಸುತ್ತಿದ್ದ ಆಳನ್ನು ವಿಚಾರಿಸಿದಾಗ ಅವನು ಸಮಾರಂಭ ಹನ್ನೊಂದು ಗಂಟೆಗಂತೆ, ನಿಮಗೆ ಯಾರೂ ತಿಳಿಸಿಲ್ಲವೆ? ಎಂದು ಕೇಳಿದ.

ಆರಂಭದ ಸಮಯ ನಾವು ಗಮನಿಸಿರಲಿಲ್ಲ. ಸ್ಪರ್ಧೆ ನಡೆಯುವ ಸಭಾಂಗಣಕ್ಕೆ ಸಾಕಷ್ಟು ಮುಂಚೆ ತಲುಪಬೇಕೆಂದು ಪ್ರಜಾವಾಣಿ ಪತ್ರಿಕೆಯವರು ನಮಗೆ ಮೊದಲೇ ಸೂಚನೆ ಕೊಟ್ಟಿದ್ದರು. ಅಂದು ಭಾನುವಾರ. ವ್ಯವಸ್ಥೆ ನೋಡಿಕೊಳ್ಳಬೇಕಿದ್ದ ಪ್ರಜಾವಾಣಿ ಪ್ರತಿನಿಧಿ ಇನ್ನೂ ಬಂದಿರಲಿಲ್ಲ. ಬಹುಶಃ ಎಲ್ಲೋ ಭಾನುವಾರದ ರಜಾ ಲಹರಿಯಲ್ಲಿದ್ದರೇನೋ!

ಇದರ ಬಗ್ಗೆ ಪ್ರಜಾವಾಣಿ ಕಚೇರಿಗೆ ದೂರು ನೀಡಲು ಏಕೋ ಮನಸ್ಸಾಗಲಿಲ್ಲ.

ಜತೆಗೆ ಬಂದಿದ್ದ ಗೆಳೆಯ ವೆಂಕಟೇಶನನ್ನು 'ಏನು ಮಾಡುವುದು?' ಎಂದು ಕೇಳಿದೆ. ನಮ್ಮ ಬ್ಯಾಂಕಿನ ಯಾರಾದರೂ ನಿನಗೆ ಪರಿಚಯವಿದ್ದರೆ ಸ್ವಲ್ಪ ಹೊತ್ತು ಅವರ ಮನೆಗೆ ಹೋಗೋಣ ಎಂದು ಸಲಹೆ ನೀಡಿದ. ಅದು ಮೊಬೈಲ್ ಇಲ್ಲದ ಕಾಲ. ಯಾರ ಹೆಸರೂ ನೆನಪಿಗೆ ಬರಲಿಲ್ಲ.

ಏನೋ ಹೊಳೆದಂತಾಯಿತು; 'ನಡಿ, ಕಾರಿನ ಹತ್ತಿರ' ಎಂದು ಅವನಿಗೆ ಹೇಳಿದೆ. 'ಎಲ್ಲಿಗೆ ?' ಎಂದು ಕೇಳಿದ. .ನಾನು ಉತ್ತರಿಸಲಿಲ್ಲ.

ನಮ್ಮ ಕಾರಿನ ಡ್ರೈವರ್ ಹತ್ತಿರ ಬಂದು 'ಕಲ್ಲಪ್ಪ, ಕಲ್ಯಾಣನಗರ ಇಲ್ಲಿಂದ ಎಷ್ಟು ದೂರ? ಎಂದು ಕೇಳಿದೆ. ಅವನು 'ಹೆಚ್ಚೇನಿಲ್ರಿ, ಎರಡು ಮೈಲು ಇದ್ದೀತು' ಎಂದು ಉತ್ತರಿಸಿದ.

'ಅಲ್ಲಿಗೆ ಹೋಗೋಣೇನು?' ಎಂದು ಕೇಳಿದೆ.

'ಬರ್ರಿ, ನನ್ನ ಕೆಲಸಾನೇ ಅದು' ಎನ್ನುತ್ತ ಕಾರಿನತ್ತ ನಡೆದ.

ಕಲ್ಯಾಣನಗರ ಸಮೀಪಿಸಿದಾಗ ಕಲ್ಲಪ್ಪ 'ಮನಿ ಏನಾರ ಗೊತ್ತೇನ್ರಿ ಮಾಸ್ತರ್ರೇ?' ಎಂದು ಕೇಳಿದ.

'ಇಲ್ಲ ಕಲ್ಲಪ್ಪ, ಅವರು ಕವಿ ಚೆನ್ನವೀರ ಕಣವಿ ಅಂತ. ಅವರ ಮನೆ ಹೆಸರು ಚೆಂಬೆಳಕು ಅಂತ' ಅಂದೆ.

'ಈ ಕಲ್ಯಾಣನಗರದಲ್ಲಿ ಭಾಳಮಂದಿ ಸಾಹಿತಿಗಳು, ಕವಿಗಳು ಇದ್ದಾರ ಬಿಡ್ರಿ. ನೀವು ಹೇಳಿದೋರ ಹೆಸರು ಕೇಳಿದ್ದೀನಿ, ಮನಿ ಗೊತ್ತಿಲ್ಲ'.ಎನ್ನುತ್ತ ಎಸ್‌ಟಿಡಿ ಬೂತ್ ಇದ್ದ ಅಂಗಡಿಯೊಂದರ ಹತ್ತಿರ ಕಾರು ನಿಲ್ಲಿಸಿ, 'ಅಂಗಡಿಯವರ ಹತ್ತಿರ ಟೆಲಿಫೋನ್ ಡೈರೆಕ್ಟರಿ ತೊಗೊಂಡು ನಂಬರ್ ಗುರುತು ಮಾಡಿ ಕವಿಗಳಿಗೆ ಫೋನ್ ಹಚ್ರಿ. ಅವರ ಸನಿಹ ಮಾತನಾಡುವಾಗ ಮನಿ ಎಲ್ಲಿ ಬರ್ತದೆ ಕೇಳ್ರಿ. ಮತ್ತ ಅಂಗಡಿಯವರನ್ನ ವಿಚಾರಿಸ್ರೀ. ಅವ್ರಿಗೆ ತಿಳಿದಿರಲಿಕ್ಕೂ ಸಾಕು' ಎಂದು ಸಲಹೆ ನೀಡಿದ. ಅವನ ಸಮಯಸ್ಪೂರ್ತಿಗೆ ತಲೆದೂಗುತ್ತ ಹಾಗೇ ಮಾಡಿದೆ. ಕಣವಿಯವರೇ ಫೋನ್ ತೆಗೆದುಕೊಂಡರು. ನಾನು ಒಂದು ಅರ್ಧ ಗಂಟೆ 'ಬಂದು ಭೇಟಿಯಾಗಬಹುದೇ? ಎಂದು ಕೇಳಿದೆ. ನಮ್ಮ ತಂದೆಯವರ ಪ್ರವರವನ್ನು ಹೇಳಲೂ ಮರೆಯಲಿಲ್ಲ.

ಕವಿವರ್ಯರು 'ಅವಶ್ಯ ಬರ್ರಿ, ಅದಕ್ಕಿಂತ ಸಂತೋಷದ ಸುದ್ದಿ ಮತ್ತಾವುದದೆ' ಎಂದು ತಮ್ಮ ಎಂದಿನ ಸಹಜ ಸೌಜನ್ಯದ ಮಾತುಗಳಲ್ಲಿ ಉತ್ತರಿಸುತ್ತ, 'ಈಗ ನೀವು ಎಲ್ಲಿದೀರಿ?' ಟೆಲಿಫೋನ್ ಬೂತ್ ಹತ್ತಿರ ಇರುವ ವಿಷಯ ತಿಳಿಸಿದಾಗ. 'ಬಹಳ ಸಮೀಪನೇ ಇದೀರಿ. ನಮ್ಮ ಮನಿ ವಿಳಾಸ ಹೇಳ್ತೀನಿ. ಕೇಳಿಕೊಂಡು ಬರ್ರಿ' ಎಂದರು.

ಅಂಗಡಿಯವರಿಗೆ ವಿಳಾಸದ ಬಗ್ಗೆ ಕೇಳಿದಾಗ ಅವರು ಕಲ್ಲಪ್ಪನನ್ನು ಕರೆದು ಮನೆಯ ಗುರುತು ಹೇಳಿದರು. ನನ್ನ ಗೆಳೆಯ ಹತ್ತೂ ಮುಕ್ಕಾಲಿಗೆ ಹೊರಟುಬಿಡೋಣ 'ಎಂದು ಸರಿಯಾಗಿಯೇ ಎಚ್ಚರಿಸಿದ.

ಕಣವಿಯವರು ಬಾಗಿಲ ಹತ್ತಿರವೇ ನಿಂತಿದ್ದು 'ಬರ್ರಿ ನೀವೇ ಅಲ್ಲೇನು ನಮ್ಮ ಕೆಎಸ್‌ನ ಪುತ್ರ' ಎಂದು ತುಂಬುನಗೆಯಿಂದ ಸ್ವಾಗತಿಸಿದರು. ಮನೆಯೊಳಗೆ ಹೋಗಿ ಆಸೀನರಾಗುತ್ತಿದ್ದಂತೆ 'ಏನು ನಿಮ್ಮ ಹೆಸರು? ಎಲ್ಲಿ ಕೆಲಸ?' ಎಂದು ವಿಚಾರಿಸಿದರು. ನಾನು ವಿವರ ತಿಳಿಸಿ ನನ್ನ ಸ್ನೇಹಿತನನ್ನೂ ಪರಿಚಯಿಸಿದೆ.

'ಹರಿಹರ ಹೇಗಿದ್ದಾರೆ?' ಎಂದು ಕಣವಿಯವರು ವಿಚಾರಿಸಿದರು. ಕೆ.ಎನ್.ಹರಿಹರ ನಮ್ಮ ಹಿರಿಯಣ್ಣ. ಕಣವಿಯವರ ಜತೆ ಕರ್ಣಾಟಕ ವಿವಿ ಪ್ರಕಟಣ ವಿಭಾಗದಲ್ಲಿ ಏಳು ವರುಷ ಕೆಲಸಮಾಡಿ ಕಣವಿಯವರ ಮೆಚ್ಚುಗೆಗೂ ಪಾತ್ರರಾಗಿದ್ದರು. ೧೯೭೮ರಲ್ಲಿ ಇಸ್ರೋ ಪ್ರಕಟಣ ವಿಭಾಗದಲ್ಲಿ ಕೆಲಸ ಸಿಕ್ಕಿದ್ದರಿಂದ ಅಲ್ಲಿ ರಾಜೀನಾಮೆ ನೀಡಿ ಬೆಂಗಳೂರಿಗೆ ಬರಬೇಕಾಯಿತು. ಇದೇ ಜನವರಿ ೧೮ರಂದು ತಮ್ಮ ೮೦ನೆಯ ವಯಸ್ಸಿನಲ್ಲಿ ನಿಧನರಾದರು.

ಚಹಾ ಬಿಸ್ಕತ್ತುಗಳ ಆತಿಥ್ಯ ನಡೆಯಿತು. ಲೇಖಕಿ ಪತ್ನಿ ಶಾಂತಾದೇವಿ ಕಣವಿಯವರನ್ನು ಪರಿಚಯಿಸಿದರು. ಅಲ್ಲಿಗೆ ಬಂದ ಮಗನಿಗೆ 'ಚಂದ್ರೂ, ಇವರು ಕೆಎಸ್‌ನ ಮಗ, ಮತ್ತೆ ಇನ್ನೊಬ್ಬರು ಅವರ ಸ್ನೇಹಿತರು. ಇವರೂ ನಿನ್ನ ಹಾಗೇ ಬ್ಯಾಂಕ್ ಮಂದಿ' ಎಂದು ಪರಿಚಯಿಸಿದರು. ಚಂದ್ರಮೌಳಿ ಕಣವಿಯವರು ಮೈಸೂರು ಬ್ಯಾಂಕ್ ಉದ್ಯೋಗಿ. ಅಲ್ಲಿನ ಕ್ರಿಕೆಟ್ ತಂಡದಲ್ಲಿ ಆಡಿದವರು. ಈಗ ವೀಕ್ಷಕ ವಿವರಣೆ ಹಾಗೂ ಪರಿಣತ ವ್ಯಾಖ್ಯಾನಗಳಲ್ಲಿ ಪ್ರಸಿದ್ಧರು.

ನನಗೆ ಆಗ ಸಾನೆಟ್ಟುಗಳ ರಚನೆಯ ಬಗ್ಗೆ ಒಲವು ಇದ್ದುದರಿಂದ ಮತ್ತು ಕಣವಿಯವರು ಆ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿರುವುದರಿಂದ ಸಾನೆಟ್ ಕುರಿತ ಹಲವಾರು ವಿವರಣೆ, ಅನುಮಾನಗಳನ್ನು ಬರೆಯುವ ಕ್ರಮವನ್ನೂ ಕುರಿತು ಕೇಳಿದೆ. ಅದಕ್ಕೆಲ್ಲ ಅವರು ತಾಳ್ಮೆಯಿಂದ ಮತ್ತು ನನಗೆ ಮನದಟ್ಟಾಗುವಂತೆ ತಿಳಿಸಿಕೊಟ್ಟರು. ಇಂದೂ ಆ ಕುರಿತ ಅವರ ಮಾತುಗಳು ನನ್ನನ್ನು ಗೀತೋಪದೇಶದಂತೆ ಮುನ್ನಡೆಸುತ್ತಿವೆ.

ಗೆಳೆಯ ಸಮಯದ ಬಗ್ಗೆ ಮತ್ತೊಮ್ಮೆ ಎಚ್ಚರಿಸದಿದ್ದರೆ ಬಹುಶಃ ನಾನು ರಸಪ್ರಶ್ನೆಯ ಮುಖ್ಯ ಕಾರ್ಯವನ್ನೇ ಮರೆಯುತ್ತಿದ್ದೆನೇನೋ!

'ಅರೆ ಹೊರಟೇಬಿಟ್ರಿರಾ, ನಮ್ಮ ಮನಿ ರೊಟ್ಟಿ ಊಟ ಸವಿಯದೆ?' ಎಂದೇ ಅದೇ ನಗುವಿನೊಂದಿಗೆ ಕೇಳಿದರು. 'ಮತ್ತೊಮ್ಮೆ ಪೂರ್ಣದಿನ ಇರುವ ಹಾಗೇ ಬರ್ರಿ, ಇಲ್ಲೇ ಸಮೀಪ ಕಲಬುರ್ಗಿಯವರ ಮನಿ ಇದೆ. ಶಾಂತಾದೇವಿ ಮಾಳವಾಡರು ಇಲ್ಲೇ ಇದ್ದಾರೆ, ಭೆಟ್ಟಿಯಾಗಬಹುದು' ಎಂದು ಗೇಟಿನವರೆಗೆ ಬಂದು ಬೀಳ್ಕೊಟ್ಟರು.

ಎಳೆಬಿಸಿಲು ಮರೆಯಾಗಿ ಬಿಸಿಲೇರುತಿತ್ತು. ಆದರೆ ಸಹೃದಯ, ಸಮನ್ವಯಶೀಲ ಕವಿವರ್ಯರ ಮೃದುಮಾತುಗಳ ತಂಗಾಳಿಯ ಹೊನಲು ಆ ಬಿಸಿಲನ್ನು ಮರೆಸುವಂತಿತ್ತು.

***

ವೈರಾಗ್ಯ ಮೂರ್ತಿ

– ಎನ್. ಶಂಕರರಾವ್

ನೋಡಲ್ಲಿ ನಿಂತಿಹ ಗೊಮ್ಮಟೇಶ್ವರ ಮೂರ್ತಿ
ಶ್ರವಣಬೆಳಗೊಳದಿ ಅದ್ವಿತೀಯ ರೀತಿ/
ಚಕ್ರವರ್ತಿಯ ಮಣಿಸಿದ ಕೆಚ್ಚದೆಯ ಧೀರ ವೀರ ಕೀರ್ತಿ
ಸರ್ವಸಂಗ ಪರಿತ್ಯಾಗಿ ಆ ದಿವ್ಯಮೂರ್ತಿ//

ನೋಡಲ್ಲಿ ಏಕಮೇವಾದ್ವಿತೀಯ ಶಿಲಾ
ಸೌಂದರ್ಯ ಶಿಲ್ಪ ಸಾಹಸ ಕಲಾವೈಭವದ ಮೂರ್ತಿ/
ಭವ್ಯತೆ ಪಾವಿತ್ರ್ಯ ವೀರಗಾತೆಯ ಸಂಗಮವಿದು
ನಮಿಸು ಬಾಹುಬಲಿಯ ಬೃಹನ್ಮೂರ್ತಿಗೆ//

ವಿಂಧ್ಯಗಿರಿಯಲ್ಲಿ ಸ್ಥಿತ ಬೃಹತ್ಕಾಯ
ಸಹಜ ರೂಪಗುಣ ಸ್ವಭಾವ ವ್ಯಕ್ತ ಮೂರ್ತಿ/
ವದನದಿ ಕಂಗೊಳಿಸುವ ಆ ಕಿರುನಗೆ
ವೈರಾಗ್ಯ ಆತ್ಮ ಸಂಯಮದ ಭಾವಸಂಗಮ//

ಗೊಮ್ಮಟೇಶ್ವರನಾ ಪವಿತ್ರ ಸನ್ನಿಧಿ
ಸರ್ವ ಜನಾಂಗದ ತೀರ್ಥಕ್ಷೇತ್ರವಿದು/
ಪ್ರಶಾಂತ ವಿರಾಗ ಭಾವ ಸೂಸುವ
ಮಾಧವೀಲತೆ ಹಬ್ಬಿರುವ ಆ ಪಾದಕೆ ನಮಿಸು//

ಪ್ರತಿಮಾ ಯೋಗ ಧಾರಣಮೂರ್ತಿ
ಧ್ಯಾನಾಸಕ್ತ ಕರುಣಾ ಶಾಂತಮೂರ್ತಿ/
ಬಾಹುಬಲಿಯ ಮಹಾಮಸ್ತಕಾಭಿಷೇಕವದು
ಕಣ್ಮನ ತಣಿಸುವ ಭಕ್ತಿ ಭಾವದ ಪರಂಪರೆಯ ನೋಟವದು//


*****

ಪುಸ್ತಕ ಪರಿಚಯ

"ತುಂಟು ಕುದುರೆ ಮತ್ತು ಇತರ ಕಥೆಗಳು"

- ಜಿ. ವಿ. ಅರುಣ

ನನಗೆ ಬಹಳ ಖುಶಿಯಾಗಿರುವುದಕ್ಕೆ ಕಾರಣ, ಅನೇಕ ದಿನಗಳ ಅನಂತರ ನನಗೆ ಒಂದು ಒಳ್ಳೆಯ ಪತ್ತೇದಾರಿ ಕಥೆಗಳ ಪುಸ್ತಕವು ಓದಲು ಸಿಕ್ಕಿದ್ದು.



"ತುಂಟ ಕುದುರೆ ಮತ್ತು ಇತರ ಕಥೆಗಳು" ಪುಸ್ತಕದಲ್ಲಿರುವ ಎಲ್ಲ ಒಂಬತ್ತು ಪತ್ತೇದಾರಿ ಕಥೆಗಳು ಕೂಡ ಕೊನೆಯವರೆಗೂ ತನ್ನ ಕುತೂಹಲವನ್ನು, ರೋಚಕತೆಯನ್ನು ಉಳಿಸಿ ಕೊಂಡಿವೆ. ಈ ಪತ್ತೇದಾರಿ ಕಥಾ ಸಂಕಲನದ ಲೇಖಕರು ಡಾ। ಬಿ.ಎನ್. ಸತ್ಯನಾರಾಯಣ ರಾವ್. ಇವರು ವೃತ್ತಿಯಲ್ಲಿ ವೈದ್ಯರು; ಹೃದ್ರೋಗ ತಜ್ಞರು; ಅದರಲ್ಲೂ ಚಿಕ್ಕ ಮಕ್ಕಳ ಹೃದ್ರೋಗ ತಪಾಸಣೆ ಹಾಗೂ ಚಿಕಿತ್ಸೆಯಲ್ಲಿ ಅವರದು ವಿಶೇಷ ಪರಿಣತಿ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಹಾಗೆ ನೋಡಿದರೆ ಇದು ಲೇಖಕರ ಹನ್ನೊಂದನೆಯ ಪತ್ತೇದಾರಿ ಕಥಾಸಂಕಲನ ಎಂದರೆ ನಿಮ್ಮ ಆಶ್ಚರ್ಯವೂ ದುಪ್ಪಟ್ಟಾಗುವುದರಲ್ಲಿ ಸಂಶಯವೇ ಇಲ್ಲ! ನಾನು ಈ ಎಲ್ಲಾ ಕೃತಿಗಳನ್ನು ಓದಿ ಸಂತೋಷಪಟ್ಟಿದ್ದೇನೆ.

ಈ ಕಥೆಗಳಲ್ಲಿ ವಿಶಿಷ್ಟ ಶೈಲಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸುವುದು ಲೇಖಕರ ಮನೋಭೂಮಿಕೆಯಲ್ಲಿ ಜನ್ಮ ತಳೆದಿರುವ ಪತ್ತೇದಾರ ರೇವಣ್ಣನವರು. ಅವರು ಪೊಲೀಸ್ ಇನ್‌ಸ್‌ಪೆಕ್ಟರ್ ಆಗಿದ್ದು, ತಮ್ಮ ನಿವೃತ್ತಿಯ ಅನಂತರ ಪತ್ತೇದಾರಿಕೆ ಸಂಸ್ಥೆಯೊಂದನ್ನು ತೆರೆದು ಜನರಿಗೆ ತಮ್ಮ ಸೇವೆಯನ್ನು ಒದಗಿಸುತ್ತಿರುತ್ತಾರೆ. ಇವರಿಗೆ ಒಬ್ಬ ಶಿಷ್ಯ, ಪರಶುರಾಂ. ರೇವಣ್ಣನವರಿಗೆ ಪರಶು ಬಹಳ ಒಳ್ಳೆಯ ವಿಶ್ವಾಸಾರ್ಹ ಸಹಾಯಕ, ಬುದ್ಧಿವಂತ. ಕಥೆಗಳಲ್ಲಿ ರೇವಣ್ಣ ಅವರ ಪತ್ನಿ ರೇಣುಕಮ್ಮ ಹಾಗು ಪರಶುವಿನ ಪತ್ನಿ ನಿರುಪಮ ಅವರು ಅಲ್ಲಲ್ಲಿ ಬಂದು ಕಾಫಿ, ಬೋಂಡಾಗಳನ್ನು ಒದಗಿಸುತ್ತಾ, ಈ ಕಥೆಗಳು ನಮ್ಮ ಅಕ್ಕಪಕ್ಕದಲ್ಲೇ ಎಲ್ಲೋ ನಡೆದಿರುವ ಆವರಣವನ್ನು ಸೃಷ್ಟಿಸುತ್ತಾರೆ.

ತಾವು ಸೃಷ್ಟಿಸಿರುವ ಪತ್ತೇದಾರ ರೇವಣ್ಣನವರ ವ್ಯಕ್ತಿತ್ವವನ್ನು ಹಾಗೂ ವೃತ್ತಿಪರತೆಯನ್ನು ಲೇಖಕರು ಸುಂದರವಾಗಿ ಕಟ್ಟಿಕೊಡುತ್ತಾ ಓದುಗರಿಗೆ ಅವರ ಮೇಲಿನ ಗೌರವವು ಹೆಚ್ಚುವಂತೆ ಮಾಡುತ್ತಾರೆ.

'ಕೆಂಪು ಡಯರಿ'ಕಥೆಯಲ್ಲಿ ಬರುವ ಈ ಸಂಭಾಷಣೆಯನ್ನು ಗಮನಿಸಿ:

ರೇವಣ್ಣ ಅವರನ್ನು ಭೇಟಿಯಾಗಲು ಬಂದ ವ್ಯಕ್ತಿ ಹೇಳುತ್ತಾನೆ: "... ಒಬ್ಬ ಗಣ್ಯ ವ್ಯಕ್ತಿಯ ಸಮಸ್ಯೆಯ ಬಗ್ಗೆ ಬಂದಿದ್ದೇನೆ."

"ಯಾರು ಆ ಗಣ್ಯವ್ಯಕ್ತಿ?" ರೇವಣ್ಣ ಅವರು ಕೇಳುತ್ತಾರೆ.

"ಅವರು ಅದನ್ನು ಗೌಪ್ಯವಾಗಿ ಇಡಲು ಇಚ್ಚಿಸುತ್ತಾರೆ. ಹಾಗಾಗಿ ನಾನು ಹೇಳೋಕಾಗುವುದಿಲ್ಲ. ಶಾಸಕ ಗೋವಿಂದಪ್ಪನವರ ಹೆಸರು ಹೇಳಿ ತುರ್ತು ಅಪಾಯಿಂಟ್‌ಮೆಂಟ್ ಮಾಡಿಕೊಂಡು ಭಾನುವಾರ ಬಂದೆ. ಕ್ಷಮಿಸಿ."

"ಪರವಾಗಿಲ್ಲ. ಆದರೆ ನಾವು ನಮ್ಮ ಕ್ಲಯಂಟಿನ ವಿವರಗಳು ಗೊತ್ತಿಲ್ಲದೆ ಕೆಲಸ ಮಾಡಲು ಆಗುವುದಿಲ್ಲ. ತಾವು ಹೇಳುವುದನ್ನೆಲ್ಲಾ ಗೌಪ್ಯವಾಗಿ ಇಡುವ ವೃತ್ತಿಧರ್ಮ ನಮ್ಮದು."

"ಅವರ ವಿವರಗಳನ್ನು ಕೊಡಲು ನನಗೆ ಅವರು ಅನುಮತಿ ಕೊಟ್ಟಿಲ್ಲ."

"ಹಾಗಾದರೆ ತಾವು ನಮ್ಮೊಡನೆ ವ್ಯವಹರಿಸುವಂತಿಲ್ಲ. ಕ್ಷಮಿಸಿ."

"ಹೋಗಲಿ, ಅವರ ಸಮಸ್ಯೆಯನ್ನು ವಿವರಿಸುತ್ತೇನೆ. ನಂತರ ನೀವು ನಿರ್ಧಾರ ತೆಗೆದುಕೊಳ್ಳಿ"

"ನಿಮಗಿಷ್ಟವಾದರೆ ಹೇಳಿ, ಆಲಿಸುತ್ತೇವೆ. ಆದರೆ ನಾವು ನಿಮ್ಮ ಗಣ್ಯ ವ್ಯಕ್ತಿಯನ್ನು ಇನ್ನೂ ಕ್ಲಯಂಟಾಗಿ ಸ್ವೀಕರಿಸಿಲ್ಲ ಎನ್ನುವುದು ನೆನಪಿರಲಿ."

ಆದರೆ ಕೊನೆಗೆ ವಿವರಗಳನ್ನು ಕೇಳಿದ ಮೇಲೆ, ಒಬ್ಬ ಹುಡುಗಿಯ ಭವಿಷ್ಯ ಹಾಗೂ ಜೀವನ ಹಾಳಾಗುವುದನ್ನು ತಪ್ಪಿಸಲು ಈ ಕೆಲಸವನ್ನು ಒಪ್ಪಿಕೊಳ್ಳುತ್ತಾರೆ. ತಮ್ಮ ಪತ್ತೇದಾರಿಕೆಯಿಂದ ಕೈ ಮೀರುತ್ತಿದ್ದ ಸಂದರ್ಭವನ್ನು ಸುಖಾಂತಕ್ಕೆ ತಂದಾಗ ಕಥೆಯ ಕೊನೆಗೆ ಬರುವ ಸಂಭಾಷಣೆ ಹೀಗಿದೆ:

"ಒಬ್ಬ ಮಿತ್ರನಿಗಾಗಿ ತಾವು ಇಷ್ಟು ಕಾಳಜಿ ವಹಿಸಿ ಸಹಾಯ ಮಾಡುತ್ತಿರುವುದು ಶ್ಲಾಘನೀಯ. ಹುಡುಗಿಯ ಹೆಸರೇನೋ ಸಂಧ್ಯಾ ಎಂದು ಸಂಬಂಧಿಸಿದ ಒಬ್ಬರು ಅಕಸ್ಮಾತ್ತಾಗಿ ಹೇಳಿದರು. ಆದರೆ ಅವಳ ತಂದೆ ಆ ಗಣ್ಯ ವ್ಯಕ್ತಿ ಯಾರೆಂದು ಗೊತ್ತಾಗಲಿಲ್ಲ. ಇರಲಿ, ಅದು ಈಗ ಅನವಶ್ಯಕ" ಎಂದು ರೇವಣ್ಣ ಹೇಳಿ ಪರಶು ಕಡೆ ನೋಡಿ ನಕ್ಕರು.

"ನಾವಿನ್ನು ಹೊರಡುತ್ತೇವೆ. ಮತ್ತೊಮ್ಮೆ ಥ್ಯಾಂಕ್ಸ್" ಎಂದು ಹೇಳಿ ಶಿವರಾಮ್ ಮತ್ತು ಗೋವಿಂದಪ್ಪನವರು ನಿರ್ಗಮಿಸಿದರು.

"ಪರಶು, ಆ ಗಣ್ಯವ್ಯಕ್ತಿ ಯಾರೆಂದು ಈಗ ಪತ್ತೆಯಾಯಿತಲ್ಲವೇ?" ಎಂದು ಕಣ್ಣು ಮಿಟುಕಿಸಿದರು. ಮುಚ್ಚಿಟ್ಟಿದ್ದ ಸತ್ಯವು, ರೇವಣ್ಣ ಅವರ ಕೊನೆಯ ಪ್ರಶ್ನೆಯಿಂದ ತಕ್ಷಣವೇ ಹೊಳೆದು ಓದುಗರ ಮುಖದ ಮೇಲೆ ಮಂದಹಾಸ ಮೂಡುತ್ತದೆ.

'ಏನಿದರ ಅರ್ಥ' ಕಥೆಯು 'ತನ್ನ ಹೆಸರೇನು? ತಾನು ಯಾರು?' ಎಂಬುದನ್ನು ಮರೆತ ಒಬ್ಬ ವ್ಯಕ್ತಿಯ ಕಥೆ. ಅವನು 'ಗ್ಯಾಸ್ ಸ್ಟೇಷನ್' ಎಂದುದನ್ನು ಕೇಳಿ, 'ನೀವು ಅಮೆರಿಕಾದಿಂದ ಬಂದವರೆ?' ಎಂದು ಕೇಳುವ ರೇವಣ್ಣನವರಿಗೆ ತಮ್ಮ ದಾರಿ ತಪ್ಪುತ್ತಿದೆ ಎನ್ನಿಸುವಾಗ, ವ್ಯವಸ್ಥಿತವಾಗಿ ಆ ವ್ಯಕ್ತಿಯ ಮೂಲವನ್ನು ಹುಡುಕಿ ಕೊನೆಗೆ ಅವನ ಪರಿಚಯವನ್ನು ಮಾಡಿಕೊಡುತ್ತಾರೆ. ಅದಕ್ಕಾಗಿ ಅವನಿಂದ ಮನೆಯವರೆಲ್ಲರಿಗೂ ಒಬೇರಾಯ್ ಹೋಟೆಲ್‌ನಲ್ಲಿ ಡಿನ್ನರ್ ಕೊಡಿಸುತ್ತಾರೆ.

'ತುಂಟ ಕುದುರೆ' ಕಥೆಯು ಹಿಂದೆ ಬಂದಿದ್ದ **'ಮಹಾರಾಣಿಯ ತೈಲಚಿತ್ರ'** ಪತ್ತೇದಾರಿ ಕಥೆಯ ಸಿಕ್ವೆಲ್, ಉತ್ತರಾರ್ಧದ ರೀತಿ ಇದೆ. ಚಿತ್ರಕಲೆಗಾಗಿ ತನ್ನನ್ನು ಸಮರ್ಪಿಸಿಕೊಂಡ ಆಗರ್ಭ ಶ್ರೀಮಂತ, ಸುಂದರ, ಒಂಟಿ ಹೆಂಗಸು ಶಶಿಕಲಾ ದೇವಿಯವರ ಆಸ್ತಿಯ ಮೇಲೆ ಕಣ್ಣಿಟ್ಟಾಗ ಸಂಭವಿಸುವ ಘಟನೆಗಳಿಂದ ಅವಳನ್ನು ಪಾರು ಮಾಡುತ್ತಾರೆ. ಅಷ್ಟೇ ಅಲ್ಲದೆ ಆಕೆ ಒಂಟಿಯಾಗಲು ಕಾರಣವನ್ನು ತೆರೆದಿಡುವುದರವರೆಗೂ ಈ ಕಥೆ ಬೆಳೆಯುತ್ತಾ ಹೋಗುತ್ತದೆ.

'ಒಂದೇ ಕಲ್ಲು ಎರಡು ಹಕ್ಕಿ' ಮಾನವನ ಮನಸ್ಸಿನ ವಿಚಿತ್ರ ವ್ಯಾಪಾರವನ್ನು ಹೊರಗೆ ತರುವ ಕಥೆ. "ನಿಮ್ಮ ತಂದೆ ನನಗೆ ಬಹಳ ಸ್ನೇಹಿತರಾಗಿದ್ದರು. ಬಹಳ ಸಹಾಯ ಮಾಡಿದ್ದರು. ಅವರಿಗೆ ನಿನ್ನ ಮೂಲಕ ನನ್ನ ಋಣವನ್ನು ತೀರಿಸಬೇಕೆಂದಿದ್ದೇನೆ. ನನಗೆ ಚಿಕಿತ್ಸೆಯಿಲ್ಲದ ಮಾರಣಾಂತಿಕ ರೋಗವು ಬಂದಿದೆ" ಎಂದು ಕಂಟ್ರಾಕ್ಟರ್ ಭೀಮಣ್ಣನವರು ತನ್ನ ಆಸ್ತಿಯನ್ನೆಲ್ಲ ವಕೀಲನಾದ ಶಾಮಸುಂದರನಿಗೆ ವಿಲ್ ಬರೆದುಕೊಡುತ್ತಾರೆ. ಆ ವಕೀಲನೇ ಎಲ್ಲ ಕಾಗದ ಪತ್ರಗಳನ್ನು ತಯಾರಿಸಿ ಕೊಡುತ್ತಾನೆ. ಅದರ ಸಹಿಯಾದ ದಿನ ಸಂಜೆ, ಭೀಮಣ್ಣನವರ ಮನೆಯಲ್ಲೇ ಶಾಮಸುಂದರನಿಗೆ ಔತಣವನ್ನು ಕೊಡುತ್ತಾರೆ. ಅಂದೇ ರಾತ್ರಿ ಮನೆಯ ಹೊರಗೆ ಇದ್ದ ಮರದ ಸಾಮಾನುಗಳಿಗೆ ಬೆಂಕಿ ಬಿದ್ದಾಗ ಅದರಲ್ಲಿ ಸುಟ್ಟು ಗುರುತೇ ಸಿಗದಂತೆ ಅವರು ಕರಕುಲಾಗಿ ಹೋಗುತ್ತಾರೆ. ಸಹಜವಾಗಿ ವಕೀಲನ ಮೇಲೆ ಪೊಲೀಸರ ಅನುಮಾನ. ರೇವಣ್ಣ ಹಾಗು ಪರಶು ಇದನ್ನು ಹೇಗೆ ಬಿಡಿಸುತ್ತಾರೆ ಎಂಬುದು ಇಲ್ಲಿಯ ಕಥೆ.

ಗಾಂಧಿಬಜಾರಿನಲ್ಲಿರುವ ದೊಡ್ಡ ಸೀರೆ ಅಂಗಡಿಯಲ್ಲಿ ನಡೆಯುತ್ತಿದ್ದ ಸೀರೆಯ ಕಳ್ಳತನವನ್ನು ಮಫ್ತಿಯಲ್ಲಿದ್ದ ರೇವಣ್ಣನವರು ಪತ್ತೆ ಹಚ್ಚುತ್ತಾರೆ. ಅದಕ್ಕೆ ಸಹಾಯ ಮಾಡಿದ್ದು ರಸ್ತೆಯಲ್ಲಿ ನಡೆದ ಇಬ್ಬರು ಹೆಂಗಸರ ಸಂಭಾಷಣೆ:

"ಅಲ್ಲಿ ನೋಡೇ ಅವಳನ್ನ. ಒಂದು ಗಿಣೀ ಹಸಿರು ಬಣ್ಣದ ರೇಷ್ಮೆ ಸೀರೆ ಉಟ್ಟಿದ್ದಾಳೆ. ಅವಳನ್ನು ನಾನು ಅನೇಕ ಸಲ ನೋಡಿದ್ದೇನೆ. ಅವಳಿರೋದು ನನ್ನ ಮನೆ ಹಿಂದಿನ ಸಾಲಿನಲ್ಲಿರುವ ಒಂದು ವಠಾರದಲ್ಲಿ. ಅವಳ ಯೋಗ್ಯತೆಗೆ ಇಂಥಾ ಇಪ್ಪತ್ತು ಸಾವಿರ ಬೆಲೆಯ ಸೀರೆ ಉಡಲು ಹೇಗೆ ಸಾಧ್ಯ?"

ಇಷ್ಟರಿಂದ ಕಳ್ಳರನ್ನು ಪತ್ತೆ ಮಾಡಿದ್ದನ್ನು **'ಒಂದು ಸೀರೆ ಕಥೆ'**ಯಲ್ಲಿ ಕಟ್ಟಿಕೊಟ್ಟಿದ್ದಾರೆ.

'ಕರಿಬೇವಿನ ಸೊಪ್ಪು' ಕಥೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಒಬ್ಬರು ರೇವಣ್ಣನವರಿಗೆ ಕಳುಹಿಸಿದ ಒಂದು ಕಾಗದದ ತುಂಡಿನಲ್ಲಿ ಇರುವ ಬರಹ ಇದು:

"ಕೆಲವರ ಜೀವನ ಕರಿಬೇವಿನ ಸೊಪ್ಪಿಗಿಂತ ಕೀಳಾಗಿರುತ್ತದೆ. ಎಲ್ಲ ಅಡಿಗೆಗೂ ಅದು ಬೇಕು. ಅದರ ಘಮ ಘಮಕ್ಕಾಗಿ ಅದನ್ನು ಉಪಯೋಗಿಸಿಕೊಂಡು, ಊಟ ಮಾಡುವಾಗ ಮಾತ್ರ ಅದನ್ನು ಕಸ ತೆಗೆದಂತೆ ತೆಗೆದು ಪಕ್ಕಕ್ಕಿಡುತ್ತಾರೆ. ನನ್ನದೂ ಹಾಗೆ."

ಇದರ ಜಾಡು ಹಿಡಿದು ಒಂದು ಕೊಲೆಯನ್ನು ಯಾರು ಮಾಡಿದ್ದು ಎಂಬುದನ್ನು ರೇವಣ್ಣ ಅವರು ಕಂಡುಹಿಡಿಯುತ್ತಾರೆ.

'ದಾರಿಯಲ್ಲಿ ಬಿದ್ದ ಬೀಗದ ಕೈ ಗೊಂಚಲು' ಕಥೆಯಲ್ಲಿ ಆದರೆ ಹೆಸರೇ ಸೂಚಿಸುವಂತೆ ಬೀಗದ ಕೈ ಗೊಂಚಲಿನ ಸುತ್ತ ಹೆಣೆದ ಕಥೆ. ಅದು ಸಿಕ್ಕುವುದು ಒಂದು ರೈಲ್ವೆ ಹಳಿಯ ಪಕ್ಕದಲ್ಲಿ. ಅದು ಪತ್ತೆಯಾದ ಹಿಂದಿನ ದಿನ ಅಲ್ಲಿ ರೈಲಿಗೆ ಸಿಕ್ಕಿ ಒಬ್ಬ ವ್ಯಕ್ತಿ ಸತ್ತಿರುತ್ತಾನೆ. ಅವನನ್ನು ಯಾರೋ ಅಟ್ಟಿಸಿಕೊಂಡು ಬಂದದ್ದನ್ನು ಕೆಲವರು ನೋಡಿರುತ್ತಾರೆ. ಅದೇ ದಿನ ಒಂದು ಆಭರಣದ ಅಂಗಡಿಯಲ್ಲಿ ಕೆಲಸ ಮಾಡುವ ವ್ಯಕ್ತಿಯೊಬ್ಬ ಕಾಣೆಯಾಗಿರುತ್ತಾನೆ. ಸ್ವಲ್ಪ ದಿನಗಳ ಅನಂತರ ಆ ಆಭರಣದ ಅಂಗಡಿಯಲ್ಲಿ ದರೋಡೆ ನಡೆಯುತ್ತದೆ. ಅದೇ ಸಮಯದಲ್ಲಿ ತನ್ನ ಮಗ ಕೆಲವು ದಿನಗಳಿಂದ ಕಾಣೆಯಾಗಿದ್ದಾನೆ, ಅವನನ್ನು ಹುಡುಕಿ ಕೊಡಿ ಎಂದು ರೇವಣ್ಣನವರ ಬಳಿಗೆ ಸೆಲ್ವಿರಾಣಿ ಎಂಬುವರು ಬರುತ್ತಾರೆ. ಈ ಎಲ್ಲ ಕಾಕತಾಳೀಯ ಘಟನೆಗಳ ಗೋಜಲುಗಳನ್ನು ಬಿಡಿಸಿ, ಪೊಲೀಸರಿಗೆ ಸತ್ತ ವ್ಯಕ್ತಿ ಹಾಗು ದರೋಡೆಗಾರರು ಯಾರು? ಎಂದು ಗೊತ್ತಾಗುವಂತೆ ರೇವಣ್ಣನವರು ಸಹಾಯ ಮಾಡುತ್ತಾರೆ.

'ದರೋಡೆ' ಎಂಬ ಇನ್ನೊಂದು ಕಥೆಯಲ್ಲಿ ಕೋಟ್ಯಂತರ ರೂಪಾಯಿಗಳ ವಜ್ರಗಳನ್ನು ದರೋಡೆ ಮಾಡಿ, ಸಾಂದರ್ಭಿಕ ಸಾಕ್ಷ್ಯಗಳ ಆಧಾರದ ಮೇಲೆ ಸಿಕ್ಕಿಬಿದ್ದ ದಂಪತಿಯಿಂದ ದರೋಡೆಯಾದ ವಜ್ರಗಳು ಸಿಕ್ಕುವುದಿಲ್ಲ. ಆದರೆ ಪೊಲೀಸ್ ಇನ್ಸ್ಪೆಕ್ಟರ್ ಒಬ್ಬರ ಬುದ್ಧಿವಂತಿಕೆಯಿಂದ, ದರೋಡೆಕೋರರು ಜೈಲಿನಲ್ಲಿರುವಾಗಲೇ ವಜ್ರಗಳನ್ನು ಎಲ್ಲಿ ಬಚ್ಚಿಟ್ಟಿದ್ದಾರೆ ಎಂಬುದನ್ನು ತಿಳಿಸಿ ತಮ್ಮ ಶಿಕ್ಷೆಯನ್ನು ಕಡಿಮೆ ಮಾಡಿಸಿಕೊಳ್ಳುತ್ತಾರೆ. ಅವರು ಬಿಡುಗಡೆಯಾದ ಸ್ವಲ್ಪ ಸಮಯದ ಅನಂತರ ಇಬ್ಬರೂ ಕೊಲೆಯಾಗುತ್ತಾರೆ. ಕೆಟ್ಟ ಕಾರ್ಯ, ದುಷ್ಟರ ಸಹವಾಸ ಇವುಗಳ ಫಲವನ್ನು

ತಿಳಿಸಿಕೊಡುವ ಈ ಕಥೆಯಲ್ಲಿ ಪೋಲೀಸ್ ಇನ್‌ಸ್‌ಪೆಕ್ಟರ್ ಅವರ ಚಾಕಚಕ್ಯತೆ ಹಾಗೂ ಪತ್ತೆದಾರರ ಪೂರಕ ಕೆಲಸಗಳು ಬಹಳ ಚೆನ್ನಾಗಿ ನಿರೂಪಣೆಯಾಗಿದೆ.

ಈ ಕಥಾ ಸಂಗ್ರಹದಲ್ಲಿರುವ **'ಭಲೆ ಜೋಡಿ'** ಎಂಬ ಕಥೆಯು ಪತ್ತೇದಾರಿ ಕಥೆಯಂತೆ ಕಾಣದಿದ್ದರೂ, ಕ್ಲಬ್ಬಿನಲ್ಲಿ ಕುಳಿತಿದ್ದ ಪತ್ತೇದಾರ ಪರಶು ಮತ್ತು ಅವನ ಹೆಂಡತಿ ನಿರುಪಮಾಳ ಮುಂದೆ ನಡೆಯುವ ಘಟನೆಯನ್ನು ಆಧರಿಸಿದ ಕಥೆ. ಇದು ಕ್ಲಬ್ಬಿನ ಸದಸ್ಯರ ಗಾಸಿಪ್ ಮಾತುಕತೆಗಳನ್ನು ಉತ್ತೇಜಿಸುವ ಒಬ್ಬ ಕಂಟ್ರಾಕ್ಟರ್ ಹಾಗು ಆತನ ಸಂಗಾತಿಯ ಗೆಳೆತನವನ್ನು ಕುರಿತ ಕಥೆ, ಕ್ಲಬ್ಬಿನಲ್ಲಿ ನಡೆದ ಅವರ ಜಗಳದ ತಳಹದಿಯ ಮೇಲೆ ಬೆಳೆದ ಕಥೆ, ಕಾನೂನಿನ ಚಾಪೆಯ ಕೆಳಗೆ ತೂರುವ ಕುತ್ಸಿತ ಮನಸ್ಸಿನ ಕಥೆ.

ಪತ್ತೇದಾರಿಕೆಗೆ ಎಡೆಮಾಡಿಕೊಡುವ ಘಟನೆಗಳು ಸಾಮಾಜಿಕವಾಗಿ ಪ್ರಶ್ನೆಗೆ ಒಳಗಾಗುವಂತದು. ಇದು ಏಕೆ ಹೀಗೆ ನಡೆಯಿತು? ಎಂದು ವೈಚಾರಿಕವಾಗಿ ವಿಶ್ಲೇಷಣೆಗೆ ಒಳಪಡುವಂತದ್ದು. ಅಂಥ ವಿಶ್ಲೇಷಣೆಯು ಮಾನವನ ಮನಸ್ಸಿನ ದುರಾಲೋಚನೆಗಳನ್ನು ಬೆತ್ತಲುಗೊಳಿಸಿ ಪತ್ತೇದಾರನಿಗೆ ಮಾರ್ಗದರ್ಶನ ಮಾಡುವಂಥದ್ದು. ಲೇಖಕರ ಈ ಬರಹಗಳಲ್ಲಿ ವೈದ್ಯರೊಬ್ಬರ ವಿಷಯ ಸಂಗ್ರಹಣೆ ಹಾಗೂ ವಿಶ್ಲೇಷಣೆಯ ಚತುರತೆ, ವೈಜ್ಞಾನಿಕವಾಗಿ ಅವುಗಳ ಅವಲೋಕನ ಹಾಗು ಸಾಮಾಜಿಕ ಕಳಕಳಿಯಿಂದ ಅವುಗಳ ನಿರೂಪಣೆಯನ್ನು ವಿಶಿಷ್ಟ ಶೈಲಿಯಲ್ಲಿ ಮಾಡಿದ್ದಾರೆ.

ಕುತೂಹಲವನ್ನು ಹುಟ್ಟಿಸುವ, ಹೆಚ್ಚಿಸುವ ಗುಣಗಳಿಂದ ಅವು ಬೇಗ ಓದಿಸಿಕೊಂಡು ಹೋಗುತ್ತವೆ. ಲೇಖಕರೇ ಹೇಳಿರುವಂತೆ ಇದು 'ಪತ್ತೇದಾರಿ ಹೊದ್ದಿಕೆಯನ್ನು ಹೊತ್ತಿರುವ ಸಾಮಾಜಿಕ ಕಥೆಗಳಂತಿವೆ'. ಮತ್ತೊಂದು ಮುಖ್ಯ ವಿಚಾರ ಎಂದರೆ ಈ ಪತ್ತೆದಾರರು ಸ್ಥಳೀಯ ಪೋಲೀಸರು ಉಪಯೋಗವಿಲ್ಲ ಎಂದು ಪಕ್ಕಕ್ಕೆ ತಳ್ಳಿದ ಎಳೆಯ ಜಾಡನ್ನು ಹಿಡಿದು ಸತ್ಯವನ್ನು ಬಯಲು ಮಾಡುವುದು. ಇವರಿಬ್ಬರಲ್ಲೂ ಸೌಹಾರ್ದ ಸಹಕಾರಗಳಿದ್ದು, ಪತ್ತೇದಾರ ರೇವಣ್ಣ ಅವರ ತೀಕ್ಷ್ಣಮತಿಯನ್ನು ಮೆಚ್ಚಿ ಅವರನ್ನು ಪೊಲೀಸರು ಅಭಿನಂದಿಸುತ್ತಾರೆ.

ಡಾ।। ಸತ್ಯನಾರಾಯಣರಾವ್ ಅವರ ಕನ್ನಡ ಬರಹಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತವೆ. ಹನ್ನೊಂದು ಪತ್ತೇದಾರಿ ಕಥಾಸಂಕಲನಗಳು, ನಾಲ್ಕು ಕಥಾಸಂಕಲನಗಳು, ಎರಡು ಕಾದಂಬರಿಗಳು, ಒಂದು ನಾಟಕ, ಅವರ ತಂದೆಯವರ ಜೀವನ ಪರಿಚಯದ ಕೃತಿಗಳಲ್ಲದೆ ಮೂರು ವೈದ್ಯವಿಜ್ಞಾನದ ಕೃತಿಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. **'ಮಕ್ಕಳ ಹೃದಯ ರೋಗ ಮತ್ತು ರಕ್ತನಾಳಗಳ ರೋಗಗಳು'** ಎಂಬ ಕೃತಿಗೆ 2012ರ ಮೈಸೂರು ವಿಶ್ವವಿದ್ಯಾಲಯದ **'ಪ್ರೊ।। ಆರ್. ಎಲ್. ನರಸಿಂಹಯ್ಯ ಪ್ರಶಸ್ತಿ'** ಕೂಡ ಬಂದಿದೆ.

ಈ ಪತ್ತೇದಾರಿ ಕಥಾ ಸಂಕಲನಕ್ಕೆ ಮುನ್ನುಡಿಯನ್ನು ಬರೆದಿರುವುದು ಲೇಖಕರ ಗುರುಗಳಾಗಿದ್ದ ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ।। ಕೆ.ಬಿ. ಪ್ರಭುಪ್ರಸಾದ್. ಅವರು ಮುನ್ನುಡಿಯಲ್ಲಿ ಲೇಖಕರು ಹಾಗೂ ಅವರ ಸಹಪಾಠಿಗಳ ಬಳಗ ಪ್ರತಿವರ್ಷ ಏರ್ಪಡಿಸುತ್ತಿದ್ದ ಸ್ನೇಹ ಮಿಲನವನ್ನು ನೆನೆಸಿಕೊಂಡಿದ್ದಾರೆ. ಕನ್ನಡದ ಖ್ಯಾತ ಲೇಖಕರಾಗಿದ್ದ

ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು, ಪಿ.ಲಂಕೇಶ್ ಅವರು, ಅಮೆರಿಕನ್ನಡ ಖ್ಯಾತಿಯ ಹರಿಹರೇಶ್ವರ ಅವರು, ಖ್ಯಾತ ಲೇಖಕರಾಗಿರುವ ಶ್ರೀ ನಾ.ಡಿಸೋಜಾ ಅವರು ಶಿವಮೊಗ್ಗದಲ್ಲಿ ಲೇಖಕರ ಸಹಪಾಠಿಯಾಗಿದ್ದುದು ಒಂದು ಯೋಗಾಯೋಗ.

ಡಾ|| ಸತ್ಯನಾರಾಯಣ್ ರಾವ್ ಅವರು ಅಮೆರಿಕಾದಲ್ಲಿ ಸುಮಾರು ಕಾಲು ಶತಮಾನ ಕಾಲ ಕೆಲಸ ಮಾಡಿ ಕನ್ನಡ ನಾಡಿಗೆ ಹಿಂದಿರುಗಿ, ಬೆಂಗಳೂರಿನಲ್ಲಿ ಮಕ್ಕಳ ಹೃದ್ರೋಗ ತಜ್ಞರಾಗಿ ಸೇವೆಸಲ್ಲಿಸಿದ್ದಾರೆ. ಇವರು ಇಂಡಿಯನ್ ಕಾಲೇಜ್ ಆಫ್ ಕಾರ್ಡಿಯಾಲಜಿಯ ಸಂಸ್ಥಾಪಕ ಸದಸ್ಯ. ಕಾರ್ಡಿಯಾಲಜಿ ಸೊಸೈಟಿ ಆಫ್ ಇಂಡಿಯ ಸಂಸ್ಥೆಯು ಅವರ ವಿಶಿಷ್ಟ ಸೇವೆಗೆ **'ಹೃದಯಶ್ರೀ'** ಪ್ರಶಸ್ತಿ ಇವರಿಗೆ ನೀಡಿರುವುದರಲ್ಲಿ ಆಶ್ಚರ್ಯವೇನು ಇಲ್ಲ. ಇಂಡಿಯನ್ ಅಕ್ಯಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಕೂಡ ಇವರಿಗೆ **ಗೌರವ ಪ್ರಶಸ್ತಿ**ಯನ್ನು ನೀಡಿದೆ.

ಇವುಗಳ ಜೊತೆಗೆ ಮಕ್ಕಳ ಹೃದ್ರೋಗ ಚಿಕಿತ್ಸೆಯಲ್ಲಿ ತೊಡಗಿಕೊಂಡವರಲ್ಲಿ ಪರಸ್ಪರ ಅನುಭವಗಳ ವಿನಿಮಯಕ್ಕೆ, ಮಾತುಕತೆಗಳಿಗೆ ಅನುಕೂಲವಾಗುವಂತೆ ಪೀಡಿಯಾಟ್ರಿಕ್ ಅಸೋಸಿಯೇಶನ್ ಆಫ್ ಬೆಂಗಳೂರಿನ ಸ್ಥಾಪನೆಯಲ್ಲಿ ಪ್ರಮುಖಪಾತ್ರ ವಹಿಸಿದ್ದಲ್ಲದೆ ಅದರ ಅಧ್ಯಕ್ಷರೂ ಆಗಿದ್ದವರು. 1997ರಲ್ಲಿ ಹೃದ್ರೋಗಗಳಿರುವ ಮಕ್ಕಳಿಗಾಗಿ 'ಚಿಲ್ಡ್ರನ್ಸ್ ಹಾರ್ಟ್ ಫೌಂಡೇಶನ್' ಎಂಬ ಟ್ರಸ್ಟನ್ನು ಸ್ಥಾಪಿಸಿ ಅದರ ಟ್ರಸ್ಟಿಯಾಗಿದ್ದಾರೆ.

ಡಾ|| ಸತ್ಯನಾರಾಯಣರಾವ್ ಅವರು ಇಂಥ ಅಭಿನಂದನಾರ್ಹ ವೈದ್ಯ ವೃತ್ತಿಪರ ಚಟುವಟಿಕೆಗಳ ಜೊತೆ ಜೊತೆಗೆ ಕನ್ನಡದಲ್ಲಿ ಒಳ್ಳೆಯ ಬರವಣಿಗೆಯನ್ನು ಮಾಡುತ್ತಾ ಎಲೆಮರೆಯಕಾಯಿಯಂತೆ ಇದ್ದಾರೆ. 2009ರಿಂದ, ಅಂದರೆ ಕಳೆದ ಹನ್ನೆರಡು ವರ್ಷಗಳಲ್ಲಿ 22 ಕನ್ನಡ ಕೃತಿಗಳನ್ನು ರಚಿಸಿರುವ ಈ ಎಂಬತ್ತೈದು ವರ್ಷದ ಯುವಕ, ಹಸನ್ಮುಖಿ ವೈದ್ಯ, ಕನ್ನಡದ ಲೇಖಕರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸಲೇಬೇಕು. ಅವರ ಒಂದು ಪುಸ್ತಕವನ್ನಾದರೂ ಕೊಂಡು ಓದಬೇಕು.

(ಪರಿಚಯ ಮಾಡಿರುವ ಪುಸ್ತಕ: **"ತುಂಟು ಕುದುರೆ ಮತ್ತು ಇತರ ಕಥೆಗಳು" -** 'ಪತ್ತೇದಾರಿ ಕಥಾ ಸಂಕಲನ',
ಲೇಖಕ.: **ಡಾ|| ಬಿ. ಎನ್. ಸತ್ಯನಾರಾಯಣ ರಾವ್**, ಮಹಿಮಾ ಪ್ರಕಾಶನ ನಂ.1393/2, ಸಿ.ಎಚ್.- 31, 6ನೇ ಕ್ರಾಸ್,
ಕೃಷ್ಣಮೂರ್ತಿಪುರಂ ಮೈಸೂರು - 570004. ಮೊಬೈಲ್: 9448759815; ಪುಟಗಳು: 220 ಬೆಲೆ: ರೂ. 230/-)
ಲೇಖಕ ಡಾ| ಬಿ.ಎನ್.ಸತ್ಯನಾರಾಯಣ ರಾವ್ ಅವರ ಮೊಬೈಲ್: 9945475157,
ಇಮೇಲ್: satyanbnrao@gmail.com


*****

ಆತ್ಮ ಕಥಾನಕ ಪರಿಚಯ

ಪಲಾಯನ

- ನಾಗರತ್ನ ಚಂದ್ರಶೇಖರ್

ದೇಶ ಸುತ್ತು ಕೋಶ ಓದು! ಈ ನಾಣ್ನುಡಿಯ ಅರ್ಥ ನನ್ನ ಅನುಭವಕ್ಕೆ ಬಂದದ್ದು ಅಮೆರಿಕಕ್ಕೆ ನನ್ನ ಹಲವಾರು ಭೇಟಿಗಳ ಸಂದರ್ಭದಲ್ಲಿ, ಅಲ್ಲಿನ ಗ್ರಂಥಾಲಯಗಳ ಮೂಲಕ, ಇಬ್ಬರು ಮಕ್ಕಳ ಮನೆಯಲ್ಲಿ ವಾಸ್ತವ್ಯ



ಹೂಡಿರುವ ಸಮಯದಲ್ಲಿ. ಓದುವ ಹವ್ಯಾಸವಿದ್ದ ನನಗೆ ಮುಖ್ಯ ಆಕರ್ಷಣೆಯಾದದ್ದು ಅಲ್ಲಿನ ಗ್ರಂಥಾಲಯಗಳಿಂದ ಚೀಲದ ತುಂಬ ತರುತ್ತಿದ್ದ ಹಲವಾರು ಪುಸ್ತಕಗಳು. ನಾನು ಯಾವಾಗಲೂ ಆತ್ಮಚರಿತ್ರೆಗಳನ್ನು ಓದಲು ಮೊದಲ ಪ್ರಾಶಸ್ತ್ಯ ಕೊಡುವುದರಿಂದ, ಒಮ್ಮೆ ನಾನು ಆರಿಸಿ ತಂದಿದ್ದ "ಎಸ್ಕೇಪ್" ಎನ್ನುವ ಕ್ಯಾರೊಲಿನ್ ಜೆಸೋಪ್ ಬರೆದ ಆತ್ಮಕಥಾನಕ ನನ್ನ ನಿದ್ದೆಗೆಡಿಸಿತು.

ಜನಸಾಮಾನ್ಯರ ಮಟ್ಟಿಗೆ ಕಲ್ಪನೆಗೂ ಸಾಧ್ಯವಿಲ್ಲದ ಒಂದು ಭಯಾನಕ, ರೋಚಕ ಜೀವನ ವೃತ್ತಾಂತವನ್ನು ಎಳೆ ಎಳೆಯಾಗಿ ಕ್ಯಾರೊಲಿನ್ ಅದರಲ್ಲಿ ಬಿಚ್ಚಿಟ್ಟಿದ್ದಾಳೆ.

ವಿವಾಹ ಹೆಣ್ಣಿನ ಪಾಲಿಗೆ ಕುತ್ತಿಗೆಗೆ ಕಟ್ಟಿದ ಗಂಟಾದಾಗ ಆ ಬದುಕಿನಲ್ಲಿ ಅವಳು ನೊಂದು, ಬೆಂದು ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ವಿಷಮ ದಾಂಪತ್ಯದ ದಳ್ಳುರಿಯಿಂದ ಹೊರಬರಲಾಗದೆ ತೊಳಲಾಡುವ ಅಸಂಖ್ಯಾತ ಸ್ತ್ರೀಯರು ಕಾಲ, ದೇಶಗಳ ಎಲ್ಲೆಯನ್ನು ಮೀರಿದ್ದಾರೆ. ಅಮೆರಿಕದಂತಹ ಮುಂದುವರಿದ ದೇಶದಲ್ಲೂ ೨೧ನೇ ಶತಮಾನದಲ್ಲಿ ಇಂಥದೊಂದು ಮೌಢ್ಯ ತುಂಬಿದ, ವಿಲಕ್ಷಣ ಆಚರಣೆಗಳನ್ನು ದೇವರ ಹೆಸರಿನಲ್ಲಿ ನಡೆಸುವ ಧಾರ್ಮಿಕ ಮುಖಂಡರ ಕಪಿಮುಷ್ಠಿಯಲ್ಲಿ ಹೆಣ್ಣುಗಳು ಕೇವಲ ಹೆರುವ ಯಂತ್ರಗಳು ಅಷ್ಟೆ. ಇವರಿಗೆ ಹೆಣ್ಣು ಎಂದರೆ ಮಾಂಸದ ಮುದ್ದೆ ಮತ್ತು ಹಸಿವಾದಾಗ ಕೈಗೆಟಕುವ ಆಹಾರ ವಸ್ತುವಿನಂತೆ. ಮನೆಯ ಯಜಮಾನನಿಗೆ ಅವನ ಮಕ್ಕಳನ್ನು ಹೆರುವ ಯಂತ್ರ ಹಾಗೂ ಕಾಮದ ಹಸಿವನ್ನು ಹಿಂಗಿಸುವ ಒಂದು ಭೋಗದ ವಸ್ತು. ಇಂಥ ಸುಲಭವಾಗಿ ದೊರಕುವ ಹೆಣ್ಣುಮಕ್ಕಳನ್ನು ಯಾರು ಬೇಕಾದರೂ ಎಷ್ಟು ಜನರನ್ನಾದರೂ ಆರಿಸಿಕೊಳ್ಳಲು ಸ್ವಾತಂತ್ರ್ಯ! ಮದುವೆಯೆಂಬ ಹೆಸರಿನಲ್ಲಿ ಒದಗಿಸುವ ಬಹುಪತ್ನಿತ್ವವನ್ನೇ ಮುಖ್ಯ ಆಚರಣೆಯಾಗಿ ಹೊಂದಿರುವ ಸಮುದಾಯ ಅಮೇರಿಕದ ಉಥಾ (ಉಥಾ, ಅರಿಜೋನ) ಅರಿಜೋನಾದ ಸರಹದ್ದಿನಲ್ಲಿ ಎಫ್‌ಎಲ್‌ಡಿಎಸ್ (ಫಂಡಮೆಂಟಲಿಸ್ಟ್ ಚರ್ಚ್ ಆಫ್ ಲ್ಯಾಟರ್ ಡೇ ಸೇಂಟ್ಸ್) ಎಂಬ ಹೆಸರಿನಲ್ಲಿ ತಮ್ಮನ್ನು

ಗುರುತಿಸಿಕೊಂಡ ಹತ್ತು ಸಾವಿರ ಜನರಿದ್ದ ಒಂದು ಸಮುದಾಯದಲ್ಲಿ ೧೯೬೮ ಜನವರಿ ೧ ರಂದು ಕ್ಯಾರೊಲಿನ್ ಜನಿಸಿದಳು.

ಅವಳ ತಾಯಿಯ ಆರು ತಲೆಮಾರಿನ ಜನ, ಸಮುದಾಯದ ಬಹುಪತ್ನಿತ್ವದಲ್ಲಿ ನಂಬಿಕೆ ಇಟ್ಟು ಬೆಳೆದು ಬಂದವರು. ಬಹುಪತ್ನಿತ್ವದ ಆಚರಣೆಗೆ ತಡೆಗಾಲು ಬಂದ ಕಾರಣ ಮುಖ್ಯವಾಹಿನಿಯಾದ ಮೊರ್ಮನ್ ಚರ್ಚುನಿಂದ ಈ ಸಮುದಾಯ ಹೊರಬಂದಿತ್ತು. ೫೦೦ ಜನರ ಒಂದು ಚಿಕ್ಕ ಗುಂಪು ಕೆನಡಾದಲ್ಲೂ ಇದೆ.

ತನ್ನ ಹದಿನೆಂಟನೇ ವಯಸ್ಸಿನಲ್ಲಿ ೫೦ರ ಪ್ರಾಯದ ಮೆರೆಲ್ ಜೆಸೋಫ್‌ನನ್ನು ನಾಲ್ಕನೇ ಹೆಂಡತಿಯಾಗಿ ಮದುವೆಯಾಗಬೇಕಾಗಿ ಬಂದಾಗ, ಮೂರಕ್ಕೂ ಹೆಚ್ಚುಬಾರಿ ಮದುವೆಯಾಗಿದ್ದ ಅವಳ ತಂದೆಗೆ ಅದರಲ್ಲಿ ಯಾವುದೇ ದೋಷವೂ ಕಾಣಿಸಲಿಲ್ಲ. ಮುಂದಿನ ೧೫ ವರ್ಷಗಳಲ್ಲಿ ಮೆರೆಲ್ ಜೆಸೋಫ್‌ನ ಸಂಸಾರ ಅಂದರೆ ಹೆಂಡತಿಯರ, ಮಕ್ಕಳ ಸಂಖ್ಯೆ ಬೆಳೆಯುತ್ತಲೇ ಹೋಯಿತು. ಅವನಿಗೆ ೭ನೇ ಹೆಂಡತಿ ಬರುವಷ್ಟರಲ್ಲಿ ಕ್ಯಾರೊಲಿನ್ ಎಂಟು ಮಕ್ಕಳ ತಾಯಿಯಾಗಿ (೩೫ರ ಹರೆಯದಲ್ಲಿ) ಕೂಡು ಕುಟುಂಬವೆಂಬ ನರಕದ ಎಲ್ಲ ಮಗ್ಗುಲುಗಳಿಂದ ಜರ್ಜರಿತಳಾಗಿದ್ದಳು.

ಸಾಕಷ್ಟು ವಿದ್ಯಾವಂತಳಾಗಿದ್ದ, ಉದ್ಯೋಗದಿಂದ ಸ್ವತಂತ್ರ ಮನೋಭಾವ ಬೆಳೆಸಿಕೊಂಡಿದ್ದ ಕ್ಯಾರೊಲಿನ ತನ್ನ ಸುತ್ತಲಿನ ವಿಷವ್ಯೂಹದಿಂದ ಹೊರಬರುವ ದಾರಿಕಾಣದೆ ಬಿಡುಗಡೆಯ ಹಾದಿಗಾಗಿ ಕಾಯುತ್ತಿದ್ದಳು.

ಧರ್ಮಗುರು ರೂಲನ್ ಜೆಫ್‌ನ ಮರಣದ ನಂತರ ಅವನ ಮಗ ವಾರೆನ್ ಜೆಫ್ ತಾನು ಕ್ರಿಸ್ತನ ಅವತಾರವೆಂದೇ ಎಲ್ಲರನ್ನು ನಂಬಿಸುತ್ತಾ, ಪ್ರವಚನಗಳಲ್ಲಿ ಕಟ್ಟುಪಾಡುಗಳನ್ನು ಮೀರುವವರಿಗೆ ಸತ್ತ ನಂತರ ಸದ್ಗತಿ ದೊರಕದು, ದೇವರ ಪ್ರೀತಿಯ ಪ್ರಜೆಗಳಾಗಿ ಸ್ವರ್ಗದಲ್ಲಿ ನೆಲೆಸಬೇಕಾದರೆ ನಿಯಮಗಳನ್ನು ಮೀರದೆ, ಅದರಲ್ಲೂ ಪತ್ನಿಯರು ಗಂಡನಿಗೆ ವಿಧೇಯರಾಗಿರುವುದು ಅತ್ಯಂತ ಆವಶ್ಯಕ ಎಂದೇ ಬೋಧಿಸುತ್ತಿದ್ದ. ೬೦ಕ್ಕೂ ಹೆಚ್ಚು ಹೆಂಡತಿಯರನ್ನು ಸಂಭಾಳಿಸುತ್ತಿದ್ದ ರೂಲನ್ ಜೆಫ್‌ನ ಮಾರ್ಗದರ್ಶನದಲ್ಲಿ ಸಡಿಲಗೊಂಡಿದ್ದ ಕೆಲವು ಆಚರಣೆಗಳನ್ನು ಅವನ ಮಗ ಅಧಿಕಾರ ಹಿಡಿದಾಗ ಇನ್ನಷ್ಟು ಬಿಗಿಗೊಳಿಸಿದ. ತಂದೆಯ ಮರಣದ ನಂತರ ಅವನ ಇಬ್ಬರು ಕಿರಿಯ ಪತ್ನಿಯರನ್ನು ಕೆರೋಲಿನ್‌ಳ ಗಂಡ ಮೆರಿಲ್‌ನೇ ಮದುವೆ ಮಾಡಿಕೊಳ್ಳಬೇಕೆಂಬ ಆದೇಶ ಹೊರಡಿಸಿದ್ದ ಕೂಡ. ಮೆರಿಲ್ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ವಾರನ್‌ಗೆ ಮದುವೆ ಮಾಡಿಕೊಟ್ಟ ಮೇಲೆ ಸಮುದಾಯದಲ್ಲಿ ಅವನ ಸ್ಥಾನ ಇನ್ನಷ್ಟು ಪ್ರಭಾವಯುತವಾಗಿತ್ತು. ಮೆರಿಲ್ ತನ್ನ ೭ ಹೆಂಡತಿಯರಿಂದ ೫೪ ಮಕ್ಕಳನ್ನು ಹೊಂದಿದ್ದ. ಅದು ಅವನಿಗೆ ಇನ್ನಷ್ಟು ಹೆಚ್ಚುಗಾರಿಕೆ ಎನಿಸಿತ್ತು.

ಸುಂದರ ಎಳೆ ಪ್ರಾಯದ ಹುಡುಗಿಯರ ವಿವಾಹ ನಿರ್ಣಯ ಧರ್ಮಗುರುವಿಗೆ ದೇವರಿಂದ ಬಂದ ಆದೇಶ ದಂತೆ ಅವನು ನಿರ್ಣಯಿಸಿದವರನ್ನೇ ಅವರು ಮದುವೆಯಾಗಬೇಕು. ಮೊದಲ ಆಯ್ಕೆ ತನಗೇ ಇಟ್ಟುಕೊಂಡು ಉಳಿದವರನ್ನು ತನ್ನ ಬೇಕಾದ ಆಪ್ತ ಅನುಯಾಯಿಗಳಿಗೆ ಮದುವೆ ಮಾಡಿಕೊಳ್ಳಲು ಸೂಚಿಸುತ್ತಿದ್ದ. ಹೀಗಾಗಿ ಅವನು

೭೦ಕ್ಕೂ ಹೆಚ್ಚು ಹುಡುಗಿಯರನ್ನು ಮದುವೆಯಾಗಿರುವ ಸಾಧ್ಯತೆಯ ವಿಷಯ ಸಮುದಾಯದಲ್ಲಿ ಗುಟ್ಟಾಗಿ ಉಳಿದಿರಲಿಲ್ಲ.

ಟೆಲಿವಿಷನ್ ಹಾಗೂ ವಿಜ್ಞಾನದ ಪುಸ್ತಕಗಳು, ಆಧುನಿಕ ಮನೋಭಾವವನ್ನು ಬೆಳೆಸುವ ಸಂಗತಿಗಳಿಂದ ಮಕ್ಕಳನ್ನು ಶಾಲೆಯಲ್ಲಿ ವಿಮುಖಗೊಳಿಸುವುದು ಸೇರಿದಂತೆ ರೋಗ ಬಂದಾಗ ಚಿಕಿತ್ಸೆಯ ತುರ್ತು ಅಗತ್ಯವಿದ್ದರೂ ಅದನ್ನು ಪಡೆದುಕೊಳ್ಳಲು ಗಂಡನ ಅಪ್ಪಣೆಯಿಲ್ಲದೆ ಪತ್ನಿಯರು ಹೊರಗೆ ಹೋಗದಂತೆ ಹಾಗೂ ವಾಹನ ಚಲಾಯಿಸುವ ಹೆಂಡತಿಯರಿಗೆ ಲೈಸೆನ್ಸ್ ಕೊಡುತ್ತಿರಲಿಲ್ಲವಾಗಿ ಅವರು ಸರಹದ್ದನ್ನು ದಾಟಿ ಹೊರಹೋಗುವ ಅವಕಾಶಗಳಿಂದ ವಂಚಿತರಾಗಿದ್ದರು.

ಸಮುದಾಯ ಬಿಟ್ಟು ಹೊರಹೋಗದಂತೆ ಸರ್ಪಗಾವಲಿನಲ್ಲಿ ಎಲ್ಲರನ್ನೂ ನಿಯಂತ್ರಿಸುತ್ತಾ ಅವರ ಮನಸ್ಸನ್ನು ಹೆದರಿಕೆ, ಮೂಢನಂಬಿಕೆಗಳಿಂದ ತುಂಬಿಸಿ ಸದಾ ಎಫ್ಎಲ್ಡಿಎಸ್ ಪಂಗಡಕ್ಕೆ ನಿಷ್ಠರಾಗಿರುವಂತೆ ನೋಡಿಕೊಳ್ಳಲಾಗುತ್ತಿತ್ತು.

ಹಲವು ತಾಯಂದಿರ ಮಧ್ಯೆ ಬೆಳೆಯುವ ಮಕ್ಕಳಿಗೆ ಮನೆಯಲ್ಲಿ ಯಾರಿಗೂ ಪ್ರಾಶಸ್ತ್ಯ ಕೊಡದೆ, ಎಲ್ಲರನ್ನೂ ಸಮಾನತೆಯಿಂದ ಕಾಣಬೇಕೆಂಬ ನಿಯಮವಿದ್ದರೂ ಮೆರಿಲ್‌ನ ಮೊದಲ ಪತ್ನಿ ಬಾರ್ಬರಳ ದುಷ್ಟತನದಿಂದ ಉಳಿದ ಪತ್ನಿಯರ ಮಕ್ಕಳು ಆಗಾಗ ದಂಡನೆಗೆ ಒಳಗಾಗುತ್ತಿದ್ದರು. ಎಫ್ಎಲ್ಡಿಎಸ್ ನಿಯಮದಂತೆ ಯಾವ ತಂದೆಯೂ ತಮ್ಮ ಮದುವೆಯಾದ ಮಕ್ಕಳ ಗಂಡನ ಮನೆಯ ವ್ಯವಹಾರದಲ್ಲಿ ತಲೆ ಹಾಕುವಂತಿರಲಿಲ್ಲ. ಕ್ಯಾರೊಲಿನ್‌ಳ ಅಣ್ಣ ಆರ್ಥರ್ ಮಲತಾಯಿಯ ಒಬ್ಬ ಮಗಳಾದ ಥೆಲ್ಮಾಳನ್ನು ಗುಟ್ಟಾಗಿ ಪ್ರೀತಿಸುತ್ತಿದ್ದುದರಿಂದ ಅದಕ್ಕೆ ಸಮುದಾಯದ ವಿರೋಧ ಎದುರಿಸಲಾಗದೇ ಅವರಿಬ್ಬರೂ ಸಮಯದಾಯದಿಂದ ಹೊರಬಂದು ಸಾಲ್ಟ್ ಲೇಕ್ ಸಿಟಿಯಲ್ಲಿ ಹೊಸ ಜೀವನ ಕಟ್ಟಿಕೊಂಡಿದ್ದರು. ಕ್ಯಾರೊಲಿನ್ ಅಕ್ಕ ಲಿಂಡಾ ಕೂಡ ಬಹುಪತ್ನಿತ್ವ ಸಿದ್ಧಾಂತದ ವಿರೋಧಿಯಾಗಿದ್ದರಿಂದ ಪ್ರೀತಿಸುತ್ತಿದ್ದವನ ಜೊತೆ ಪಲಾಯನ ಮಾಡಿದ್ದಳು. ತಂಗಿಯ ದಾರುಣ ಬದುಕಿನ ಅರಿವಿದ್ದ ಅವಳಿಗೆ ಹೇಗಾದರೂ ಸಹಾಯ ಮಾಡಬೇಕೆಂಬ ಮನಸ್ಸಿತ್ತು. ಮುಂದೆ ಕ್ಯಾರೊಲಿನ್‌ಳ ಪಲಾಯನದ ಸಮಯದಲ್ಲಿ ತಂಗಿಯ ನೆರವಿಗೆ ಮೊದಲು ಬಂದವಳು ಈ ಅಕ್ಕನೇ.

ವಾರೆನ್ ಜೆಫ್ ಧರ್ಮಗುರುವಾದ ಮೇಲೆ ಸಮುದಾಯದ ರೀತಿನೀತಿಗಳಲ್ಲಿ ಕಠಿಣ ಕ್ರಮ ತರುವುದರ ಜೊತೆಗೆ ತಮ್ಮ ಚರ್ಚು ನಡೆಸುವ ಶಾಲೆಗಳಲ್ಲಿ ಮಾತ್ರ ಮಕ್ಕಳು ಓದಬೇಕೆಂದು ಆದೇಶ ಹೊರಡಿಸಿದ. ಅದನ್ನು ಪ್ರೈವೇಟ್ ಪ್ರೀಸ್ಟ್ ಹುಡ್ ಸ್ಕೂಲ್ ಎಂದು ಕರೆಯಲಾಯಿತು. ತಮ್ಮದೇ ಉದ್ದ ನಿಲುವಂಗಿಗಳ ಉಡುಪಿನಲ್ಲಿ ವಿಚಿತ್ರವಾಗಿ ಹೊರಗಿನವರಿಗೆ ಕಾಣಿಸಿಕೊಳ್ಳುತ್ತಿದ್ದ ಈ ಸಮುದಾಯದವರಿಗೆ ಕೆಂಪು ಬಣ್ಣವನ್ನು ಕೂಡ ನಿಷೇಧಿಸಲಾಯಿತು.

ಸಮುದಾಯದ ಮಕ್ಕಳು ದೇವರ ಆಯ್ಕೆ. ಆದ್ದರಿಂದ ಅವರನ್ನು ದುಷ್ಟ ಆಲೋಚನೆ, ಶಕ್ತಿಗಳಿಂದ ದೂರವಿಟ್ಟು ರಕ್ಷಿಸುವ ಜವಾಬ್ದಾರಿ ದೇವರ ಪ್ರತಿನಿಧಿಗಳಾದ ತಮ್ಮ ಆದ್ಯ ಕರ್ತವ್ಯವೂ ಹೌದು ಎಂಬ ಬೋಧನೆ ಗಳಿಂದ ಜಗತ್ತಿನ ನಿಯಮಗಳನ್ನೇ ತನಗೆ ಬೇಕಾದಂತೆ ತಿರುಗಿಸಿ ಈ ಧರ್ಮಗುರು ಸುಳ್ಳು, ಮೌಢ್ಯಗಳಿಂದ ಮಕ್ಕಳ ಮನಸ್ಸನ್ನು ಪ್ರಭಾವಿಸತೊಡಗಿದ್ದ. ಶಾಲೆಗಳಲ್ಲಿ ಜ್ಞಾನರ್ಜನೆಗೆ ಇಡಲಾಗಿದ್ದ ಪುಸ್ತಕಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಿದ. ಕ್ಯಾರೊಲಿನ್ ಬಳಿಯಿದ್ದ ೩೦೦ ಪುಸ್ತಕಗಳಿಗೂ ಅದೇ ಗತಿಯಾಗಿತ್ತು.

ಯಾವುದೇ ಸಮಯದಲ್ಲೂ ಗಂಡನ ಜೊತೆ ಲೈಂಗಿಕ ಸಂಪರ್ಕ ತಪ್ಪಿಸುವುದು ಧರ್ಮ ವಿರೋಧ ವಾಗಿದ್ದರಿಂದ ಅನೇಕ ಹೆಂಡತಿಯರ ಹಾಗೂ ಅಸಂಖ್ಯಾತ ಮಕ್ಕಳ ಗಂಡನಾದವನು ಒಂದು ರೀತಿಯ ರಾಜನಂತೆ ಮೆರೆಯುತ್ತಿದ್ದ. ಆ ಅಧಿಕಾರಬಲದಿಂದ ಅವರನ್ನೆಲ್ಲ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಯಾವುದೇ ಸ್ವಂತ ಅಭಿಪ್ರಾಯ, ಸ್ವಾತಂತ್ರ್ಯಕ್ಕೆ ಹೆಂಡತಿಯರು ಅರ್ಹರಲ್ಲ ಎಂದು ತನ್ನದೇ ರೀತಿಯಲ್ಲಿ ಅವರಿಗೆ ಶಿಕ್ಷೆ ವಿಧಿಸುತ್ತಾ ಆನಂದಿಸುವುದು ಸಮಯದಾಯದ ಬಹುತೇಕ ಎಲ್ಲ ಗಂಡಸರ ಮುಖ್ಯ ಆಕಾಂಕ್ಷೆಯಾಗಿರುತ್ತಿತ್ತು. ಪತ್ನಿಯರು ಕೆಲಸ ಮಾಡಿ ಸಂಪಾದಿಸುವ ಹಣ ಅಥವಾ ಉದ್ಯೋಗದಿಂದ ದೊರೆಯುವ ಸಂಬಳದಲ್ಲೂ ಅವಳ ಹಕ್ಕಿರುತ್ತಿರಲಿಲ್ಲ. ಎಲ್ಲವೂ ಗಂಡನ ಪಾಲಾಗುತ್ತಿತ್ತು.

ಮೆರಿಲ್‌ನನ್ನು ಉಳಿದ ೬ ಜನರೊಡನೆ ೭ನೇ ಹೆಂಡತಿಯಾಗಿ ಹಂಚಿಕೊಳ್ಳಬೇಕಾದ ಅನಿವಾರ್ಯತೆ ತಂದ ಅನೇಕ ಕಷ್ಟನಷ್ಟಗಳು ದಿನದಿನಕ್ಕೂ ಕ್ಯಾರೊಲಿನ್‌ಳ ನಿರ್ಧಾರವನ್ನು ಗಟ್ಟಿಗೊಳಿಸುತ್ತಲೇ ಹೋಯಿತು. ಅವಳ ದೊಡ್ಡ ಮಗ ಆರ್ಥರ್ ಹಾಗೂ ೩ನೇ ಮಗಳು ಬೆಟ್ಟಿಯನ್ನು ಸಂಬಾಳಿಸುವುದು ಮತ್ತು ಸದಾ ರೋಗಿಯಾಗಿದ್ದ ಹ್ಯಾರಿಸನ್ ಹಾಗೂ ೮ನೇ ಹೆರಿಗೆಯಲ್ಲಿ ಸತ್ತು ಸತ್ತು ಪಡೆದ ಬ್ರೈಸನ್ ಇವರಿಗಿಂತ ಕಡಿಮೆ ಇರಲಿಲ್ಲ. ನಡುವಿನ ನಾಲ್ಕು ಮಕ್ಕಳದು ಅಷ್ಟೇನೂ ಸಮಸ್ಯೆ ಇರಲಿಲ್ಲ. ದೊಡ್ಡ ಮಗ ಈಗ ೧೫ ವರ್ಷದವನಾಗಿದ್ದ. ತಂದೆಯ ಜೊತೆ ಕಟ್ಟಡ ಕಂಟ್ರಾಕ್ಟ್ ಕಾಮಗಾರಿಗಳಿಗೆ ಜೊತೆ ನೀಡುತ್ತಿದ್ದ. ಬೆಟ್ಟಿ ಮೆರಿಲ್‌ನ ಮುದ್ದು ಮಗಳಾಗಿದ್ದು ಎಫ್‌ಎಲ್‌ಡಿಎಸ್ ನಿಂದ ಅತ್ಯಂತ ಪ್ರಭಾವಿತಳಾಗಿದ್ದು ತಾಯಿಯನ್ನು ಯಾವಾಗಲೂ ವಿರೋಧಿಸುತ್ತಿದ್ದಳು.

ಆಗಾಗ ವಾರನ್ ಜೆಫ್‌ನ ಮನೆಗೆ ಬೇರೆ ಮಕ್ಕಳೊಂದಿಗೆ ರಾತ್ರಿ ಇದ್ದು ಬರುತ್ತಿದ್ದಳು. ವಾರನ್ ಜೆಫ್‌ನಿಗೆ ಈರೀತಿ ಹದಿಹರೆಯದ ಮಕ್ಕಳನ್ನು ಪಾರ್ಟಿ ನೆಪದಲ್ಲಿ ರಾತ್ರಿ ಮನೆಯಲ್ಲಿ ಉಳಿಸಿಕೊಂಡು ಅವರೊಂದಿಗೆ ಮಾತನಾಡುವ ಚಟವಿತ್ತು. ಮುಂದೊಮ್ಮೆ ಅವರಲ್ಲಿ ಯಾರ್‍ಯಾರನ್ನು ತನ್ನ ಅಂತಃಪುರಕ್ಕೆ ಸೇರಿಸಿಕೊಳ್ಳಬಹುದೆಂಬ ದುರಾಲೋಚನೆಯೂ ಇತ್ತು. ೧೨ರ ಬಾಲೆ ಬೆಟ್ಟಿಯನ್ನು ಕಾಪಾಡಿಕೊಳ್ಳುವುದು ಕ್ಯಾರೊಲಿನ್‌ಳಿಗೆ ಸಮಸ್ಯೆಯಾಗಿತ್ತು.

ಗಂಡ ಮೆರಿಲ್‌ನಿಗೆ ಈಗಾಗಲೇ ತನ್ನ ಮೂವರು ಮಕ್ಕಳನ್ನು ವಾರನ್‌ಗೆ ಮದುವೆ ಮಾಡಿಸಿದ ಮೇಲೆ ಬೆಟ್ಟಿಯನ್ನು ಮದುವೆ ಮಾಡಿಕೊಡಲು ಯಾವ ಅಭ್ಯಂತರವೂ ಇರಲಿಲ್ಲ. ಅಂಕಲ್ ರೂಲನ್ ಈಗಾಗಲೇ ಪರದೆಯ ಹಿಂದೆ ಸರಿದಿದ್ದ. ಅವನದೇ ಪತ್ನಿಯರನ್ನು ಕೂಡ ಅವನಿಂದ ವಾರನ್ ಜೆಫ್ ದೂರಮಾಡಿದ್ದ. ಸಾರ್ವಜನಿಕವಾಗಿ

ಕಾಣಿಸಿಕೊಳ್ಳದಂತೆ, ಕಂಡರೂ ಯಾರೂ ಅವರನ್ನು ಮಾತಾಡಿಸದಂತೆ ರೂಲನ್‌ಗೆ ನಿರ್ಬಂಧ ವಿಧಿಸಿದ್ದ. ಇದೆಲ್ಲಾ ತನ್ನ ಸ್ಥಾನವನ್ನು ಸಮುದಾಯದಲ್ಲಿ ಭದ್ರ ಮಾಡಿಕೊಳ್ಳುವ ಸಲುವಾಗಿ.

ಅಂಕಲ್ ರೂಲನ್‌ನ ಕಾಲದಲ್ಲಿ ವಿವಾಹದ ವಯಸ್ಸು ೨೦ರ ನಂತರವಿದ್ದರೆ ವಾರನ್ ಪದವಿಗೆ ಬಂದ ಮೇಲೆ ಅದು ೧೬ಕ್ಕೆ ಇಳಿದಿತ್ತು. ಮಲತಂದೆಯನ್ನೇ ಮಗಳು ಮದುವೆಯಾಗುವ ವಿಕೃತಿ ಕೂಡ ಸಂಭವಿಸಿತ್ತು. ೧೪ ವರ್ಷದ ಬಾಲೆಯ ತಾಯಿಯಿಂದ ಅವಳ ಜನ್ಮದಾತನನ್ನು ಬೇರ್ಪಡಿಸಿ ತಾಯಿಗೆ ಬೇರೆಯವರೊಂದಿಗೆ ಮದುವೆ ಮಾಡಿಸಿದ. ಹಲವಾರು ತಿಂಗಳ ನಂತರ ಮಗಳನ್ನು ತಾಯಿ ಮದುವೆಯಾದ ಹೊಸ ಗಂಡನಿಗೆ ಮದುವೆ ಮಾಡಿಸಿದ್ದ. ಇಂಥ ವಿಲಕ್ಷಣ ಅಸಹ್ಯಕರವಾದ ಸಂಗತಿಗಳಿಂದಾಗಿ ಕ್ಯಾರೊಲಿನ್‌ಳಿಗೆ ೧೨ರ ಮಗಳು ಬೆಟ್ಟಿಯನ್ನು ಕಾಪಾಡಿಕೊಳ್ಳುವದೇ ದೊಡ್ಡ ಸಮಸ್ಯೆಯಾಯಿತು.

ಭಯ, ಶೋಷಣೆ, ಅವಮಾನಗಳಿಂದ ಬಿಡುಗಡೆಯಾಗಲು ಕ್ಯಾರೊಲಿನ್‌ಗೆ ಇದ್ದ ಒಂದೇ ದಾರಿಯೆಂದರೆ ಎಫ್‌ಎಲ್‌ಡಿಯ ಬಿಗಿ ಹಿಡಿತದಿಂದ ಪಲಾಯನ. ಅದಕ್ಕಾಗಿ ಅವಳು ಮಾನಸಿಕವಾಗಿ ಹಾಗೂ ದೈಹಿಕವಾಗಿ ಈಗ ಸಜ್ಜಾಗಿದ್ದಳು. ಏಪ್ರಿಲ್ ೨೧, ೨೦೦೩ರ ರಾತ್ರಿ ೧೦ ಗಂಟೆಯಾಗಿತ್ತು. ತನ್ನ ಹಾಗೂ ಮಕ್‌ಕಳ ಭವಿಷ್ಯ ನಿರ್ಧರಿಸುವ ಹೊತ್ತು ಈ ಸಮಯ. ದಿನ ಕಳೆದು ಹೋದರೆ ಇಂಥ ಸದವಕಾಶ ಮತ್ತೆ ಸಿಗಲಾರದೆಂಬ ನಂಬಿಕೆ. ಮೆರಿಲ್ ಜೋಸೆಫ್ ವ್ಯವಹಾರ ನಿಮಿತ್ತ ಊರಿನಿಂದ ಹೊರಗೆ ಹೋಗಿದ್ದ. ಮಕ್ಕಳೆಲ್ಲ ನಿದ್ರೆಯಲ್ಲಿದ್ದರು. ೩೫ ವರ್ಷದಲ್ಲಿ ಅವಳು ಒಂದು ಜೀವಮಾನದ ಕಷ್ಟಗಳನ್ನೆಲ್ಲಾ ಅನುಭವಿಸಿಯಾಗಿತ್ತು. ತಾನೊಬ್ಬಳೇ ಸಮುದಾಯ ತೊರೆಯುವುದು ಸುಲಭವಾಗಿತ್ತು. ಆದರೆ ತನ್ನ ಪ್ರಾಣ ಪಣಕ್ಕಿಟ್ಟು ಹೆತ್ತು ಹೊತ್ತು ಪಾಲಿಸಿ, ಪೋಷಿಸಿದ ಆ ಎಂಟು ಮಕ್ಕಳನ್ನು ಅವಳು ಇಲ್ಲಿಂದ ಪಾರುಮಾಡಬೇಕಿತ್ತು. ಹೊರಗಿನ ಹೊಸ ಜಗತ್ತಿಗೆ ಆ ಮಕ್ಕಳನ್ನು ಪರಿಚಯಿಸಬೇಕಿತ್ತು. ಅದೂ ಕೈಯಲ್ಲಿ ನಯಾಪೈಸೆ ಇಲ್ಲದೆ, ಏಕಾಂಗಿಯಾಗಿ ಹೋರಾಡಬೇಕಾದ ಅರಿವಿದ್ದರೂ ಧೃತಿಗೆಡಲಿಲ್ಲ.

ನರ್ಸರಿ ಶಾಲೆಯಲ್ಲಿ ಒಂದೆರಡು ವರ್ಷ ಅಧ್ಯಾಪನ ಮಾಡಿದ ಅನುಭವ, ಕಂಪ್ಯೂಟರ್ ಜ್ಞಾನ ಅವಳಲ್ಲಿ ಭರವಸೆಯ ಬೆಳಕನ್ನು ತುಂಬಿಸಿತ್ತು. ಪಲಾಯನದ ಹಾದಿ ಸುಲಭವೂ ಆಗಿರಲಿಲ್ಲ. ತನ್ನ ಮಕ್ಕಳನ್ನು ಹಿಂದೆ ಪಡೆಯಲು ಮೆರಿಲ್ ಯಾವ ಹಂತಕ್ಕೂ ಹೋಗಬಲ್ಲವನಾಗಿದ್ದ. ಮನೆಯಲ್ಲಿದ್ದ ಉಳಿದ ೬ ಪತ್ನಿಯರ ಕಣ್ಣು ತಪ್ಪಿಸಿ ಹೊರಗೆ ಹೋಗುವ ಸಾಹಸ ಸರಳವಾಗಿರಲಿಲ್ಲ. ಸಮುದಾಯದ ಪೋಲೀಸರು ಕೂಡ ಎಫ್‌ಎಲ್‌ಡಿ ಅನುಯಾಯಿಗಳೇ ಆಗಿದ್ದು ಮೆರಿಲ್‌ನ ಆಪ್ತರಾಗಿದ್ದರು. ಮಧ್ಯರಾತ್ರಿ ಒಬ್ಬಳೇ ಮಕ್ಕಳೊಂದಿಗೆ ಸರಹದ್ದು ದಾಟಿ ಹೋಗುವ ದಾರಿಯ ಎಲ್ಲ ಕಂಟಕಗಳನ್ನು ಎಚ್ಚರಿಕೆಯಿಂದ ನಿವಾರಿಸಿಕೊಳ್ಳಬೇಕಿತ್ತು. ಒಂದೊಂದೇ ಮಕ್ಕಳನ್ನು ಸದ್ದಿಲ್ಲದೆ ತನ್ನದೇ ವ್ಯಾನಿನಲ್ಲಿ ಕರೆದೊಯ್ದು ಸೀಟಿಗೆ ಬೆಲ್ಟ್ ಬಿಗಿದು ಕೂಡಿಸುವಷ್ಟರಲ್ಲಿ ಏದುಸಿರು ಬಂದಿತ್ತು. ದೊಡ್ಡ ಮಕ್ಕಳಿಗೆ ಅವಳು ತಾನು ಎಫ್‌ಎಲ್‌ಡಿ ತೊರೆಯುವ ವಿಷಯ ಸದ್ಯಕ್ಕೆ ಗೊತ್ತಾಗಬಾರದಿತ್ತು. ಒಮ್ಮೆ ಸರಹದ್ದು ದಾಟಿ ಸಾಲ್ಟ್ ಲೇಕ್ ಸಿಟಿಯಲ್ಲಿದ್ದ ಅಣ್ಣ ಆರ್ಥರನ ನೆರವು ಸಿಕ್ಕರೆ ಸಾಕಿತ್ತು. ಅವಳ ಇನ್ನೊಬ್ಬ ಸಹೋದರ ಡೇರಿಲ್ ಕೂಡ ಅವನ ವಾಹನದೊಂದಿಗೆ ಊರಾಚೆ ಕಾಯುತ್ತಿದ್ದ. ಈಗವಳು ಎರಡು ದೊಡ್ಡ ಗಾರ್ಬೇಜ್ ಬ್ಯಾಗ್‌ಗಳಲ್ಲಿ ಮಕ್ಕಳ

ಅವಶ್ಯಕವಾದ ಬಟ್ಟೆ ಹಾಗೂ ಸಾಮಾನುಗಳನ್ನು ತುಂಬಿದಳು. ಇಷ್ಟೆಲ್ಲಾ ಆಗುವಾಗ ಗಂಟೆ ೪ ಆಗಿತ್ತು. ಮೆರಿಲ್‌ನ ಒಬ್ಬ ಪತ್ನಿಗೆ ಅನುಮಾನ ಬಂದು ಅವಳು ಗಂಡನಿಗೆ ಫೋನ್ ಮಾಡಲು ಧಾವಿಸಿದ್ದಳು. ಆ ಕಡೆಯಿಂದ ಮೆರಿಲ್ ಕ್ಯಾರೊಲಿನ್‌ಗಾಗಿ ಕರೆ ಮಾಡುತ್ತಲೇ ಇದ್ದ. ಹುಡುಕಾಟ ಪ್ರಾರಂಭವಾಗುವ ಮೊದಲೇ ಅವಳು ವಾಹನ ಚಲಾಯಿಸುತ್ತಾ ವೇಗ ಹೆಚ್ಚಿಸುತ್ತಾ ಸರಹದ್ದಿನ ಕಡೆ ಮೂರು ಮೈಲು ದೂರದಲ್ಲಿ ಕಾಯುತ್ತಿದ್ದ ಅಣ್ಣಂದಿರ ದೊಡ್ಡ ಎರಡು ಕಾರುಗಳತ್ತ ಸಾಗಿದ್ದಳು.

ಕ್ಯಾರೊಲಿನ್ ಪಲಾಯನ ಯಶಸ್ವಿಯಾದರೂ ಆಕೆ ಮುಂದೆ ಗಂಡನ ವಿರುದ್ಧ ಕಾನೂನು ಹೋರಾಟ ಮಾಡಬೇಕಿತ್ತು. ಮಕ್ಕಳ ಹಕ್ಕನ್ನು ಪಡೆಯಲು, ನಡೆಸಿದ ಸುದೀರ್ಘ ಹೋರಾಟದ ರೋಚಕ ಕಥೆಯೇ ಈ ೪೨೫ ಪುಟಗಳ ಕೃತಿಯ ಅರ್ಧ ಭಾಗದಷ್ಟಿದೆ. ಕೊನೆಗೂ ಕ್ಯಾರೊಲಿನ ತನ್ನ ಹೋರಾಟದಲ್ಲಿ ಜಯಗಳಿಸುತ್ತಾಳೆ. ೮ ಮಕ್ಕಳನ್ನು ಸುಶಿಕ್ಷಿತ ಸಮಾಜದಲ್ಲಿ ಸತ್ಪ್ರಜೆಗಳನ್ನಾಗಿ ಮಾಡಲು ದೇಹ ದಂಡಿಸುತ್ತಾ, ಹಗಲಿರುಳು ಶ್ರಮಿಸುತ್ತಿದ್ದಾಗ, ಮರುಭೂಮಿಯಾಗಿದ್ದ ಅವಳ ಹೃದಯದಲ್ಲಿ ಮತ್ತೊಮ್ಮೆ ಪ್ರೇಮದ ಕಾರಂಜಿ ಹುಟ್ಟಿಸಿದ್ದ ಬ್ರಿಯಾನ್. ಎಫ್‌ಎಲ್‌ಡಿಎಸ್ ನಿಂದ ಹೊರಬಂದ ಮಹಿಳೆಯರಲ್ಲಿ ತನ್ನ ಮಕ್ಕಳ ಹಕ್ಕನ್ನು ಪಡೆದ ಏಕೈಕ ವ್ಯಕ್ತಿ ಕ್ಯಾರೊಲಿನ್ ಆಗಿದ್ದಾಳೆ.

೨೦೦೬ರಲ್ಲಿ ಉಥಾದ ಅಟಾರ್ನಿ ಜನರಲ್ ಇವಳು ನೀಡಿದ ದೂರನ್ನು ಪರಿಶೀಲಿಸಿ ವಾರನ್ ಜೆಫ್‌ನನ್ನು ಬಂಧಿಸಿ ಅವನ ವಿರುದ್ಧ ತೀರ್ಪು ನೀಡಿ ಸರೆಮನೆಗೆ ತಳ್ಳಿದರು.

ಬಡತನ, ಅನಕ್ಷರತೆ, ಅಸಹಾಯಕತೆಯ ಉರಿ ಬೆಂಕಿಯಲ್ಲಿ ಸುಟ್ಟು ಹೋಗುತ್ತಿರುವ ಶೋಷಿತ ಮಹಿಳಾ ಸಮುದಾಯದ ನಡುವೆ ಒಂದು ಆಶಾಕಿರಣವಾಗಿ ಕ್ಯಾರೊಲಿನ್ ಹೋರಾಟದ ಬದುಕಿನ ನೈಜ ಚಿತ್ರಣ ಇಲ್ಲಿದೆ. ತನ್ನ ಸಮುದಾಯದ ಹುಳುಕುಗಳನ್ನು ಹೊರಜಗತ್ತಿಗೆ ಬಿಚ್ಚಿಡುವ ಛಾತಿ ತೋರಿಸಿನ ಕ್ಯಾರೊಲಿನ್ ಒಬ್ಬ ದಿಟ್ಟ ಅಸಾಮಾನ್ಯ ಹೆಣ್ಣು ಎನ್ನುವುದು ಅವಳ ನಿರಂತರ ಶ್ರಮ ಗುರಿ ಸಾಧಿಸುವಲ್ಲಿ ಅವಳ ಆತ್ಮವಿಶ್ವಾಸ ಹೆಣ್ಣು ಕುಲಕ್ಕೆ ಮಾದರಿ ಎನಿಸಿದೆ.

*****

ತಿರು ಚೆಂಗಟ್ಟಾನ್ ಗುಡಿಯಲ್ಲಿ ವಾತಾಪಿ ಗಣಪತಿ

- ಸರಸ್ವತಿ ನಟರಾಜ್

ನಾನು ಈ ಲೇಔಟ್ ಗೆ ಬಂದು ಮೂರು ವರ್ಷವಾಯಿತು. ಕಳೆದ ಎರಡು ವರ್ಷದಿಂದ ಎಲ್ಲಾ ಕಾರ್ಯಕ್ರಮಗಳು ಸ್ಥಗಿತವಾಗಿದ್ದು ಎಲ್ಲರಿಗೂ ಗೊತ್ತೇ ಇದೆ. ಈಗ ಕರೋನಾ ಮಾರಿಯ ಕೆಂಗಣ್ಣು ಶಾಂತವಾಗಿ ಎಲ್ಲರೂ ಇಂಥ ಕಾಲ ಬಿಟ್ಟರೆ ಮತ್ತೆ ಸಿಗುವುದಿಲ್ಲ ಎನ್ನುವಂತೆ ಪ್ರವಾಸಗಳನ್ನು ಮಾಡಲು ಪ್ರಾರಂಭಿಸಿದ್ದೇವೆ. ಅನೇಕರ ಬಾಯಿಂದ ಇಲ್ಲಿಯ ನಿವಾಸಿಗಳಾದ ಬಾಲನ್ ದಂಪತಿಗಳು ಪ್ರವಾಸ ಏರ್ಪಡಿಸುವ ಕುರಿತು ಕೇಳಿದ್ದೆ. ಪ್ರವಾಸದ ಅಚ್ಚುಕಟ್ಟುತನ, ಶಿಸ್ತು ಮತ್ತು ಅಪರೂಪದ ದೇಗುಲಗಳ ದರ್ಶನ - ಇದು ಅವರ ಮುಖ್ಯ ಉದ್ದೇಶ.

ನನಗೆ ಕಳೆದ ತಿಂಗಳು ಈ ಪ್ರವಾಸದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿತು. ಕಾಂಚೀಪುರಂ ಹಿಂದೆಯೇ ನಾನು ನೋಡಿದ ಸ್ಥಳ. ಆದರೆ ನೋಡಿದ್ದು ಸ್ವಲ್ಪ. ಎಷ್ಟು ಸ್ವಲ್ಪ ಎಂದು ಪ್ರವಾಸದ ನಂತರವೇ ತಿಳಿದದ್ದು. ಅಲ್ಲಿಯ ಮುಖ್ಯವಾದ ಮೂರು ದೇವಸ್ಥಾನಗಳನ್ನು ನೋಡಿದ್ದು ಬಿಟ್ಟರೆ ಅಲ್ಲಿ ಇನ್ನೇನಾದರೂ ಇದೆ ಎಂಬುದೂ ಗೊತ್ತಿರಲಿಲ್ಲ. ಕಳೆದ ತಿಂಗಳು ಕಾಂಚೀಪುರಂ ಪ್ರವಾಸದಲ್ಲಿದ್ದಾಗ ಸುತ್ತಮುತ್ತಲಿನ ನಲವತ್ತೈದು-ಐವತ್ತು ಕಿಲೋಮೀಟರುಗಳ ಅಂತರದಲ್ಲಿ ಕೆಲವು ವಿಶಿಷ್ಟವಾದ, ಬಹಳ ಪ್ರಾಚೀನವಾದ, ಅಪರೂಪವಾದ ದೇವಸ್ಥಾನಗಳನ್ನು ನೋಡಿದೆವು.

ಬಾಲನ್ ಸರ್ ಪ್ರತಿ ದೇವಸ್ಥಾನ ದರ್ಶನಕ್ಕೂ ಮುನ್ನ ಅಲ್ಲಿಯ ಸ್ಥಳ ವಿಶೇಷ, ಪೌರಾಣಿಕ ಹಿನ್ನೆಲೆ ಅಥವಾ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸುತ್ತಾರೆ. ಹೀಗೇ ಪ್ರಯಾಣ ಮಾಡುತ್ತಿದ್ದಾಗ “ಕುಂಭಕೋಣಂ ಬಳಿ ತಿರು ಚೆಂಗಟ್ಟಾನ್ ಗುಡಿ. ಅಲ್ಲಿ ವಾತಾಪಿ ಗಣಪತಿ ತುಂಬಾ ಚೆನ್ನಾಗಿದೆ" ಎಂದರು.

ಅರೆ, ಕರ್ನಾಟಕ ಸಂಗೀತದ ಮೇರು ಕೃತಿ, ಸಂಗೀತ ಕಛೇರಿಯ ಆರಂಭದ ಅಲಿಖಿತ ಕೃತಿ ವಾತಾಪಿ ಗಣಪತಿಂ ಭಜೇ. ಅದನ್ನು ಬಿಟ್ಟರೆ ಈಗಲೇ ಇದರ ಬಗ್ಗೆ ಕೇಳುತ್ತಿರುವುದು ಎನಿಸಿ ಆಸಕ್ತಿಯಿಂದ ಕಿವಿಗೊಟ್ಟೆವು. ಇದರ ಕುರಿತು ತಿಳಿಯದವರಿಗಾಗಿ ಇದನ್ನು ಹಂಚಿಕೊಳ್ಳುತ್ತಿದ್ದೇನೆ.

ಇದರ ಬಗ್ಗೆ ಒಂದು ಚರಿತ್ರೆ ಇದೆ.

ವಾತಾಪಿ ನಮ್ಮ ಇಂದಿನ ಬಾದಾಮಿ. ಚಾಲುಕ್ಯ ವಂಶದ ರಾಜಧಾನಿ. ಇಮ್ಮಡಿ ಪುಲಿಕೇಶಿಯ ಕಾಲ. ಮಹಾ ಪರಾಕ್ರಮಿ ಇಮ್ಮಡಿ ಪುಲಿಕೇಶಿ, ದೊರೆ ಮಹೇಂದ್ರವರ್ಮ ಆಳುತ್ತಿದ್ದ ಪಲ್ಲವ ರಾಜ್ಯವನ್ನು ಆಕ್ರಮಿಸುತ್ತಾನೆ. ಯುದ್ಧ ಸಾರುತ್ತಾನೆ. ಪುಲಿಕೇಶಿಯ ಅಪಾರ ಸೈನ್ಯ ತನ್ನ ರಾಜ್ಯವನ್ನು ನಾಶಮಾಡುವುದನ್ನು ತಪ್ಪಿಸಲು ಮಹೇಂದ್ರವರ್ಮ ಶರಣಾಗುತ್ತಾನೆ. ಮಹೇಂದ್ರವರ್ಮ ಪುಲಿಕೇಶಿಗೆ ಶರಣಾಗಿ ದೊಡ್ಡ ಮೊತ್ತದ ಹಣ ಮತ್ತು ಬೆಲೆಬಾಳುವ ಉಡುಗೊರೆಗಳನ್ನು ಕೊಡುತ್ತಾನೆ.

ಮಹೇಂದ್ರವರ್ಮನ ಮಗ 1ನೇ ನರಸಿಂಹವರ್ಮ. ಅವನಿಗೆ ಪಟ್ಟ ಕಟ್ಟಿ ನಂತರ ಮಹೇಂದ್ರವರ್ಮ ತೀರಿ ಕೊಳ್ಳುತ್ತಾನೆ. ತಂದೆಗಾದ ಪರಾಭವದ ಪ್ರತೀಕಾರ ನರಸಿಂಹ ಪಲ್ಲವನ ಗುರಿ. ಮನಸ್ಸಿನಲ್ಲಿ ಇದ್ದ ಒಂದೇ ಒಂದು ಗುರಿ ಎಂದರೆ ತಮ್ಮನ್ನು ಮಣಿಸಿದ ಪುಲಿಕೇಶಿಯನ್ನು ಮಣಿಸುವುದು. ಹೀಗಾಗಿ ನರಸಿಂಹ ವರ್ಮ ಬಹಳ ದೊಡ್ಡ ಸೈನ್ಯವನ್ನು ಒಟ್ಟುಮಾಡಿ ಯುದ್ಧಕ್ಕೆ ತಯಾರಾಗುತ್ತಾನೆ. ಯುದ್ಧದ ಸೇನಾಧಿಪತ್ಯವನ್ನು ಪರಂಜ್ಯೋತಿ ಎನ್ನುವ ವೀರ ಪರಾಕ್ರಮಿಗೆ ಒಪ್ಪಿಸುತ್ತಾನೆ.

ದೊಡ್ಡ ಸೈನ್ಯದೊಂದಿಗೆ ಇಬ್ಬರೂ ವಾತಾಪಿಯತ್ತ ಆಕ್ರಮಣ ಮಾಡುತ್ತಾರೆ. ಆ ಸಮಯದಲ್ಲಿ ಪುಲಿಕೇಶಿ ಬೇರೆಕಡೆ ದಿಗ್ವಿಜಯದಲ್ಲಿ ತೊಡಗಿಕೊಂಡಿರುತ್ತಾನೆ. ತನ್ನ ರಾಜ್ಯದ ಮೇಲೆ ಪಲ್ಲವರ ಆಕ್ರಮಣ ದ ಸೂಚನೆ ತಿಳಿದು ವಾಪಸ್ ಬಂದುಬಿಡುತ್ತಾನೆ.

ಸುಮಾರು ಐದು ಸಾವಿರ ಆನೆಗಳ ಸಮೇತ ಬಂದ ನರಸಿಂಹವರ್ಮನ ಅಪಾರ ಸೈನ್ಯ ಸೇನಾಧಿಪತಿ ಪರಂಜ್ಯೋತಿಯ ನಾಯಕತ್ವದಲ್ಲಿ ಆಗಿನ ವಾತಾಪಿಯ ಮೇಲೆ ಮುಗಿಬೀಳುತ್ತದೆ. ಪೂರ್ತಿ ಬಾದಾಮಿ ನಾಶವಾಗುತ್ತದೆ. ವಾತಾಪಿಯಲ್ಲಿ ಒಂದೇ ಒಂದು ಕಂಬವೂ ನಿಂತಿರಬಾರದು ಎಂಬ ನರಸಿಂಹವರ್ಮನ ಆಜ್ಞೆಯಂತೆ ಪರಂಜ್ಯೋತಿ ವಾತಾಪಿಯನ್ನು ನಾಶ ಮಾಡುವಾಗ ಒಂದು ಗುಡಿಯಲ್ಲಿ ಸುಂದರ ಗಣಪತಿ ವಿಗ್ರಹ ಕಾಣಿಸುತ್ತದೆ. ಬಾಕಿ ಎಲ್ಲವನ್ನೂ ನಾಶಮಾಡಿದರೂ ಗಣಪತಿಯನ್ನು ನಾಶಮಾಡದೆ ಬಿಟ್ಟುಬಿಡುತ್ತಾನೆ. ಆದರೆ ಆ ವಿನಾಶದ ಮೊತ್ತದಿಂದ ಪರಂಜ್ಯೋತಿ ಬಹಳ ನೊಂದುಕೊಳ್ಳುತ್ತಾನೆ.

ಪರಂಜ್ಯೋತಿಯ ಪರಾಕ್ರಮಕ್ಕೆ ಮೆಚ್ಚಿ, ನರಸಿಂಹವರ್ಮ ಆನೆಗಳ ಮೇಲೆ ಹೊರೆಸಿ ಕಳಿಸುವಷ್ಟು ಐಶ್ವರ್ಯವನ್ನು ತೆಗೆದುಕೊಂಡು ಹೋಗು ಎನ್ನುತ್ತಾನೆ.

ಶಿವಭಕ್ತನಾದ ಪರಂಜ್ಯೋತಿ 'ನನಗೆ ಏನೂ ಬೇಡ. ನನಗೆ ಈ ನಾಶದಿಂದ ಯುದ್ಧದ ಕುರಿತು ಜಿಗುಪ್ಸೆ ಆಗಿದೆ. ನಾನು ಇನ್ನೆಂದೂ ಯುದ್ಧ ಮಾಡಲಾರೆ. ನನ್ನಷ್ಟಕ್ಕೆ ನನ್ನನ್ನು ಬಿಟ್ಟುಬಿಡು. ಶಿವಪೂಜೆಯನ್ನು ಮಾಡಿಕೊಂಡು ಇರುತ್ತೇನೆ. ವಾತಾಪಿಯಿಂದ ಗಣಪತಿ ವಿಗ್ರಹವನ್ನು ಮಾತ್ರ ತೆಗೆದುಕೊಂಡು ಹೋಗುತ್ತೇನೆ' ಎನ್ನುತ್ತಾನೆ. ಆದರೂ ನರಸಿಂಹವರ್ಮ ಸಾಕಷ್ಟು ಸಂಪತ್ತು ಕೊಟ್ಟು ಇದರಿಂದ ನೀನು ದೇವಸ್ಥಾನವನ್ನು ಕಟ್ಟು ಎನ್ನುತ್ತಾನೆ.

ಪರಂಜ್ಯೋತಿಯ ಜನ್ಮಸ್ಥಳ ತಿರುವಾರೂರು. ಅವನು ದೇವಸ್ಥಾನ ನಿರ್ಮಿಸಿದ ಸ್ಥಳ ತಿರುಚೆಂಗಟ್ಟನ್ ಗುಡಿ. ಅಲ್ಲಿರುವುದು ವಾತಾಪಿ ಗಣಪತಿ.

ಭಕ್ತನಾದ ಅವನ ಹೆಸರನ್ನು ಮುಂದೆ ಸಿರುತೊಂಡರ್ ನಾಯನಾರ್ ಎಂದು ಗುರುತಿಸಲಾಗುತ್ತದೆ. ಅವನನ್ನು ಸ್ವತಃ ಈಶ್ವರನನ್ನು ನೋಡಿದವನು ಎಂದು ಕೊಂಡಾಡುತ್ತಾರೆ. ಭಕ್ತ ಸಿರಿಯಾಳ ಇವನ ಮಗನೇ.

ಸಂಗೀತ ಕೀರ್ತನೆಗಳ ಅಸಂಖ್ಯಾತ ಸಾಗರದ ಮುಂಚೂಣಿಯಲ್ಲಿರುವ 'ವಾತಾಪಿ ಗಣಪತಿಂ ಭಜೆ' - ಇದೇ ಗಣಪತಿಯ ಕುರಿತು ಮುತ್ತುಸ್ವಾಮಿ ದೀಕ್ಷಿತರು ಬರೆದದ್ದು, ಎಂದು ಹೇಳುತ್ತಾರೆ.

ವಾತಾಪಿ ಗಣಪತಿಂ ಭಜೆ ಕೀರ್ತನೆಯನ್ನು ಸಾಧಾರಣ ಎಲ್ಲರೂ ಕೇಳಿರುತ್ತಾರೆ. ಆದರೆ ಇದಕ್ಕೆ ಸಂಬಂಧಪಟ್ಟ ಐತಿಹ್ಯ ಮತ್ತು ಗಣೇಶ ವಿಗ್ರಹದ ಮೂಲ ನನಗೆ ಇದುವರೆಗೂ ಗೊತ್ತಿರಲಿಲ್ಲ. ಬಹುಶಃ ಬಹಳ ಜನಕ್ಕೆ ಗೊತ್ತಿರಲಾರದು ಎಂಬ ಅನಿಸಿಕೆಯಿಂದ ಇದನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ.

*****

ಮಾಧ್ಯಮಿಗಳು

– ಮನೋಹರ

ಅಪಪ್ರಚಾರಿಗಳೇ ಅಪ್ರಬದ್ಧರೇ
ಇತಿಹಾಸ ಅರಿತು ಮಾತನಾಡಿರಿ

ಅಸಂತೋಷಿಗಳೇ ಅಸಹಿಷ್ಣುಗಳೇ
ಉಂಡಮನೆಗೆ ಕೇಡು ಬಗೆಯದಿರಿ

ದೇಶದ್ರೋಹಿಗಳೇ ದೇಶವೈರಿಗಳೇ
ಅರಾಜಕತೆಗೆ ದಾರಿ ತೋರದಿರಿ

ಪೋಷಕರೇ ಘೋಷಕರೇ
ಪಾತಕ ಕೃತ್ಯಗಳ ವೈಭವೀಕರಿಸಿದಿರಿ

ವಿಘ್ನಸಂತೋಷಿಗಳೇ ವಿಕೃತಮನಸಿಗರೇ
ಸಂಸ್ಕೃತಿ ವಿನಾಶವನ್ನು ತಡೆಯಿರಿ

ಕೂಪಮಂಡೂಕಗಳೇ ಕುತ್ಸಿತಮನಸುಗಳೇ
ನಿಮ್ಮ ಮನವ ನಿಮ್ಮ ಮನೆಯ ಸಂತೈಸಿಕೊಳ್ಳಿ

ಬಣ್ಣದ ಕನ್ನಡಕ ತೊಟ್ಟವರೇ
ದೀಪದ ಕೆಳಗಿನ ಕತ್ತಲನ್ನು ಗಮನಿಸಿ

ಗಾಜಿನಮನೆಯ ಮಾತು ಮಥಿಕರೇ
ನುಡಿದರೆ ಮುತ್ತಿನ ಹಾರದಂತಿಲಿ

ಕೀರ್ತಿಶನಿ ಕ್ಷಿಪ್ರಧನದ ಬೆನ್ನು ಬಿದ್ದವರೇ
ನಾಡು ನುಡಿ ಬೆಳಗುವ ಮಾತು ರೂಢಿಸಿಕೊಳ್ಳಿ

*****

ಹಣಮಂತುವಿನ ಆಣಿಮುತ್ತುಗಳು

- ರತ್ನ

ಹಣಮಂತ ನನ್ನ ಕಾಲೇಜಿನ ಸಹಪಾಠಿ.

ಅವನ ಮನೆತನದಲ್ಲಿ ತಲೆಮಾರುಗಳಿಂದ ಅನೂಚಾನವಾಗಿ ನಡೆದುಕೊಂಡು ಬಂದಿರುವ ವಿಶಿಷ್ಟ ಸಂಪ್ರದಾಯ ಒಂದು ಉಂಟಂತೆ ಅದೇನೆಂದರೆ - ಅವರ ಮನೆತನದಲ್ಲಿ ಮೊದಲ ಗಂಡುಮಕ್ಕಳಿಗೆ, ತಿಪ್ಪೇರುದ್ರಪ್ಪ, ಬಸವಣ್ಣಜ್ಜ, ಮಲ್ಲಿಕಾರ್ಜುನಪ್ಪ, ಹಣಮಂತಜ್ಜ, ಶಿವರಾಜಪ್ಪ ಇವೇ ಐದು ಹೆಸರುಗಳು! ಒಂದೊಂದು ತಲೆಮಾರಿನ ಹಿರಿಯ ಗಂಡುಮಕ್ಕಳಿಗೂ ಒಂದಾದ ಮೇಲೊಂದು ಪುನರಾವರ್ತನೆ ಆಗಬೇಕಂತೆ. ಇವನು ಹುಟ್ಟುವ ಹೊತ್ತಿಗೆ ಇವನ ಅಜ್ಜ ಮತ್ತು ಅಪ್ಪ ಅವರುಗಳಿಗೆ ಬಸವಣ್ಣಜ್ಜ, ಮಲ್ಲಿಕಾರ್ಜುನಪ್ಪ ಅನ್ನೋ ಹೆಸರು ದೊರೆತು, ಇವನ ಪಾಲಿಗೆ ಬಂದದ್ದು ಹಣಮಂತಜ್ಜ ಅನ್ನೋ ನಾಮಧೇಯ. ಆ ಹೆಸರುಗಳಲ್ಲಿ ಒಂದು ಅಕ್ಷರಾನೂ ಬದಲಿ .ಮಾಡದಂಥ ಕಟ್ಟಾ ಸಂಪ್ರದಾಯಬದ್ಧತೆ!!

ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದು ಅಲ್ಲೇ ಹತ್ತಿರದ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿವರೆಗೆ, ಪಕ್ಕದ ಸಣ್ಣ ಊರಿನಲ್ಲಿ ಪಿಯುಸಿ ಮಾಡಿ ಈಗ ಪದವಿಗಾಗಿ ದಾವಣಗೆರೆಗೆ ಬಂದು ಒಂದು ಹಾಸ್ಟೆಲ್ಲಿನಲ್ಲಿದ್ದ ಹಣಮಂತು. ತನ್ನ ಸಹಪಾಠಿಗಳಾದ ಪ್ರಸಾದ, ಶಶಾಂಕ, ವಿಶ್ವಾಸ್, ಶ್ರೀರಾಮ, ನವೀನ, ಸಂತೋಷ್, ವಿವೇಕ್, ಶಶಿಧರ, ಶಿವಕುಮಾರ, ಶಂಭುಲಿಂಗಪ್ಪ ನಾರಾಯಣ, ಶ್ರೀಕೃಷ್ಣ, ಮಾಲತೇಶ... ಇಂತಹ ಹೆಸರು ಕೇಳಿದ ಮೇಲೆ, ಅಲ್ಲಿಯವರೆಗೂ ತನ್ನ ಹೆಸರಿನ ಬಗ್ಗೆ ಏನೂ ಅನ್ನಿಸಿರದಿದ್ದ ಅವನಿಗೆ ಈಗ ಹೀನಾಯ ಅನಿಸತೊಡಗಿತಂತೆ.

ಅಸಲಿಗೆ ಅವನ ಹೆಸರು ಹಣಮಂತಜ್ಜ ಅಂತಾನೆ ಹೌದು. ಈ ಹೆಸರು ಅವನಿದ್ದ ಕುಗ್ರಾಮದ ಪ್ರಾಥಮಿಕ ಶಾಲೆಯ ಹೆಡ್‌ಮಾಸ್ತರಿಗೇ ಇಷ್ಟವಾಗದೇ, ಮಗನನ್ನು ಸಾಲಿಗೆ ಸೇರಿಸಲು ಹೋದ ಇವನಪ್ಪನ ಹತ್ತಿರ 'ಏನ್ರಪಾ? ಇಷ್ಟs ಸಣ್ಣ ಹುಡೂಗಂಗೆ ಅಜ್ಜ ಅಂತ ಹೆಸರಿಡ್ತಾರೇನ್ರೀ, ಒಂದ ಛಲೋತ್ನಾದ ಹೆಸರ ಬರಸ್ರೀ' ಎಂದ ಮಾತಿಗೇ ಇವರಪ್ಪ ಹೊಯ್ಯನೆ ಗಾಬರಿ ಬಿದ್ದು 'ಅಯ್ಯಯ್ಯೋ! ನಮ್ಮನಿತನದಾಗ ಹಂಗೆಲ್ಲ ಬದಲೀ ಮಾಡಂಗಲ್ರೀ ಸರ. ನಾ ಏನ ಕೊಟ್ಟೇನಿ ಅದ್ನs ಬರಕಳ್ರೀ' ಅಂದ್ನಂತೆ. ಅದ್ರೂ ಆ ಮಾಸ್ತರ ಹಣಮಂತಜ್ಜನನ್ನು ಹಣಮಂತ (ಹನುಮಂತನೂ ಅಲ್ಲ) ಎಂದಷ್ಟಾದರೂ ಬದಲಾಯಿಸಲು ಒಪ್ಪಿಸುವಲ್ಲಿ ತಮ್ಮ ಬುದ್ಧಿವಂತಿಕೆನೆಲ್ಲ ಖರ್ಚು ಮಾಡಬೇಕಾಯ್ತಂತೆ. ಕರೆಯುವಾಗ ಮತ್ತು ಕನ್ನಡದಲ್ಲಿ ಬರೆಯುವಾಗ ಹಣಮಂತ ಎಂದೇ ಆದರೂ ಇಂಗ್ಲೀಷಿನಲ್ಲಿ ಬರೆದದ್ದನ್ನು ಓದುವಾಗಲಾದರೂ ಹನುಮಂತ ಅಂತನಾದ್ರೂ ಆಗುತ್ತಲ್ಲಾ ಅಂತ ಆ ಮಾಸ್ತರಿಗೇ ತುಸು ಸಮಾಧಾನವಾಯಿತಂತೆ.

ಇಲ್ಲಿ ದಾವಣಗೆರೆಗೆ ಬಂದರೆ ಅವನ ವಾರಗೆ ಗೆಳೆಯರು ಸುಮ್ನಿರಬೇಕಲ್ಲ. 'ಲೇ ಮಂಗ್ಯಾ.. ಮಂಗಣ್ಣಾ...ಬಾರಲೇ..' ಅಂತ ಕುಚೋದ್ಯ ಮಾಡತೊಡಗಿದರು. 'ಹಂಗ್ಯಾಕ ಕರಿಯಾಕ ಹತ್ತೀರ್ಲೇ? ನನ್ನ ಹೆಸರು ಹಣಮಂತ ಕಣ್ರಲೇ' ಅಂದರೆ,

'ಏ, ಕುಂದ್ರಲೇ.. ಹಣಮಂತ ಮಂಗ್ಯಾನೇ ಅಲೇನ್ಲೇ? ಹಿಂಗಂದ್ರನೂ ಒಂದ... ಹಂಗಂದ್ರನೂ ಒಂದ... ಸುಮ್ಕಿರಲೇ' ಎಂದು ಬಾಯಿ ಮುಚ್ಚಿಸಿಬಿಡುತ್ತಿದ್ದರಂತೆ.

ಇದರಿಂದ ರೋಸಿಹೋದ ಹಣಮಂತ ತನ್ನ ಹಳ್ಳಿಗೆ ಹೋದಾಗ ತನ್ನ ತಂದೆ ಮತ್ತು ಅಜ್ಜನ ಎದುರಿಗೆ 'ಏನ ಹೆಸರಟ್ಟೀರಿ ನಂಗ, ಎಲ್ಲಾರೂ ಮಂಗ್ಯಾ ಮಂಗಣ್ಣ ಅಂತ ಚಾಷ್ಟೀ ಮಾಡಕ್ಹತ್ಯಾರ. ನಾ ಹೆಸರ ಬದಲೀ ಮಾಡ್ಕಳಾಂವ ನೋಡ್ರೀ" ಅಂದದ್ದೇ ಅವರಜ್ಜ ಭೈರವನಾಗಿ ಒಂದು ಕೋಲು ಸೆಳೆದುಕೊಂಡು ಮುಖ ಮೈಕೈ ನೋಡದೆ ಬಾರಿಸುತ್ತಾ 'ಏನಂದೀ ಸೂಳೀಮಗನ? ಹಿರೇರ ಹೆಸ್ರು ಬದಲೀ ಮಾಡ್ಕಂತೀಯೇನ್ಲೇ? ಹುಟ್ಲಿಲ್ಲಾನ್ನಸ್ಬಿಡ್ತೀನಿ. ಇನ್ನ ನಿನ್ನ ಕಾಲೇಜ ಬಂದ್. ಹೊಲ ಗದ್ದಿ ನೋಡ್ಕಂಡು ಈ ಹಳ್ಯಾಗ ಬಿದ್ದಿರು' ಎಂದು ಆರ್ಭಟಿಸಿದರಂತೆ. ಅವರಿಗೆ ಮೊಮ್ಮಗನ ವಿದ್ಯಾಭ್ಯಾಸದ ಪ್ರಗತಿಗಿಂತ ಮನೆತನದಲ್ಲಿ ಸಾಗಿ ಬಂದಿರುವ ಹೆಸರಿನ ಹೆಗ್ಗಳಿಕೆಯೇ ಹಿರಿದಾಗಿಬಿಟ್ಟಿತ್ತು.

ಕುಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದರೂ ಚೆನ್ನಾಗಿ ಕಲಿತು ಒಂದು ಸರಕಾರಿ ನೌಕರಿ ಹಿಡೀಬೇಕೆಂಬ ಮಹತ್ವಾಕಾಂಕ್ಷೆಯ ಹಣಮಂತು, ಹೊಡೆತಗಳ ನೋವಿಗಿಂತಲೂ ಹೆಚ್ಚಾಗಿ ಮತ್ತೆ ಕಾಲೇಜಿಗೆ ಹೋಗಂಗಿಲ್ಲ ಎಂಬ ಅಜ್ಜನ ಶಾಸನದಂಥ ಮಾತಿಗೇ ಬೆದರಿ ಬೆಪ್ಪಾಗಿ, "ಇಲ್ಲಜ್ಜ, ನಮ್ಮವ್ವಾಣಿ, ಶಿವನಾಣಿ ನಾ ಇನ್ಮ್ಯಾಗ ಹೆಸ್ರ ಬದಲಾಯಸಾ ಮಾತಾಡದಿಲ್ಲ. ನಿನ್ನ ದಮ್ಮಯ್ಯ, ಕಾಲೇಜು ಬಿಡಿಸಬ್ಯಾಡಜ್ಜಾ" ಎಂದು ಗೋಗರೆದ ಮೇಲೇ ಅವರಜ್ಜ ಸುಮ್ಮನಾಗಿದ್ದಂತೆ.

ಹಣಮಂತು ಓದಿನಲ್ಲಿ ಜಾಣನಿದ್ರೂ ಹುಡುಗೀರನ್ನ ಚುಡಾಯಿಸೋದು, ಮಾತಾಡಿಸಲು, ಗಮನ ಸೆಳೆಯಲು ಚೇಷ್ಟೆ ಮಾಡುವಂಥ ಕಾಲೇಜಿನ ಸಾಮಾನ್ಯ ಪಡ್ಡೆ ಹುಡುಗರ ಚಪಲದಿಂದ ಮುಕ್ತನಾಗಿರಲಿಲ್ಲ. ಒಮ್ಮೊಮ್ಮೆ ಏನೇನೊ ಪೆದ್ದುಪೆದ್ದಾಗಿ ಮಾತಾಡಿ ಎಲ್ಲರ ನಗೆಗೀಡಾಗುತ್ತಿದ್ದ. ಒಟ್ಟಿನಲ್ಲಿ ಹಣಮಂತನಿಂದ ಕಾಲೇಜಿನ ನಮಗೆಲ್ಲರಿಗೂ ಭರಪೂರ ಮನರಂಜನೆ ಸಿಗ್ತಿದ್ದದ್ದು ನಿಜ.

ಆಗೆಲ್ಲಾ ನಾವು ಎಲ್ಲಾ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಪುಸ್ತಕಗಳನ್ನು ಜೋಡಿಸಿಕೊಂಡು ಕೈಯಲ್ಲಿ ಹಿಡಿದುಕೊಂಡೇ ಕಾಲೇಜಿಗೆ ಹೋಗುತ್ತಿದ್ದೆವು. ಈಗಿನಂತೆ ಬ್ಯಾಕ್ ಪ್ಯಾಕ್ ಅಥವಾ ಕಾಲೇಜಿನ ಪುಸ್ತಕಗಳನ್ನು ಇಟ್ಟುಕೊಳ್ಳಬಹುದಾದ ಯಾವ ಚೀಲಗಳೂ ಆಗ ನಮ್ಮೂರಲ್ಲಂತೂ ಯಾರ ಬಳಿಯೂ ಇರಲಿಲ್ಲ.

ಮುಂಬಯಿಯಲ್ಲಿದ್ದ ನನ್ನ ಸೋದರಮಾವ ಒಮ್ಮೆ ಹರಿಹರಕ್ಕೆ ಬಂದಾಗ, ಪುಸ್ತಕಗಳಲ್ಲದೆ ಪ್ರಾಕ್ಟಿಕಲ್ ರೆಕಾರ್ಡ್ಸ್ ಮತ್ತು ಊಟದ ಡಬ್ಬಿ ಆದಿಯಾಗಿ ಎಲ್ಲವನ್ನೂ ಇಟ್ಟುಕೊಳ್ಳಬಹುದಾದ ಹೆಗಲಿಗೆ ಹಾಕಿಕೊಳ್ಳುವ ಒಂದು ಲೆದರ್ ಬ್ಯಾಗ್ ತಂದುಕೊಟ್ಟರು. ಮಾರನೆಯ ದಿನ ಅದನ್ನು ಹೆಗಲಿಗೆ ತಗುಲಿಸಿಕೊಂಡು ರೈಲಿಗೆ ಹತ್ತಿದರೆ ಬಹಳಷ್ಟು

ಜನ ಕುತೂಹಲದಿಂದ ತಿರುಗಿ ತಿರುಗಿ ನೋಡುತ್ತಿದ್ದರು. ನನ್ನಂತೆಯೇ ಹರಿಹರದಿಂದ ದಾವಣಗೆರೆಗೆ ಓಡಾಡುತ್ತಿದ್ದ ಹಲವರು ನನ್ನ ಹತ್ತಿರ ಬಂದು ಅಚ್ಚರಿ, ಮೆಚ್ಚುಗೆ ವ್ಯಕ್ತಪಡಿಸಿದಾಗ ನನಗೆ ಹೆಮ್ಮೆಯೋ ಹೆಮ್ಮೆ.

ಆ ಹೆಮ್ಮೆ ಮತ್ತು ಖುಷಿಯಲ್ಲೇ ಕಾಲೇಜಿಗೆ ಬಂದಾಗ ನಮ್ಮ ಸಹಪಾಠಿಗಳೂ ಇದ್ದ ಒಂದು ಪಡ್ಡೆ ಹುಡುಗರ ಗುಂಪಿನಲ್ಲಿ ಈ ನಮ್ಮ ನಾಯಕ ಹಣಮಂತನೂ ಇದ್ದ. ನನ್ನ ಚೀಲ ನೋಡಿದ್ದೇ ಏನನ್ನಿಸಿತೋ ಅಪಾರ ಸ್ಫೂರ್ತಿಗೊಂಡು ಇದ್ದಕ್ಕಿದ್ದಂತೆ,

“ಯಾರ್ರೀ ಯಾರ್ರೀ, ದಾವಣಗೇರಿ ಹರಿಹರ ರಾಣಿಬೆನ್ನೂರ ಬ್ಯಾಡಗಿ ಹಾವೇರಿ… ಯಾರ್ರೀ ಯಾರ್ರೀ..” ಎನ್ನುತ್ತಾ ಸೀಟಿ ಹಾಕಿ ಖಾಸಗಿ ಬಸ್ಸಿನ ಕಂಡಕ್ಟರುಗಳಂತೆ ಕೂಗತೊಡಗಿದ್ದೇ ಹುಡುಗರ ಗುಂಪಿನಲ್ಲಿ ನಗು ಹುಚ್ಚಾಗಿ ಸ್ಫೋಟಗೊಂಡಿತು.

ಪರವಾಗಿಲ್ಲಲೇ ಮಂಗ್ಯಾ.. ಎಂದು ಕೆಲವರು ಬೆನ್ನು ತಟ್ಟಿದರು. ಕೇಳಬೇಕೇ ಕಪಿಗೆ ಹೆಂಡ ಕುಡಿಸಿದಂತಾಗಿ ಮತ್ತೂ ಜೋರಾಗಿ, “ಯಾರ್ರೀ ಯಾರ್ರೀ ಯಾರ್ರೀ.. ದಾವಣಗೇರೀ ಹರಿಹರ ರಾಣಿಬೆನ್ನೂರ ಬ್ಯಾಡಗಿ ಹಾವೇರಿ… ಯಾರ್ರೀ ಯಾರ್ರೀ.. “ ಎನ್ನುತ್ತಾ ಸೀಟಿ ಹಾಕಿ ಕೂಗತೊಡಗಿದ. ಎಲ್ಲರೂ ಬಿದ್ದುಬಿದ್ದು ಎಗರಾಡಿ ನಗತೊಡಗಿದರು

ನನಗೇಕೋ ಪಿತ್ತ ನೆತ್ತಿಗೇರಿ, ಏನೋ ಅವೇಶ ಬಂದಂತಾಗಿ ನನ್ನ ಚೀಲದ ಪುಸ್ತಕಗಳನ್ನೆಲ್ಲ ಹೊರತೆಗೆದು, ಸೀದಾ ಅವನ ಬಳಿ ಸಾರಿ ಅವನ ಪುಸ್ತಕಗಳನ್ನು ಕಸಿದುಕೊಂಡು ಅವನ ಕೈಯಲ್ಲಿ ನನ್ನ ಚೀಲವನ್ನು ದಬಾರನೆ ಕುಕ್ಕಿ, ‘ಕಂಡಕ್ಟರ್ ಕೆಲಸ ಮಾಡೋನು ಇಲ್ಲಿಗ್ಯಾಕ್ ಬಂದಿದೀ?. ತಗೋ ಚೀಲ. ನಡೀ ಬಸ್ ಸ್ಟಾಂಡಿಗೆ’ ಎಂದು ತಗಲಿಕೊಂಡೆ.

ಇಂತಹ ತೀಕ್ಷ್ಣ ಪ್ರತಿಕ್ರಿಯೆಯನ್ನು ಕನಸಿನಲ್ಲೂ ನಿರೀಕ್ಷಿಸದ ಇಡೀ ಗ್ಯಾಂಗ್ ತಬ್ಬಿಬ್ಬಾಗಿ… ಹಣಮಂತ ಬೆಬ್ಬೆಬ್ಬೇ.. ಅನ್ನ ತೊಡಗಿದಾಗ, ಅವರಲ್ಲೊಬ್ಬ ಚೇತರಿಸಿಕೊಂಡು, “ಹೀರೋ ಆಗಾಕ್ ಹೊಂಟೀಯೇನ್ಲೇ ಮಂಗ್ಯಾ? ಆತಾ ಮೊಕಕ್ ಮಂಗ್ಯಾರ್ತೀ.. ಇದ ನಿಂಗ ಬೇಕಿತ್ತೇನ್ಲೇ” ಅಂದ.

ಎಲ್ಲರೂ ಒಟ್ಟಾಗಿ ಭಾಗಿಯಾಗಿ ಮಜಾ ತಗೊತಿದಾರೆ. ಬೆನ್ನು ತಟ್ಟಿ ಹುರುದುಂಬಿಸಿದಾರೆ. ಇದೀಗ ಇವನು ಮಾತ್ರ ಬಹಳ ಸಭ್ಯನಂತೆ…..ನನಗೆ ಮತ್ತೂ ರೇಗಿತು.

“ನೀನೇನು ಭಾಳ ಸಾಭ್ಯಸ್ಥ ಅನ್ಕೊಂಡ್ಬಿಟ್ಟಿದೀಯ. ಆಹಹಹಾ. ನೀನ್ಯಾವತ್ತೂ ನಾವು ಹುಡುಗೀರನ್ನ ಚುಡಾಯಿಸೇ ಇಲ್ಲ ಅಲ್ವಾ?” ಎಂದು ಅವನನ್ನೂ ತಗಲಿಕೊಂಡಾಗ ಅವನ ಮುಖ ಇಂಗು ತಿಂದ ಮಂಗನಂತಾಗಿತ್ತು..

ಆಗ ನನ್ನ ಚೇಲ ನನ್ನ ಕೈಗಿತ್ತು, ತನ್ನ ಪುಸ್ತಕಗಳನ್ನು ತೆಗೆದುಕೊಂಡು ಸದ್ದಿಲ್ಲದೆ ಜಾಗ ಖಾಲಿ ಮಾಡಿದ ಹಣಮಂತ.

'ಕ್ಲಾಸಿಗೆ ಹೊತ್ತಾಗ್ತದೆ ನಡೀರಲೇ' ಎನ್ನುತ್ತಾ ಉಳಿದವರೂ ಅವನನ್ನು ಗಪ್‌ಚುಪ್ಪಾಗಿ ಅನುಸರಿಸಿದರು.

ಆ ಘಟನೆಯಾದ ಮೇಲಿಂದ ನನ್ನನ್ನು ಚುಡಾಯಿಸುವ ಧೈರ್ಯ ಅದೇಕೋ ಯಾರಿಗೂ ಬರಲಿಲ್ಲ. ನಾನೂ ಒಂಥರಾ ನಮ್ಮ ಹುಡುಗಿಯರ ಗುಂಪಿನ ಅಘೋಷಿತ ನಾಯಕಿಯಾಗಿಬಿಟ್ಟೆ ಅನ್ನಿ. ಮುಂದೆ ಕಾಲೇಜಿನಿಂದ ಯಾವುದೇ ಸಮಾರಂಭ, ಪ್ರವಾಸ ಅಥವಾ ಯೂತ್ ಫೆಸ್ಟಿವಲ್ ಇತ್ಯಾದಿ ಯಾವುದಕ್ಕೇ ಸೇರಬೇಕಾದರೂ, ಹೋಗಬೇಕಾದರೂ ನನ್ನ ಗೆಳತಿಯರ ಮನೆಗಳಲ್ಲಿ 'ನಾಗರತ್ನ ಬರೋದಿದ್ರೆ ಹೋಗಬಹುದು' ಎಂದು ಅವರಮ್ಮ ಅಪ್ಪ ಹೇಳುತ್ತಿದ್ದರಂತೆ

ಮುಂದೆ ಹಣಮಂತನ ಇನ್ನಷ್ಟು ಆಣಿಮುತ್ತುಗಳು.

*****

ನವಸಖಿ

– ಶಾಂತಿವಾಸು

ನೆನಪು ಹಸಿಯಾಗುತ್ತಿದೆ, ಹೃದಯ ಹಳೆಯದರೆಡೆ ಹೊರಳುತ್ತಿದೆ...
ಮತ್ತೆಂದೂ ಮರಳದ, ಮರಳಿನ ಮೇಲಿನ ಬರವಣಿಗೆ,
ಈ ನೆನಪೆಂಬುದ ಎನ್ಮನ ಮರೆಯುತ್ತಿದೆ...

ರಸ್ತೆಯಲ್ಲಿ ಮನೆಮಂದಿಯೆಲ್ಲ ಹರಟೆ ನಡುರಾತ್ರಿ ತನಕ...
ಬೊಗಳಲು ಪಕ್ಕದ ಮನೆಯ ಶುನಕ...
ಮನಕ್ಕಾಗುತ್ತಿತ್ತು ನಿದ್ರಿಸುವ ಸಮಯದ ಜ್ಞಾಪಕ....

ಮೇಲೆಳಲಾರದೆ ಮೂಲೆ ಹಿಡಿದ ಹಿರಿಯರು ಮನೆಮನೆಯಲ್ಲಿ...
ನೋಡಿ ಮಾತಾಡಿ ಬರುವುದು ಕರ್ತವ್ಯವಾಗಿತ್ತು ಹಿರಿಕಿರಿಯರಲ್ಲಿ....
ಆ ಮನೆ ಮಕ್ಕಳು ಪಡೆಯುತ್ತಿದ್ದ ಬೈಗುಳ ಸಾಮಾನ್ಯವಾಗಿತ್ತು ಸಕಲರಲ್ಲಿ.....

ನಿಶಾರಾತ್ರಿಯಲ್ಲಿ "ತಾಟಿನುಂಗಿ"ನ ವ್ಯಾಪಾರ ಮಾಡಲು ಇರಲಿಲ್ಲ ಅಡ್ಡಿ_
ಬೀದಿ ದೀಪಗಳೇ ಇಲ್ಲ, ಊರೆಲ್ಲ ಕತ್ತಲೆಯ ದೊಡ್ಡಿ...
ಬೆಳಕಾಗ್ತಿತ್ತು ವ್ಯಾಪಾರಿ ತರುತ್ತಿದ್ದ ಸೀಮೆಎಣ್ಣೆ ದೀಪದ ಬುಡ್ಡಿ...

ಜ್ಞಾಪಕ ಬಂತು! ಜ್ಞಾಪಕ ಬಂತು! ಉಪ್ಪಿನ ಬಂಡಿ ತರುತ್ತಿದ್ದ ಅಜ್ಜ ಬಡಪಾಯಿ...
ಐದು ಸೇರಿನೊಂದಿಗೊಂದು ಸೇರು ಕೊಟ್ಟು ಪಡೆವನೊಂದು ರೂಪಾಯಿ....
ಬೇಕಷ್ಟಾಯಿತವಗೆ ಹೀರಲು ಗಬ್ಬೆಂಬ ಸಾರಾಯಿ....

ರಸ್ತೆ ಕೊನೆಯಲ್ಲಿ, "ರಾತ್ರಿರಾಗ'ದಿ ಆಲಾಪಿಸುವ, ಊಟದ ಹೊತ್ತರಿತ ಭಿಕ್ಷುಕ...
ಬೇಗನೆ ಉಂಡು ಮಿಕ್ಕಿದನ್ನ ನೀಡಬೇಕೆಂದು ಕಟ್ಟಪ್ಪಣೆ ಮಾಡಿದ್ದರೆನ್ನ ಜನಕ...
ಬೆಳಗೆದ್ದರೆ ದೇವಸ್ಥಾನದ ಮುಂದೆ ಬೇಡುವವ ಕೇಳುತ್ತಿದ್ದ "ತಿಂಡಿ ಆಯ್ತಾ ಅಕ್ಕಾ"

ನಡು ಮಧ್ಯಾಹ್ನ ಹಳೇ ನಾಲ್ಕು ಗಾಲಿ ಬಂಡಿಯ ಮೇಲೆ "ಪಾಪಂಪಪ್ಪು" ಹಾಜರ್...
ಹಳೆಯದನ್ನು ಮಾರುವ ಭರದಲ್ಲಿ ಹೊತ್ತೊಯ್ದು ಕೊಟ್ಟು ಹೊಸ ಪೇಪರ್.....
ಪಾಪಂಪಪ್ಪು ತಿಂದರಾಯಿತೇ?? ಮಾರನೇ ದಿನ ಶಾಲೆಗೆ ಚಕ್ಕರ್...

ಇದ್ಯಾವುದೂ ಇಲ್ಲ ಹೊಸ ಜೀವನದಲ್ಲಿ,..
ನಾನಿನ್ನೂ ಮಾಡಬೇಕಿದೆ "ಬೊಂಬೆ ಮಿಠಾಯಿ"ಯ ವರ್ಣನೆ ಇಲ್ಲಿ....
ಬಣ್ಣಬಣ್ಣದ ಬಟ್ಟೆ ಸುತ್ತಿ,ಕೈಗಳನ್ನು ತಟ್ಟಿಸಿ ಎತ್ತೆತ್ತಿ,
ವಿವಿಧ ಆಭರಣ ಸಿಹಿಯಿಂದ ತಯಾರಿಸುವ ಕಲೆಗಾರ...
ಎಲ್ಲಾದರೂ ಕಂಡರೆ ಹೇಳು. ನಿನ್ನ ಬಾಳಾಗಲಿ ಬಂಗಾರ..

ಮಾಸದ ನೆನಪಿನ ಮೂಟೆ ಹೊತ್ತು ನಡೆವ ಹಾದಿಯಲ್ಲಿ ನಾನು ಸುಖಿ.
ನನ್ನ ನೆನಪಿನ ಬಳ್ಳಿಗೆ ಕಸಿ ಸೇರಿಸಿದೆಯಾದರೆ, ನೀನೇ ನನ್ನ "ನವಸಖಿ"

*****

'ತುಷಾರ'ದ ಓದು

- ಮನೋಹರ

ಹೋಳಿಹಬ್ಬದ ವಿಶೇಷ ನಿಮಗೆ ತಿಳಿದಿದೆಯೇ;

ಇತ್ತೀಚೆಗೆ ನಮ್ಮನ್ನಗಲಿದ ನೃತ್ಯಗುರು ಬಿರ್ಜುಮಹಾರಾಜ್ ರ ವ್ಯಕ್ತಿತ್ವ ಏನು;

ವರ್ಣಚಿತ್ರಕಾರ ರಾಜಾ ರವಿವರ್ಮರ ಕಲಾಯಾನ ಹೇಗಿತ್ತು;

ಕೊಪ್ಪಳ ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳು ಯಾವುವು ಬಲ್ಲಿರಾ;

ನೋಟು ಮುದ್ರಣಕ್ಕಾಗಿ ಬಳಸುವ ಕಾಗದದ ವಿಶೇಷತೆ ಏನು;

ಪುಣೆ ಸಮೀಪದ ಪಾನ್ ಶೇಟ್ ಅಣೆಕಟ್ಟಿನ ಹಿನ್ನೀರಿನ ರೋಚಕ ಪ್ರವಾಸ ಅನುಭವಿಸಬೇಕೇ;

ವಿಶ್ವವ್ಯಾಪಿ ಅಂತರ್ಜಾಲ ಜನಕ ಟಿಮ್ ಬರ್ನ್ ಲೀಯ ಸಾಹಸಮಯ ಸಾಧನೆಯ ಹಿಂದಿನ ಅವಿರತ ಪ್ರಯತ್ನಗಳ ತಿಳಿದಿರಾ?

ಭ್ರಮೆ ಮತ್ತು ಅಭದ್ರತೆಗಳನ್ನು ನೆನಪಿಸುವ ಜ್ಯೋತಿಷದ ಕುರಿತಾದ ಅನಿಸಿಕೆ ಓದಿದಿರಾ; ನನ್ನನ್ನು ಓದಿ.

ಈ ಗಂಭೀರ ಓದಿನ ಜತೆಯಲ್ಲಿ

ಕೋವಿಡ್ ಪೀಡನೆಗೊಳಗಾದ ದುಬೈ ಉದ್ಯೋಗಿಯ ಕಥೆ;

ಕಾಶ್ಮೀರ ಉಗ್ರಗಾಮಿ ನಿಗ್ರಹ ಪಡೆಯ ಪ್ರಾಮಾಣಿಕ ಸೈನಿಕನ ಕೋರ್ಟ್ ಮಾರ್ಷಲ್ ಕಥೆ;

ಬಾಡಿಗೆ ತಾಯ್ತನದ ದು:ಖಾಂತ ವ್ಯಥೆಯ ಕಥೆ;

ನಂಬಿಕೆಯ ಆಧಾರದ ಜೀವನದ ಕಥೆ;

ಅವಿವಾಹಿತ ಹೆಣ್ಣಿನ ಬಾಳಿನ ಗೋಳಿನ ಕಥೆ;

ಇಂತಹ ವಿಷಯ ವೈವಿಧ್ಯದ ಕಥಾಗುಚ್ಛವನ್ನು ಓದಿದ್ದೀರಾ;

ಹಾಗೆಯೇ

ಮುಖಪುಟ ತೆರೆದ ಕೂಡಲೇ ಓದಲೇಬೇಕಾದ ಸಂಪಾದಕ ನುಡಿ;

ಹೊಸದಾಗಿ ಪ್ರಕಟವಾದ ಕನ್ನಡ ಪುಸ್ತಕ ಪರಿಚಯ;

ಇವುಗಳೊಂದಿಗೆ ಹಗುರ ಓದಿಗಾಗಿ

ವ್ಯಂಗ್ಯ ಚಿತ್ರಗಳು

ಓದುಗರಿಗಾಗಿ ಭವಿಷ್ಯವಾಣಿ

ನ್ಯಾನೋ ಮತ್ತು ಝೆನ್ ಸಣ್ಣ ಕತೆಗಳು;

ಒಂದೆರಡು ಸಾಲುಗಳಲ್ಲಿ ವಿಡಂಬನಾತ್ಮಕ ಬರಹಗಳು;

ಡಿಜಿಟಲ್ ಯುಗದ ಆನ್ ಲೈನ್ ಸ್ಪರ್ಧಾಜಾಲದ ವಿನೋದ ಹಾಸ್ಯ;

ಕವಿತೆ ಓದುವವರಿಗಾಗಿ

ಚಿತ್ರಕವನ;

ವಿವಿಧ ಕವಿಗಳ ವೈವಿಧ್ಯಮಯ ಕವನಗಳು;

ಇದೆಲ್ಲವೂ ಒಂದೇ ಕಡೆ ಇದೆ ಬನ್ನಿ;

ಹೌದು, ಸಮಗ್ರ ವೈವಿಧ್ಯಮಯ ಸಂಪೂರ್ಣ ಓದಿನ ಔತಣವಿದೆ ಇಲ್ಲಿ.

ಎಲ್ಲಿ ಗೊತ್ತಾಯಿತೇ, ತಿಳಿಯಿತೇ.

ಕಳೆದ ನಲವತ್ತೊಂಭತ್ತು ವರ್ಷಗಳಿಂದ ಕನ್ನಡ ಓದುಗರಿಗೆ ಪ್ರತಿ ತಿಂಗಳೂ ಸಾಹಿತ್ಯ ರಸಾಯನ ಉಣ ಬಡಿಸುತ್ತಿರುವ ಸಣ್ಣ ಗಾತ್ರದ ಪತ್ರಿಕೆ ಮಾರ್ಚ್ ತಿಂಗಳ ೧೬ಳ ಪುಟಗಳ ಸಮೃದ್ಧ ರಸಪೂರ್ಣ "ತುಷಾರ" ನಾನು. ನಿಮ್ಮಿಂದಲೇ ಸುಂದರಾಂಗನಾಗಿ ಬೆಳೆದಿದ್ದೇನೆ. ನನಗೆ ಐವತ್ತು ತುಂಬುತ್ತಿದೆ. ಶುಭ ಹಾರೈಸಿ.

ನನ್ನನ್ನು ಕೊಳ್ಳಿರಿ ಮನೆ ತುಂಬಿಸಿಕೊಳ್ಳಿರಿ, ಓದಿರಿ... ನೀವೂ, ನಾನೂ ಖುಷಿಯಾಗಿರೋಣ..

*****

ಕಥಾ ಪ್ರಪಂಚ

ರಸ್ಕಿನ್ ಬಾಂಡ್ ಕತೆಗಳು

- ವಿಠ್ಠಲ್ ಇಜೇರಿ

.. ರಸ್ಕಿನ್ ಬಾಂಡ್ ಹುಟ್ಟಿದ್ದು 1934ರಲ್ಲಿ, ಹಿಮಾಚಲ ಪ್ರದೇಶದ ಕಸೌಲಿ ಎಂಬ ಚಿಕ್ಕ ಪಟ್ಟಣದಲ್ಲಿ. ಬೆಳೆದದ್ದು ಜಾಮನಗರ, ಸಿಮ್ಲಾ, ಡೆಹರಾಡೂನ ಪರಿಸರದಲ್ಲಿ. ಮದುವೆಯಾಗದ ಅವರು ಅನೇಕ ಮಕ್ಕಳನ್ನು ಸಾಕಿ ಪೋಷಿಸಿದ್ದಾರೆ. ಸದ್ಯ ಮಸ್ಸೂರಿಯ ಸುಂದರ ತಾಣದಲ್ಲಿ ವಾಸವಾಗಿದ್ದಾರೆ. ಪ್ರಕೃತಿಯ ಮಧ್ಯೆ, ಬಡ ಕುಟುಂಬಗಳನ್ನು ನೋಡುತ್ತಲೇ ಇದ್ದ ಅವರು, ಬಡ ಮತ್ತು ಮಧ್ಯಮ ವರ್ಗದ ಜನಜೀವನದ ಸುತ್ತ ಬರೆದದ್ದೇ ಹೆಚ್ಚು. ಅವರು ಹಿರಿಯರಿಗಾಗಿಯೂ ಬರೆದಿದ್ದಾರೆ, ಮಕ್ಕಳಿಗಾಗಿಯೂ ವಿಪುಲ ಸಾಹಿತ್ಯ ರಚಿಸಿದ್ದಾರೆ. ದಿನನಿತ್ಯದ ಬದುಕಿನ ಕುರಿತು ಬರೆದದ್ದು ಹೆಚ್ಚು. ಅವರು ಮಕ್ಕಳಿಗಾಗಿ ಬರೆಯುವ ಆಸಕ್ತಿಯನ್ನು ಗಮನಿಸಿ ಅವರಿಗೆ ಸ್ನೇಹಿತರು "ನಿಮಗೆ ವಯಸ್ಸು ಹದಿನಾಲ್ಕಕ್ಕೂ ಹೆಚ್ಚು ಆಗಲೇ ಇಲ್ಲ" ಅನ್ನುತ್ತಿದ್ದರಂತೆ.

ಮಕ್ಕಳ ಸಾಹಿತ್ಯ ರಚನೆಗೆ ಮಕ್ಕಳ ಕಣ್ಣಿನಿಂದ ಜೀವನವನ್ನು ನೋಡಬೇಕು. ರಸ್ಕಿನ್ ಅವರ ಒಂಟಿತನದ ಬದುಕು ಹೆಚ್ಚು ಸಂವೇದನಾಶೀಲವಾಗಲು ಮಕ್ಕಳ ಸಾಹಿತ್ಯ ರಚನೆಗೆ ಕಾರಣವಾಯಿತು. ಅವರಿಗೆ ಬಾಲ್ಯದಲ್ಲಿ ಪುಸ್ತಕಗಳು ಬಹಳ ಪ್ರಿಯವಾಗಿದ್ದವು. ದೊಡ್ಡದೊಡ್ಡ ಲೇಖಕರೇ ಅಂದು ಅವರಿಗೆ ಆದರ್ಶಪ್ರಾಯರಾಗಿದ್ದರು ಎಂದು ಅಭಿಪ್ರಾಯಪಡುತ್ತಾರೆ.

ಅವರು ಹೇಳುತ್ತಾರೆ - "ನನ್ನ ನೆಚ್ಚಿನ ಬರವಣಿಗೆಗಳು ಹತ್ತು ಹದಿನೈದು ಸಾವಿರ ಶಬ್ದಗಳಿಗೆ ಸೀಮಿತವಾಗುತ್ತವೆ. ಒಂದು ಕಾದಂಬರಿಗೆ ತುಂಬಾ ಕಡಿಮೆ. ಆದುದರಿಂದ ನಾನು ಸರಳವಾಗಿ ಮಕ್ಕಳ ಬಗ್ಗೆ ಬರೆದೆ, ಅದು ಸಹಜವಾಗಿ ಬಂತು. ಮಕ್ಕಳ ಬಗ್ಗೆ ಬರೆಯುವುದು ಕಷ್ಟ. ಅವರ ಗಮನ ನಮ್ಮತ್ತ ಸೆಳೆಯಬೇಕು, ಒಳ್ಳೆಯ ಕತೆ ಹೇಳಬೇಕು. ಹಿಂದಿನ ನೆನಪುಗಳ ನಿರೂಪಣೆ, ಹಾಸ್ಯ ಪ್ರಸಂಗಗಳನ್ನು ಸಾಕಷ್ಟು ತುಂಬಬೇಕು" ಎನ್ನುತ್ತಾರೆ ರಸ್ಕಿನ್.

ಅವರ ರಚನೆಗಳು ಒಂದು ಬಗೆಯಲ್ಲಿ ಸಡಿಲು ಸಡಿಲಾದ, ಸಹಜವಾದ, ಮಕ್ಕಳಿಗೆ ಆಪ್ತವಾಗುವ ಗುಣ ಹೊಂದಿರುತ್ತವೆ. ಹಿಮಾಲಯದ ತಪ್ಪಲಿನಲ್ಲಿ ಬದುಕು ಕಳೆದ ಅವರ ಕೃತಿಗಳಲ್ಲಿ ಪರ್ವತಗಳಿಂದ ಸುರಿವ ಝರಿಯ ಶಬ್ಧ, ದಟ್ಟ ಕಾನನದ ಮಧ್ಯೆ ಇರುವ ಮೌನ, ಗಂಗೆ-ಮಂದಾಕಿನಿಯರ ಗುನುಗು, ಸುರಿವ ಹಿಮ, ವನಸುಮಗಳ ಸೌಗಂಧ ಎಲ್ಲವೂ ಬೆರೆತಿವೆ. ಅವರ ಬರವಣಿಗೆ ಅವಸರದ್ದಲ್ಲ, ನಿಧಾನವಾಗಿ ಸಾಗುವ ಬದುಕು. ಅವರ ವಾಕ್ಯಗಳು ಮಂಜಿನ ಹನಿಗಳಲ್ಲಿ ಮಿಂದು, ಗಿರಿಶಿಖರಗಳ ತಂಪು ಗಾಳಿಯಲ್ಲಿ ನಲಿದು, ಹಿಮಾಚಲ ಪ್ರದೇಶದ ಪರಂಪರೆ ಮತ್ತು ತಿಳಿ ಹಾಸ್ಯ ಹೊಂದಿವೆ ಎಂದು 'ಇಂಡಿಯಾ ಟುಡೇ' ಅಭಿಪ್ರಾಯಪಟ್ಟಿದೆ. ರಸ್ಕಿನ್ ಬಾಂಡ್ ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1992), ಪದ್ಮಶ್ರೀ ಪ್ರಶಸ್ತಿ (1999) ಮತ್ತು ಪದ್ಮಭೂಷಣ ಪ್ರಶಸ್ತಿ (2014) ದೊರೆತಿವೆ.

ಈಗ ರಸ್ಕಿನ ಬಾಂಡ್ ಅವರ ಒಂದು ಸಣ್ಣ ಕತೆ "ನೀಲಿ ಕೊಡೆಯ ಕಾಣಿಕೆ" (Setting of Blue Umbrella) ನೋಡೋಣ. ಈ ಕತೆ ಸಾಧಾರಣವಾಗಿದ್ದು. ಚಿಕ್ಕ ಕತೆಯಾದರೂ ಕಥೆಯು ಹೊಂದಿರುವ ಮಾನವೀಯ ಮೌಲ್ಯಗಳಾದ ಒಳ್ಳೆಯತನ, ಮಕ್ಕಳ ಮುಗ್ಧತೆ, ಅನುಕಂಪ, ದಯಾಗುಣ, ಮತ್ತು ಕ್ಷಮಾ ಗುಣಗಳಿಂದ ಒಂದು ನೈತಿಕ ಕತೆಯಾಗಿ ಪರ್ಯಾವಸಾನವಾಗಿ ಓದುಗರ ಮನ ಸೆಳೆಯುತ್ತದೆ.

ಕತೆ : ನೀಲಿ ಕೊಡೆ ಕಾಣಿಕೆ

ಹಿಮಾಚಲ ಪ್ರದೇಶದ ಘರವಾಲ್ ಪ್ರದೇಶಕ್ಕೆ ಸೇರಿದ ಹಳ್ಳಿಯೊಂದರಲ್ಲಿ ಬಿನ್ಯಾ ಎಂಬ ಮುಗ್ಧ ಹುಡುಗಿ ತನ್ನ ತಾಯಿ ಮತ್ತು ಸೋದರ ಬಿಜ್ಜು ಒಡನೆ ವಾಸವಾಗಿದ್ದಳು. ಆಕೆ ತನ್ನ ಹಸು ಮತ್ತು ಕುರಿ ಮೇಯಿಸಲು ಹುಲ್ಲುಗಾವಲಿಗೆ ಹೋಗುತ್ತಿದ್ದಳು. ಒಂದು ಸಂಜೆ ಹುಲ್ಲುಗಾವಲಿನಿಂದ ಮನೆಗೆ ಬರುವಾಗ ದಾರಿಯಲ್ಲಿ ಪ್ರವಾಸಕ್ಕೆ ಬಂದ ಕೆಲವು ಜಪಾನಿ ಯಾತ್ರಿಕರನ್ನು ಕಂಡಳು. ಅವರ ಬಳಿ ಒಂದು ನೀಲಿ ಕೊಡೆ ಇತ್ತು, ಬಿನ್ಯಾ ಅದರಿಂದ ಆಕರ್ಷಿತಳಾಗಿ ನೋಡುತ್ತಾ ನಿಂತುಬಿಟ್ಟಳು. ಆ ಯಾತ್ರಿಕರಿಗೂ ಈ ಮುಗ್ಧ ಹುಡುಗಿಯ ಬಗ್ಗೆ ಆಸಕ್ತಿ ಉಂಟಾಗಿ, "ನೋಡು, ನಿನ್ನ ಕೊರಳಲ್ಲಿಯ ಚಿರತೆ ಚಿಹ್ನೆಯ ಪದಕ ಕೊಟ್ಟರೆ ಈ ಕೊಡೆ ನಿನ್ನದು" ಎಂದರು. ಆಕೆ ತನ್ನ ಕೊರಳಲ್ಲಿಯ ಚಿರತೆಯ ಚಿಹ್ನೆ ಇರುವ ಪದಕ ಕೊಟ್ಟು ಸಂತೋಷದಿಂದ ಮನೆಗೆ ಹಿಂತಿರುಗಿದಳು. ಆಕೆ ಸದಾ ನೀಲಿ ಕೊಡೆ ಹಿಡಿದುಕೊಂಡೇ ತಿರುಗಾಡುತ್ತಿದ್ದಳು. ಆ ನೀಲಿ ಕೊಡೆ ಹಳ್ಳಿಯ ಜನರೆಲ್ಲರ ಚರ್ಚೆಯ ವಿಷಯವಾಗಿತ್ತು. ಎಲ್ಲರೂ ಬಿನ್ಯಾಳಿಂದ ಆ ಕೊಡೆ ಇಸಿದುಕೊಂಡು ಬಿಸಿಲಲ್ಲಿ ಕೊಡೆ ಬಿಡಿಸಿ, ಸ್ವಲ್ಪ ದೂರ ನಡೆದು ಬಂದು, ಆಕೆಗೆ ಕೊಡೆ ಮರಳಿ ಒಪ್ಪಿಸುತ್ತಿದ್ದರು.

ಆ ಹಳ್ಳಿಯಲ್ಲಿ ರಾಮ್ ಭರೋಸೆ ಎಂಬ ಯುವಕ ದಿನಸಿ ಅಂಗಡಿ ಇರಿಸಿ ವ್ಯಾಪಾರ ನೋಡಿಕೊಳ್ಳುತ್ತಿದ್ದ. ರಾಮ್ ಭರೋಸೆಗೆ ಬಿನ್ಯಾಳ ನೀಲಿ ಕೊಡೆ ಇಷ್ಟವಾಗಿ ಅದನ್ನು ತನಗೆ ಮಾರಾಟ ಮಾಡಲು ಕೇಳಿದ. ಬಿನ್ಯಾ ಅದಕ್ಕೆ ಒಪ್ಪಲಿಲ್ಲ. ರಾಮ್ ಭರೋಸೆಗೆ ತುಂಬಾ ನಿರಾಸೆಯಾಯಿತು. ರಾಮ್ ಭರೋಸೆ ವ್ಯವಹಾರದಲ್ಲಿ ಸಹಾಯ ಮಾಡಲು ರಾಮರಾಜು ಎಂಬವನನ್ನು ನಿಯಮಿಸಿಕೊಂಡಿದ್ದ. ರಾಮರಾಜು ತನ್ನ ಮಾಲೀಕ ರಾಮ್ ಭರೋಸೆ ಮೆಚ್ಚುಗೆ ಗಳಿಸಲು ಒಂದು ದಿನ ಬಿನ್ಯಾ ಕಾಡಿಗೆ ಕಟ್ಟಿಗೆ ತರಲು ಹೋದಾಗ, ತನ್ನ ಮಾಲೀಕನನ್ನು ಖುಷಿ ಪಡಿಸಲು ಆಕೆಯ ನೀಲಿ ಕೊಡೆಯನ್ನು ಕದಿಯಲು ಹೋದ. ಆದರೆ ಕೊಡೆ ಕದಿಯಲು ಹೋಗಿ ಬಿನ್ಯಾ ಸೋದರನಾದ ಬಿಜ್ಜುವಿನ ಕೈಗೆ ಸಿಕ್ಕುಹಾಕಿಕೊಂಡ. ಬಿಜ್ಜು ಬಲವಾದ ಆಳು, ಚೆನ್ನಾಗಿ ಬಾರಿಸುತ್ತಾನೆ ಎಂದು ಹೆದರಿ ತಾನು ರಾಮ್ ಭರೋಸೆಯ ಆಜ್ಞೆಯ ಮೇರೆಗೆ ಕಳ್ಳತನಕ್ಕಾಗಿ ಬಂದುದಾಗಿ ಸುಳ್ಳು ಹೇಳಿದ ರಾಮ್ ಭರೋಸೆ ಮೊದಲಿನಿಂದ ಕೊಡೆಯನ್ನು ಇಷ್ಟಪಟ್ಟುದರಿಂದ ಎಲ್ಲರೂ ಅವನ ಮಾತನ್ನು ನಂಬುತ್ತಾರೆ ಎಂದು ಅಂದುಕೊಂಡಿದ್ದ. ಬಿನ್ಯಾ ಕೊಡೆಯ ಕಳ್ಳತನದ ವಿಷಯ ತಿಳಿದಾಗ ರಾಮರಾಜುವನ್ನು ಬಿಟ್ಟುಬಿಡಲು ಹೇಳಿದಳು. ಹಾಗೂ ರಾಮ್ ಭರೋಸೆಯ ಆಸಕ್ತಿಯನ್ನು ಗಮನಿಸಿ ತನ್ನ ನೀಲಿ ಕೊಡೆಯನ್ನು ಸಂತೋಷದಿಂದ ಕಾಣಿಕೆಯಾಗಿ ನೀಡಿದಳು. ರಾಮ್ ಭರೋಸೆಗೂ ಖುಷಿಯಾಗಿ ತನ್ನ ಹಂದಿಯ ಚಿಹ್ನೆಯಿದ್ದ ಕೊರಳಲ್ಲಿಯ ಪದಕವನ್ನು ಬಿನ್ಯಾ ಕೊರಳಲ್ಲಿ ಹಾಕುತ್ತ, 'ಇದು ನಿನ್ನ ಚಿರತೆ ಚಿಹ್ನೆಯ ಪದಕಕ್ಕಿಂತಲೂ ಪವಿತ್ರವಾದ ಪದಕ' ಎಂದು ಹೇಳಿದ.

***

ಸಣ್ಣ ಕತೆ

ಸತಿ ಸುಕನ್ಯ

-ಹು.ವಾ.ಶ್ರೀಪ್ರಕಾಶ

ಶಾಖೆಯ ವ್ಯವಸ್ಥಾಪಕ ಮಹೇಶ ತನ್ನ ಕ್ಯಾಬಿನ್ ನಲ್ಲಿ ಕುಳಿತು ಇಷ್ಟು ಹೊತ್ತೂ ಎದುರು ಕುಳಿತ ಗ್ರಾಹಕಿ ಸುಕನ್ಯಾ ಹೇಳಿದ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ. ಕೆಲವು ಕ್ಷಣ ಮೌನ ಆವರಿಸಿತ್ತು. ಮಹೇಶನ ಮನಸ್ಸಿನಲ್ಲಿ ಶಿವಮೂರ್ತಿಯವರ ಆಪ್ತ ಮುಖ ಒಂದು ಕ್ಷಣ ಬಂದು ಮರೆಯಾಯ್ತು.

ಸುಕನ್ಯಾ ಗ್ರಾಮೀಣ ಹಿನ್ನೆಲೆಯಿಂದ ಬಂದ ಹೆಣ್ಣು. ಆಕೆಯ ತಂದೆ ಮರದಿಂದ ಬಿದ್ದು ಕಾಲು ಮುರಿದುಕೊಂಡಿದ್ದು, ಮೂವರು ಹೆಣ್ಣುಮಕ್ಕಳನ್ನು ಕಡುಬಡತನದಲ್ಲಿ ಸಾಕುವ ಭಾರವೆಲ್ಲ ತಾಯಿಯ ಮೇಲೆ ಬಿದ್ದಿತಂತೆ. ಹಿರಿಯಳಾದ ಈಕೆ ಮದುವೆ ವಯಸ್ಸಿಗೆ ಬಂದಾಗ ಒಳ್ಳೆಯ ಸಂಬಂಧ ನೋಡಿ ಮದುವೆ ಮಾಡಿಕೊಡಲು ಹಣವೂ ಇರಲಿಲ್ಲ. ಜವಾಬ್ದಾರಿ ಹೊರುವವರೂ ಇರಲಿಲ್ಲ.

ವಯಸ್ಸಿಗೆ ಬಂದ ಮಗಳು ಮದುವೆಯಾಗದೇ ಮನೆಯಲ್ಲಿರುವುದು ಚಂದವೇ? ಜನ ಆಡಿಕೊಳ್ಳುತ್ತಾರೆ. ಇದೇ ಸಮಯದಲ್ಲೇ ದೂರದ ಬಂಧು ಶಿವಮೂರ್ತಿಗಳು ಎರಡನೇ ಸಂಬಂಧಕ್ಕೆ ಹೆಣ್ಣು ಹುಡುಕುತ್ತಿರುವುದು ತಿಳಿಯಿತು. ಮಗಳಿಗೆ ವರನನ್ನು ಹುಡುಕಿ ಮದುವೆ ಮಾಡಲು ಅವರಲ್ಲಿ ಹಣವೂ ಇರಲಿಲ್ಲವಾದ್ದರಿಂದ, ಬಂದು ಕೇಳಿದಾಗ ಮತ್ತು ಅವರಿಂದ ಹೆಚ್ಚಿನ ಸಹಾಯದ ಭರವಸೆ ಬಂದಾಗ ಇವಳ ಸಮ್ಮತಿಯನ್ನೂ ಕೇಳದೆ ಮದುವೆಗೆ ಒಪ್ಪಿ, ತವರಿನ ಕಡೆಯವರು ಇವಳ ಮದುವೆ ಮಾಡಿ ಸಾಗುಹಾಕಿದ್ದರು.

ಆರೋಗ್ಯ ಸಮಸ್ಯೆಯಿಂದ ಆಗಾಗ್ಗೆ ಬಳಲುತ್ತಿದ್ದ ಶಿವಮೂರ್ತಿಗಳು ತನ್ನನ್ನು ನೋಡಿಕೊಳ್ಳಲು ಯಾರಾದರೂ ಬೇಕೆಂದು ಈಕೆಯನ್ನು ಮದುವೆಯಾಗಿದ್ದಂತೆ.

ಮೂವತ್ತರ ಹುಡುಗಿಗೆ ಅರವತ್ತು ದಾಟಿದ ಮುದುಕ!

ಐದು ವರ್ಷದ ಸಂಸಾರದಲ್ಲಿ ಆಕೆ ಆತನ ಆರೈಕೆ ಮಾಡಿದ್ದೇ ಹೊರತು ಸುಖ ಕಂಡಿರಲಿಲ್ಲ. ಜೊತೆಗೆ ಪತಿಯ ಕುಟುಂಬದ ಕಡೆಯವರು ಬಂದಾಗೆಲ್ಲ ಕೊಂಕು ಮಾತಾಡುತ್ತ, ಕಿರುಕುಳ ನೀಡುತ್ತಿದ್ದರಂತೆ. 'ಬದುಕು ಅಸಹನೀಯವಾದರೂ ಹೇಗೋ ಇದುವರೆಗೆ ಸಹಿಸಿಕೊಂಡೆ. ಇಬ್ಬರು ತಂಗಿಯರ ಮದುವೆಯೂ ಆಗಿದೆ" ಎಂದು ಎಲ್ಲವನ್ನೂ ಮುಕ್ತವಾಗಿ ಹೇಳಿಕೊಂಡಳು. 'ಹೆಣ್ಣಾಗಿ ಹುಟ್ಟಬಾರದು' ಅಂತ ತನ್ನ ಸ್ಥಿತಿಗಾಗಿ ವ್ಯಥೆಪಟ್ಟಳು. ಪಾಸ್ ಬುಕ್ ತೋರಿಸಿ ನಾಡಿದ್ದು ಅಕೌಂಟ್ ಕ್ಲೋಸ್ ಮಾಡುವುದಾಗಿ ಹೇಳಿ, 'ನನಗೆ ಹಣ ಸಿಗುವುದಕ್ಕೆ ತೊಂದರೆಯಾಗುವುದಿಲ್ಲವಷ್ಟೇ' ಎಂದು ಕೇಳಿದಳು.

ಅದು ಅವಳ ವೈಯಕ್ತಿಕ ಖಾತೆ. ಹಣ ತೆಗೆಯುವುದಕ್ಕಾಗಲೀ ಖಾತೆಯನ್ನು ಮುಕ್ತಾಯಗೊಳಿಸುವುದಕ್ಕಾಗಲೀ ಯಾವ ತೊಂದರೆಯೂ ಇರಲಿಲ್ಲ.

'ಖಾತೆ ಯಾಕೆ ಕ್ಲೋಸ್ ಮಾಡುತ್ತೀರಿ? ಎಂದು ಮಹೇಶ ಸಹಜವಾಗಿ ಕೇಳಿದ್ದಕ್ಕೆ ಆಕೆ ತನ್ನ ಎಲ್ಲ ವೃತ್ತಾಂತವನ್ನೂ ಹೇಳಿದ್ದಳು. ಅಷ್ಟೇ ಅಲ್ಲ, ತಾನು ಮೈಸೂರಿನಲ್ಲಿರುವ ತಂಗಿಯ ಮನೆಗೆ ಹೋಗುವುದಾಗಿಯೂ ಹೇಳಿದಳು

'ಇಂದೇ ಕ್ಲೋಸ್ ಮಾಡುವಿರಾ' ಎಂದಾಗ, "ಬೇಡ ಸರ್, ಅವರು ದಿನಾ ಪಾಸ್ ಬುಕ್ ನೋಡುತ್ತಿರುತ್ತಾರೆ. ನಾಳೆ ಕೇಳಿದರೆ? ನಾನು ಹೋಗುವಾಗ ಇಲ್ಲಿ ಬಂದು ಕ್ಲೋಸ್ ಮಾಡಿಕೊಂಡು ಹೋಗುತ್ತೇನೆ" ಎಂದಳು.

ಸಾಧಾರಣವಾಗಿ ಶಿವಮೂರ್ತಿಗಳು ಪಿಂಚಣಿ ತೆಗೆದುಕೊಳ್ಳಲು ಬ್ಯಾಂಕಿಗೆ ಬಂದಾಗಲೆಲ್ಲ ಮಹೇಶ ನೊಂದಿಗೆ ನಾಲ್ಕು ಮಾತನಾಡಿ ಹೋಗುತ್ತಿದ್ದರು. ಮಹೇಶ ತನ್ನ ಆಲಿಸಿಕೊಳ್ಳುವ ಗುಣದಿಂದಾಗಿ ಅನೇಕ ಹಿರಿಯ ನಾಗರಿಕರಿಗೆ ಪ್ರಿಯನಾಗಿದ್ದ. ಎಲ್ಲರೂ ಅವರ ಕಷ್ಟಸುಖ ಇವನೊಂದಿಗೆ ಹೇಳಿಕೊಳ್ಳುತ್ತಿದ್ದರು.

ಶಿವಮೂರ್ತಿಗಳು ಒಮ್ಮೆ ತಮ್ಮ ಪತ್ನಿಯನ್ನು ಕರೆತಂದು ಅವಳ ಹೆಸರಲ್ಲೇ ಲಾಕರ್ ಕೂಡಾ ಪಡೆದು ಕೊಂಡಿದ್ದರು. ಆಕೆಗೆ ಲಾಕರಿಗೆ ಸಂಬಂಧಿಸಿದಂತೆ ವ್ಯವಹರಿಸಲು ಲೆಕ್ಕಪತ್ರ ವ್ಯವಸ್ಥಾಪಕರ ಪರಿಚಯ ಮಾಡಿಸಿದ್ದ ಮಹೇಶ. ನಂತರ ಕೆಲವೊಮ್ಮೆ ಆಕೆಯೇ ಬಂದು ಬ್ಯಾಂಕಿನಲ್ಲಿ ವ್ಯವಹರಿಸುತ್ತಿದ್ದಳು. ನೇರವಾಗಿ ಕೌಂಟರಿನಲ್ಲಿ ವ್ಯವಹರಿಸಬಹುದಾದರೂ ಮಹೇಶನ ಬಳಿಗೆ ಬಂದೇ ಹೋಗುತ್ತಿದ್ದಳು. ಬಹುಶಃ ಶಿವಮೂರ್ತಿಗಳು ಹಾಗೆ ಆದೇಶಿಸಿದ್ದರೇನೋ. ಆ ದಿನ ಆಕೆ ಅಕೌಂಟಂಟ್ ಬಳಿ ಹೋಗಿದ್ದನ್ನು ಮಹೇಶ ಗಮನಿಸಿದ.

ಮಹೇಶನಿಗೆ ಇವಳು ಶಿವಮೂರ್ತಿಗಳಂತಹ ಒಳ್ಳೆಯ ವ್ಯಕ್ತಿಗೆ ವಂಚಿಸುತ್ತಿದ್ದಾಳಲ್ಲಾ, ಛೇ.. ನೋಡಲು ಎಷ್ಟು ಲಕ್ಷಣವಾಗಿ ಸಭ್ಯಳಂತೆ ಇದ್ದಾಳೆ ಅನಿಸಿತು.

ರಾಜಕುಮಾರಿ ಸುಕನ್ಯಾ ಅರಿಯದೇ ತಪಸ್ಸಿಗೆ ಕುಳಿತು ಹುತ್ತ ಆವರಿಸಿದ್ದ ಚ್ಯವನರ ಕಣ್ಣಿಗೆ ಹುಲ್ಲುಕಡ್ಡಿಯಿಂದ ಚುಚ್ಚಿದ್ದಕ್ಕೆ ಪ್ರಾಯಶ್ಚಿತ್ತವಾಗಿ ಆತನನ್ನೇ ಮದುವೆಯಾಗಿ ಮಹಾ ಪತಿವೃತೆ ಎನಿಸಿದಳು. ಈ ಸುಕನ್ಯಾ ಗಂಡನನ್ನು ತೊರೆದು ಸಿಕ್ಕಷ್ಟು ದೋಚಿಕೊಂಡು ಹೋಗುತ್ತಿದ್ದಾಳೆ.

ಬ್ಯಾಂಕಿನ ಕರ್ತವ್ಯವನ್ನು ನನ್ನ ಇತಿಮಿತಿಯಲ್ಲಿ ನಿರ್ವಹಿಸಬೇಕೇ ಹೊರತು ಬೇರೆಯವರ ಸಂಸಾರ ಸರಿಮಾಡುವ, ತಪ್ಪು ಸರಿ ವಿಶ್ಲೇಷಿಸುವ ಕೆಲಸ ನನ್ನದಲ್ಲ. ಗ್ರಾಹಕರ ಖಾತೆಗೆ ಸಂಬಂಧಿಸಿದಂತೆ ಗೌಪ್ಯವನ್ನು

ಕಾಪಾಡುವುದೂ ಹೊಣೆಯೇ ಆಗುತ್ತದೆ. ಇವಳ ಮಾತುಗಳು ತನ್ನಲ್ಲಿ ಅನಾವಶ್ಯಕ ಗೊಂದಲ ಮೂಡಿಸಿ ಯಾವುದೋ ಪಾಪಪ್ರಜ್ಞೆ ಮೂಡಿಸುತ್ತಿದೆ ಅಂದುಕೊಂಡ ಮಹೇಶ.

ಎಂದಿನಂತೆ ಇತರ ಕೆಲಸದ ಒತ್ತಡದಲ್ಲಿ ಎರಡು ದಿನ ಕಳೆದೇಬಿಟ್ಟಿತು.

ಬ್ಯಾಂಕ್ ತೆರೆದ ಸ್ವಲ್ಪ ಹೊತ್ತಿಗೇ ಆಕೆ ಬಂದಳು. ಖಾತೆ ಮುಕ್ತಾಯಗೊಳಿಸಬೇಕೆಂಬ ಆಕೆಯ ವಿನಂತಿ ಪತ್ರಕ್ಕೆ ಮುಕ್ತಾಯಗೊಳಿಸಲು ಆದೇಶ ನೀಡಿ ಒಕ್ಕಣೆ ಬರೆದು ಕಳಿಸುವಾಗ, "ಶಿವಮೂರ್ತಿಗಳು ಹೇಗಿದ್ದಾರೆ" ಎಂದು ಕೇಳಿದ.

"ಅವರಿಗೆ ಅಷ್ಟಾಗಿ ಆರೋಗ್ಯ ಸರಿಯಿಲ್ಲ, ಮಲಗಿದ್ದಾರೆ. ನನ್ನ ಫೋನನ್ನು ಅವರ ಮಂಚದಲ್ಲಿಯೇ ಬಿಟ್ಟಿದ್ದೇನೆ. ಅವರ ಸಂಪರ್ಕಕ್ಕೆ ಸಿಗುವುದಿಲ್ಲ. ಅವರಿಗೆ ನಾನು ಮೈಸೂರಿಗೆ ಹೋಗುವುದು ಗೊತ್ತಿಲ್ಲ. ಒಂದುವೇಳೆ ಇಲ್ಲಿ ಬಂದು ಕೇಳಿದರೆ ನೀವೂ ಹೇಳಬೇಡಿ' ಎಂದು ಯಾಚಿಸುವಂತೆ ವಿನಂತಿಸಿಕೊಂಡು ಕೌಂಟರಿನೆಡೆಗೆ ನಡೆದಳು.

ಮಾತಿನ ಭರದಲ್ಲಿ ಬಹುಶಃ ಮೈಸೂರಿಗೆ ಹೋಗುವ ವಿಚಾರ ನನಗೆ ಹೇಳಿಬಿಟ್ಟಿದ್ದಾಳೆ .ಈಗ ನನಗೇ ಹೇಳಬೇಡಿ ಅನ್ನುತ್ತಿದ್ದಾಳಲ್ಲ, ಅಂದುಕೊಂಡ ಮಹೇಶ.

ಅವನಿಗೆ ಒಟ್ಟಾರೆ ಅವಳಾಡಿದ ಮಾತುಗಳೆಲ್ಲ ಕಿರಿಕಿರಿಯಾಗಿ ಗೊಂದಲ ಮೂಡಿಸಿತ್ತು. ಸುಮ್ಮನೆ ಖಾತೆ ಕ್ಲೋಸ್ ಮಾಡಿಕೊಂಡು ಹೋಗುವುದು ಬಿಟ್ಟು ಯಾಕಾದರೂ ಅವಳು ನನಗೆ ಈ ವೃತ್ತಾಂತವೆಲ್ಲ ಹೇಳಿದಳೋ..

ಒಂದು ಕ್ಷಣ ಆಕೆಯನ್ನು ಕರೆದು, ನೀನು ಮಾಡುತ್ತಿರುವುದು ತಪ್ಪು ಎಂದು ತಿಳಿಹೇಳುವ ಪ್ರಯತ್ನ ಮಾಡೋಣವೇ ಅನಿಸಿತು. ಅಷ್ಟರಲ್ಲಿ ಮತ್ತೊಬ್ಬ ಪ್ರಮುಖ ಗ್ರಾಹಕರು ಬಂದ ಕಾರಣ ಅವರನ್ನು ಒಳಗೆ ಸ್ವಾಗತಿಸಿದ.

ಸ್ವಲ್ಪ ಹೊತ್ತಿನ ನಂತರ ಆಕೆ ಮಹೇಶನ ಕ್ಯಾಬಿನ್ ಎದುರು ಬಂದು ದೂರದಿಂದಲೇ ಅವನಿಗೆ ನಮಸ್ಕರಿಸಿ, ಯಾವುದೋ ಸಮಸ್ಯೆಯಿಂದ ಬಿಡುಗಡೆಗೊಂಡ ಪ್ರಸನ್ನತೆಯಲ್ಲಿ ಜೊತೆಗೆ ಬಂದಿದ್ದ ತಂಗಿಯೊಡನೆ ಹೊರನಡೆದಳು.

*****

ಸಣ್ಣ ಕತೆ

ಆ ಘಟನೆಗೂ ಮುನ್ನ

- ಪೋರ

ವಿಶ್ವೇಶ್ವರ ಬಾಬು ಒಬ್ಬ ಕಾರ್ ಸೇಲ್ಸಮನ್. ಅವನದು ಸಣ್ಣ ಕುಟುಂಬ; ಹೆಂಡತಿ, ನಾಲ್ಕು ವರ್ಷದ ಮಗ, ಜೊತೆಗೆ ಅನಾರೋಗ್ಯದಿಂದ ಬಳಲುತ್ತಿರುವ ತಾಯಿ. ತಂದೆ ತೀರಿಕೊಂಡ ಮೇಲೆ ತಾಯಿ ಹೆಚ್ಚೂಕಡಿಮೆ ಹಾಸಿಗೆ ಹಿಡಿದಿದ್ದಾಳೆ. ಅವಳ ಅನಾರೋಗ್ಯ ಅವಳ ಕಕ್ಕುಲತನ ಹೆಚ್ಚಿಸಿದೆ. ತಾಯಿ ಮತ್ತು ಹೆಂಡತಿಯ ನಡುವೆ ಮಾತಿನ ಚಕಮಕಿ ಸದಾ ಇದ್ದೇ ಇರುತ್ತದೆ. ಬಾಡಿಗೆ ಮನೆ ಎಂದರೆ ಎಲ್ಲ ಸೌಕರ್ಯಗಳೂ ಹೇಗೆ ಇರಲು ಸಾಧ್ಯ. ಆದರೆ ತಾಯಿ ಕೇಳಬೇಕಲ್ಲ. ಕರೋನ ಕಾಲದಲ್ಲಿ ಮನೆಯಲ್ಲೇ ಮಗನನ್ನು ಆಡಿಸಿಕೊಂಡು ಹಿಡಿದಿಟ್ಟುಕೊಳ್ಳುವ ಕೆಲಸ ಹೆಂಡತಿಯದಾಗಿತ್ತು.

ಎಂದಿನಂತೆ, ತನ್ನ ಆಫೀಸಿನ ಬ್ಯಾಗು ಹಿಡಿದು ಮತ್ತೊಂದು ಕೈಯಲ್ಲಿ ಹೆಂಡತಿ ಕೊಟ್ಟ ಊಟದ ಡಬ್ಬಿ ಹಿಡಿದು ಕೆಲಸಕ್ಕೆ ಹೊರಟ ವಿಶ್ವೇಶ್ವರ. ವಾರದ ಕೆಳಗೆ ರಿಪೇರಿಗೆಂದು ಕೊಟ್ಟಿದ್ದ ಸ್ಕೂಟರನ್ನು ಹಣ ತೆತ್ತು ಹಿಂದಕ್ಕೆ ತರಬೇಕಿತ್ತು. ಹಣ ಸಾಲಲಿಲ್ಲ.ಇಂದು ಸಹ ೨ ಕಿಲೋಮೀಟರು ನಡೆದೇ ಹೋಗುವುದೆಂದು ತೀರ್ಮಾನ ಮಾಡಿದ.

"ಏನು ಬರೀ ಕೊಟೇಷನ್ ಕೊಡುತ್ತಿರುತ್ತೀರೋ ಇಲ್ಲ ಮಾರಾಟಾನೂ ಆಗುತ್ತದೋ? ಈ ವಾರದಲ್ಲಿ ಒಂದು ಗಾಡಿ ಸಹ ಮಾರಾಟವಾಗಿಲ್ಲ." ಹಿಂದಿನ ದಿನ ಸೈಮನ್ ಅರಚಿದ್ದ. ಅವನ ಧ್ವನಿಯಲ್ಲಿ ಎಂದಿನಂತೆ ನಂಜು ತುಂಬಿತ್ತು. ಸೈಮನ್ ವಿಶ್ವೇಶ್ವರನ ಮ್ಯಾನೇಜರ್.

ಬರುವವರೆಲ್ಲ ಗಾಡಿ ನೋಡುವುದು, ಟೆಸ್ಟ್ ಡ್ರೈವ್ ಮಾಡುವುದು, ವಿಷಯ ಸಂಗ್ರಹಿಸಿ ಬ್ರೋಶರ್ ಗಳನ್ನೂ ಪಡೆದು, "ಮತ್ತೆ ಬರುತ್ತೇವೆ" ಎಂದು ಹೇಳಿ ಹೋಗುವುದು ಮಾಮೂಲಾಗಿತ್ತು. ಯಾರೂ ಕಾರುಗಳನ್ನು ಕೊಳ್ಳದೆ ಹೋದರೆ ಸೇಲ್ಸಮನ್ ಆದ ನಾನು ಏನು ಮಾಡಲಿ?

ಇತ್ತೀಚೆಗೆ ಸೈಮನ್ ಏಕವಚನದಲ್ಲಿ, ಮಾತನಾಡಿಸುತ್ತಾನೆ, ಖದೀಮ. "ಹೀಗೇ ಇದ್ದರೆ ಇನ್ಸೆಂಟಿವ್ ಇರಲಿ ಸಂಬಳ ಬರುವುದೂ ಗ್ಯಾರಂಟಿ ಇರೋಲ್ಲ ಗೊತ್ತೇ" ಎಂದಿದ್ದ ಮೊನ್ನೆ. ಸೈಮನನ್ನು ಬೈದುಕೊಳ್ಳುತ್ತಲೇ ಇಕ್ಕಟ್ಟಿನ ಫುಟ್ ಪಾತನ್ನು ಸಂಭಾಳಿಸಿಕೊಂಡು ನಡೆದು ಆಫೀಸು ತಲುಪಿದ್ದ ವಿಶ್ವೇಶ್ವರ.

"ದೇವೇಂದ್ರ ಮೋಟಾರ್ಸ್" ದೊಡ್ಡ ಫಲಕ. ಗಾಜಿನ ಗೋಡೆಯ ಹಿಂದೆ ಫಳಫಳ ಹೊಳೆಯುವ ಕಾರುಗಳು. ಕರೋನ ಬಂದಾಗಿನಿಂದ ವ್ಯಾಪಾರ ಕಡಿಮೆಯಾಗಿದೆ. ಸಿಡಿಮಿಡಿಗೊಂಡೇ ಆಫೀಸಿನ ಒಳಹೊಕ್ಕು ತನ್ನ ಟೇಬಲ್ ಮೇಲೆ ಬ್ಯಾಗು ಎಸೆದು ಕಾಫಿ ಕುಡಿಯುವ ಎಂದು ಹೊರಟ.

"ಯಾಕ್ರೀ ತಡ. ನೋಡಿ ಕಸ್ಟಮರ್ ಅಲ್ಲಿ ಕಾಯುತ್ತಿದ್ದಾರೆ. ಅಟೆಂಡ್ ಮಾಡಿ" ಸೈಮನ್ನಿನ ಹದ್ದಿನ ಕಣ್ಣಿನಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ಹರಕಲು ಗಡ್ಡ. ಉಟ್ಟ ಪಂಚೆ ಮೇಲೆ ನೀಲಿ ಬುಷ್ ಷರಟು ಧರಿಸಿದ್ದ, ಆರು ಅಡಿ ಎತ್ತರದ ನಡುವಯಸ್ಕ. ಎಣ್ಣೆ ಹಚ್ಚಿ ತೀಡಿ ಬಾಚಿದ ತಲೆ. ವಿಶ್ವೇಶ್ವರ ತನ್ನ ಮಾರ್ಕೆಟಿಂಗ್ ತಂತ್ರಗಳನ್ನು ನೆನಪಿಸಿಕೊಂಡು ಆ ವ್ಯಕ್ತಿಯನ್ನು ಅಪಾದಮಸ್ತಕ ನೋಡಿ ಅಳೆಯುವ ಕೆಲಸ ಮಾಡಿದ. ಕಾರು ಕೊಳ್ಳುವ ಹುಟ್ಟು ಕಾಣಲಿಲ್ಲ. ಆದರೂ ನಗುನಗುತ್ತಲೇ ಮಾತನಾಡಿಸಿದ.

"ಸಾರ್, ನಿಮಗೆ ಎಂತಹ ಕಾರು ಬೇಕು" ಎಂದ.

"ವ್ಯಾಲಿಡೋ ಕಾರು" ಎಂದಿತು ಆ ವ್ಯಕ್ತಿ.

ಆ ವ್ಯಕ್ತಿಯನ್ನು ಗಾಡಿಯ ಬಳಿ ಕರೆದೊಯ್ದ ವಿಶ್ವೇಶ್ವರ. ಗಾಡಿಯ ಬಾಗಿಲು ತೆರೆದು ಕಾರಿನ ಪ್ರತಿಯೊಂದು ವಿಶೇಷಗಳನ್ನು ವಿವರಿಸಿ ಹೇಳತೊಡಗಿದ. ಆ ವ್ಯಕ್ತಿಗೆ ಅರ್ಥವಾದಂತೆ ಅನಿಸಲಿಲ್ಲ.

"ಟೆಸ್ಟ್ ಡ್ರೈವ್ ಮಾಡುತ್ತೀರೇನು?"

"ಇಲ್ಲ ನಮ್ಮ ಹುಡುಗ ಬರ್ತೌನೆ. ಖರ್ಚು ಎಷ್ಟಾಗುತ್ತೆ ಏಳ್ರಿ. ಬ್ಯಾಂಕು ಸಾಲ ಸಿಗುತ್ತದೆ ಅಲ್ರಾ" ಎಂದ.   .

"ಆನ್ ರೋಡ್ ಹದಿನೆಂಟು ಲಕ್ಷ ಐವತ್ತು ಸಾವಿರ ಆಗುತ್ತದೆ". ಎಂದ.

"ಯಾವ ಬಣ್ಣದ್ದು. ಸ್ಟೀಲ್ ರಿಮ್, ಲೆದರ್ ಸೀಟ್ಸ್, ಮ್ಯೂಸಿಕ್ ಸಿಸ್ಟಂ ಇರಲಿ ಅಲ್ಲವಾ? "

"ನಮ್ಮ ಹುಡುಗ ಬರ್ತೌನೆ. ಬ್ಯಾಂಕಿನ ಸಾಲ ಎಷ್ಟು ಸಿಗುತ್ತೆ ಹೇಳ್ರಲಾ?" ಎಂದ ಅವನು.

"ನೋಡಿ ಯಜಮಾನರೇ. ಕಾರು ಬೇಕೆಂದರೆ ನೀವು ಕನಿಷ್ಠ ೧೦ ಲಕ್ಷ ಪೇಮೆಂಟ್ ಮಾಡಬೇಕು. ನಿಮ್ಮ ಆಧಾರ್ ಕಾರ್ಡು, ಪ್ಯಾನ್ ಕಾರ್ಡು ಮತ್ತು ಇತರ ಡೀಟೇಲ್ಸ್ ಕೊಟ್ಟರೆ ಕಂತುಗಳಲ್ಲಿ ಸಾಲಕ್ಕೆ ವ್ಯವಸ್ಥೆ ಮಾಡುತ್ತೇವೆ. ಮೊದಲು ೧೦ ಲಕ್ಷ ಇಂದೇ ವ್ಯವಸ್ಥೆ ಮಾಡಲು ಆಗುತ್ತದೆಯೇ, ಹೇಳಿ?" ಎಂದ. ಅವನಿಗೆ ಗೊತ್ತಿಲ್ಲದೇ ಅವನ ಧ್ವನಿ ಗಡುಸಾಗಿತ್ತು. ಅವನಿಂದ ಅದು ಸಾಧ್ಯವಿಲ್ಲ ಎಂಬ ಸಂಶಯ ಏಕೋ ಕಾಡಿತ್ತು. ಏಕೋ ಇಂದು ಬೆಳಬೆಳಿಗ್ಗೆ ಇಂತಹ ಗಿರಾಕಿ ಸಿಕ್ಕನಲ್ಲ ಶಿವನೇ ಎಂದುಕೊಂಡ. ಎರಡು ವರ್ಷಗಳಿಂದ ಕರೋನ ನೆಪದಲ್ಲಿ ಸಂಬಳ ಹೆಚ್ಚು ಮಾಡುವುದಿರಲಿ, ೨೦% ಕಡಿತ ಮಾಡಿದ್ದ ಸೈಮನ್.

"ಬೇಕಿದ್ದರೆ ಕೆಲಸ ಮಾಡಿ ಇಲ್ಲವೇ ಕೆಲಸ ಬಿಟ್ಟು ಹೋಗಿ" ಎನ್ನುವುದು ಅವನ ಧೋರಣೆಯಾಗಿತ್ತು. ಏನಾದರೂ ನೆಪ ಸಿಕ್ಕರೆ ಸಾಕು ಸ್ಟಾಫ್ ಕಡಿಮೆ ಮಾಡುವ ಯೋಚನೆ ಅವನದು.

ವಿಶ್ವೇಶ್ವರ ತಿರುಗಿ ನೋಡಿದರೆ ಕಾರು ಕೊಳ್ಳಲು ಬಂದ ಆ ವ್ಯಕ್ತಿ ಕಾಣಲಿಲ್ಲ. ಕೆಲವು ಪೇಪರ್ರುಗಳನ್ನು ಪ್ರತಿ ಮಾಡಬೇಕಿತ್ತು. ಝೆರಾಕ್ಸ್ ಮೆಶಿನ್ನಿನ ಬಳಿ ಹೊರಟ. ಅಲ್ಲಿ ದಿಲೀಪ್ ರಾಜ್ ನಿಂತಿದ್ದ.

"ಹೇ ಬ್ರೋ, ವೈ ಡಾ ಮೂಡ್ ಖರಾಬು?" ಎಂದ. ಅವನ ಕಾಕ್ಸ್ ಟೌನ್ ಕನ್ನಡ ಕೇಳಲು ಬಹಳ ಚಂದ.

"ನನ್ನ ಗ್ರಹಚಾರ. ಒಂದು ಗಿರಾಕಿ ಗಂಟುಬಿದ್ದಿದೆ" ಎಂದು ಹಿಂದಿರುಗಿ ನೋಡಿದರೆ ಆ ಗಿರಾಕಿ ಅಲ್ಲೇ ನಿಂತಿರಬೇಕೆ!

"ನಿಮಗೆ ಪ್ಯಾನ್ ಕಾರ್ಡು ಕೊಡಬೇಕಿತ್ತು ಅಲ್ರಾ?" ಎಂದವನೇ ತನ್ನ ಬ್ಯಾಗಿನಿಂದ ಪ್ಯಾನ್ ಕಾರ್ಡ್ ಪ್ರತಿಯನ್ನು ತೆಗೆದುಕೊಟ್ಟ.

"ಸಾರ್, ಹೇಳಿದೆನಲ್ಲ, ಮೊದಲು ಹಣ ರೆಡಿ ಮಾಡಿಕೊಂಡು ಬನ್ನಿ. ಗಾಡಿ ಇಂದೇ ಕೊಂಡು ಒಯ್ಯುವಿರಂತೆ. ನಿಮ್ಮ ಹುಡುಗನನ್ನು ಕರೆತನ್ನಿ" ಎಂದು ಹೇಳಿ ತನ್ನ ಚೇರಿನ ಬಳಿ ಬಂದು ಉಸ್ಸಪ್ಪ ಎಂದು ಕುಳಿತ.

ಅಂದು ಸಂಜೆಯವರೆಗೆ ಒಂದೂ ಕಾರು ಮಾರಾಟವಾಗಲಿಲ್ಲ. ಸೈಮನ್ ಮುಖ ನೋಡಬೇಕಾಗುತ್ತದಲ್ಲ ಎಂದು ಚಿಂತಿಸಿದ. ಯೋಚಿಸುತ್ತಲೇ ಕುಳಿತಿದ್ದ. ಮನೆಗೆ ಹೋಗುವಾಗ ಅಮ್ಮನಿಗೆ ಕೆಮ್ಮಿನ ಔಷಧ ಕೊಂಡೊಯ್ಯಬೇಕು. ಮಗ ಕ್ರೆಯಾನ್ಸ್ ಮರೆಯದೆ ತಾ ಎಂದು ಹೇಳಿದ್ದ ನೆನಪಾಯಿತು. ಅದಕ್ಕೆ ಜೇಬಿನಲ್ಲಿ ಹಣ ಇದೆಯೇ ಎಂದು ನೋಡಿಕೊಂಡ. ಇಂದು ತಾನು ನಡೆದೇ ಮನೆಗೆ ಹೋಗಬೇಕು ಎಂಬುದನ್ನೂ ಜ್ಞಾಪಿಸಿಕೊಂಡ.

ನಾಲ್ಕು ಗಂಟೆ ವೇಳೆ. ಆ ವ್ಯಕ್ತಿ ಮತ್ತೆ ದಿಢೀರನೆ ಪ್ರತ್ಯಕ್ಷನಾಗಬೇಕೆ!. ನೇರ ಟೇಬಲ್ಲಿನ ಬಳಿ ಬಂದವನೇ, "ತೆಗೆದುಕೊಳ್ರಿ ೧೦ ಲಕ್ಷ ರೂಪಾಯಿ" ಎಂದು ನಗದು ಹಣ ಮುಂದಿಟ್ಟ. ಹಣದ ಕಟ್ಟುಗಳನ್ನು ಮುಂದೆ ಪೇರಿಸಿಡ ತೊಡಗಿದ. ಇವನಿಗೆ ಗಾಬರಿಯಾಯಿತು. ಸಾವರಿಸಿಕೊಂಡು 'ಸ್ವಲ್ಪ ಕುಳಿತುಕೊಳ್ಳಿ' ಎಂದವನೇ ಅಕೌಂಟ್ ವಿಭಾಗಕ್ಕೆ ಹೋಗಿ ವಿಷಯ ತಿಳಿಸಿದ. ಅಕೌಂಟ್ ಕ್ಲೋಸು ಆಗಿದೆ. ನಗದು ಪಡೆಯಲು ಆಗುವುದಿಲ್ಲ ಎಂದ ದಿಲೀಪ್ ರಾಜ್.

ಅವನು ನಿಸ್ಸಹಾಯಕನಾಗಿ ಆ ವ್ಯಕ್ತಿಯ ಬಳಿ ಬಂದು ನಿಧಾನವಾಗಿ ಎಲ್ಲ ವಿವರಿಸಿದ.

"ನೀವೇ ಹೇಳಿದ್ರಲ್ಲ ಹಣ ತನ್ರೀ ಅಂತ. ನಮ್ಮ ಹುಡುಗ ಊರಿಂದ ಬಂದೌನೆ ಗಾಡಿ ಇಂದೇ ಬೇಕ್ರ" ಎಂದ.

ಅವನ ಮಾತು ಸುತ್ತ ಇದ್ದವರಿಗೆ ಕೇಳುವಂತಿತ್ತು. ವಿಷಯ ತಿಳಿದು ಸೈಮನ್ ಬಂದವನೇ, “ಅದು ಹೇಗೆ ನಿಭಾಯಿಸುತ್ತೀಯೋ ನಿಭಾಯಿಸು ನೋಡುವ” ಎಂದನೇ ಹೊರತು ಸಮಸ್ಯೆ ಬಗೆಹರಿಸಲಿಲ್ಲ, ಖದೀಮ.

ಆ ವ್ಯಕ್ತಿ ಅಲ್ಲೇ ಕುಳಿತಿದ್ದ. "ನಿಮಗೆ ಹೇಳಿದೆನಲ್ಲ ಸಾರ್, ಇಂದು ತಡ ಮಾಡಿದ್ದೀರಿ. ನಾಳೆ ಬನ್ನಿ ನೋಡುವ" ಎಂದು ಗೋಗರೆದ. ಹಾಗೂ ಹೀಗೂ ಮಾಡಿ ಅವನನ್ನು ಕಳುಹಿಸಿದ್ದಾಯ್ತು. ಇತರ ಸೇಲ್ಸ್ ಮನ್ ಗಳು ಇವನ ಪರದಾಟವನ್ನು ನೋಡಿ ಒಳಗೊಳಗೇ ನಗುತ್ತಿದ್ದರು. ಯಾರೋ ಫೋಟೋವನ್ನೂ ತೆಗೆದುಕೊಂಡಂತಾಯಿತು.

ಮಾರನೆಯ ದಿನ ಬೇಗನೆ ಹೊರಟು ಆಫೀಸು ತಲುಪಿದ್ದ ವಿಶ್ವೇಶ್ವರ. ಆ ವ್ಯಕ್ತಿಗೆ ಕಾರು ಮಾರಬೇಕು ಎಂದು ತೀರ್ಮಾನಿಸಿದ್ದ. ಆದರೆ ಅನಾಹುತ ನಡೆದೇಹೋಗಿತ್ತು.

ಸೈಮನ್ ದುರದರನೆ ಬಂದವನೇ ನ್ಯೂಸ್ ಪೇಪರ್ ಒಂದನ್ನು ವಿಶ್ವೇಶ್ವರನ ಮುಂದೆ ಎಸೆದು, "ಓದಿ ನೋಡ್ರೀ" ಎಂದ.

"ಹಣ ತಂದರೂ, ಹಳ್ಳಿಯ ರೈತನಿಗೆ ಗಾಡಿ ಕೊಡದೆ ಅವಮಾನಿಸಿದ ಧೀರೇಂದ್ರ ಮೋಟಾರ್ಸ್." ಪತ್ರಿಕೆಯಲ್ಲಿ ಉಪ್ಪು ಹುಳಿ ಕಾರ ಬೆರೆಸಿ ವರದಿಯಾಗಿತ್ತು. ಸೈಮನ್ ಅಬ್ಬರಿಸಿದ.

"ಏನ್ರಿ ಇದು ಆವಾಂತರ? ನಮ್ಮ ಕಂಪನಿ ಹೆಸರು ಹಾಳು ಮಾಡಿಬಿಟ್ಟಿರಿ" ಎಂದು ಕಿರುಚಾಡಿದ.

ಅಂದು ಸಂಜೆಗೆ ಅವನ ರಿಲೀವಿಂಗ್ ಲೆಟರ್ ಎಣಿಸಿದ್ದಂತೆ ಕೈ ಸೇರಿತು. ಹೊರಗೆ ದಿಲೀಪ್ ರಾಜ್ ಆ ವ್ಯಕ್ತಿಗೆ ಗಾಡಿ ಕೊಡಿಸಿ ಅವನ ಜೊತೆ ಫೋಟೋ ತೆಗೆಸಿಕೊಳ್ಳುತ್ತಿದ್ದುದು ಇವನು ಕುಳಿತಲ್ಲಿಂದಲೇ ಕಾಣಿಸಿತು. ಸೈಮನ್ ಆ ವ್ಯಕ್ತಿಯ ಕೈ ಕುಲುತ್ತಿದ್ದ.

—

(ಇತ್ತೀಚೆಗೆ ದೊಡ್ಡ ಕಾರು ಕಂಪನಿಯ ಮಾರಾಟ ಮಳಿಗೆಯೊಂದು ಸುದ್ದಿ ಮಾಡಿತ್ತು. ನಗದು ಹಣ ತಂದರೂ ರೈತನೊಬ್ಬನಿಗೆ ಕಾರು ಕೊಡಲು ನಿರಾಕರಿಸಿತು ಎಂದು ಪತ್ರಿಕೆಗಳು ಬರೆದಿದ್ದವು. ಆ ಘಟನೆಯ ಮತ್ತೊಂದು ಮುಖವನ್ನು ಕಲ್ಪಿಸಿಕೊಂಡು ಬರೆದ ಕತೆ ಇದು.)

******

ಲಹರಿ

ನಮ್ಮ ಮನೆಯ ಕೊಟ್ಟಿಗೆಯ ಸುತ್ತ

- ಎನ್.ವಿ. ರಘುರಾಂ

ನನ್ನ ಬಾಲ್ಯ ಸ್ನೇಹಿತ ರಾಮಣ್ಣ ಸಂಜೆ ಮನೆಯ ಹತ್ತಿರ ಬಂದಾಗ ಈ ದಿನ ಎಂದಿನ ಉತ್ಸಾಹ ಕಾಣಲಿಲ್ಲ. ಅತ ಕಾಫೀ ಕುಡಿದು ಸ್ವಲ್ಪ ಸಮಯವಾಯಿತೆಂದು ಇದು ತೋರಿಸುತ್ತದೆ ಅಷ್ಟೇ. ನನ್ನ ಮನದನ್ನೆ ಕಾಫೀ ಕೊಟ್ಟು, ಎಲ್ಲರೂ ಮಾತಿಗೆ ಕೂತುಕೊಂಡಾಗ, ರಾಮಣ್ಣ ಮತ್ತೆ ಉತ್ಸಾಹದಿಂದ ಮಾತನಾಡಲು ಪ್ರಾರಂಭಮಾಡಿದ. "ಎಲೆಕ್ಟ್ರೀಕಲ್ ಇಂಜನೀಯರ್ ಮುಖದಲ್ಲಿ ಈಗ ಲೈಟ್ ಬಂತು" ಎಂದ ನನ್ನ ಮನೆಯವಳ ಮಾತಿಗೆ "ನಿಮ್ಮ ಕೈಯ ಕಾಫೀ ಗುಣ" ಎಂದು ರಾಮಣ್ಣ ನಕ್ಕ. "ಸ್ವಲ್ಪ ಈ ನಿಮ್ಮ ಫ್ರೆಂಡ್ಗೂ ಹೇಳಿ, ಎಷ್ಟು ಚೆನ್ನಾಗಿ ಕಾಫೀ ಮಾಡಿದರೂ ಇವರಿಗೆ ಮಾತ್ರ ಮೆಚ್ಚಿಸಲು ನನ್ನ ಕೈಲಿ ಆಗಿಲ್ಲ. ಹಳ್ಳಿಯ ನೊರೆಹಾಲಿನ ಕಾಫೀಯ ಜಪ ಕಳೆದ ಮೂವತ್ತು ವರ್ಷಗಳಿಂದ ಮಾಡುತ್ತಲೇ ಇರುತ್ತಾರೆ" ಎಂದು ನಕ್ಕಳು. "ರಾಮಣ್ಣ, ನೀನೇ ಹೇಳು! ಬೆಳಿಗ್ಗೆ ಅಮ್ಮ ಆಗತಾನೆ ಕರೆದು ತಂದಿಟ್ಟ ಎಮ್ಮೆ ಹಾಲಿಗೆ ಬೆಲ್ಲ ಹಾಕಿ ಮಾಡಿದ ಫಿಲ್ಟರ್ ಕಾಫಿ ಡಿಕಾಕ್ಷನ್ ಹಾಕಿ ಕುಡಿಯುವ ಮಜ ಇನ್ಯಾವ ಕಾಫೀಯಲ್ಲಿ ಬರುವುದು ಸಾಧ್ಯ". ರಾಮಣ್ಣ ಈಗ ಹುಷಾರಾಗಿ ಯಾವುದೇ ಉತ್ತರ ಕೊಡುವ ಗೋಜಿಗೆ ಹೋಗದೆ "ನಡಿ, ವಾಕಿಂಗಿಗೆ ತಡವಾಗುತ್ತದೆ" ಎಂದು ಎಬ್ಬಿಸಿದ.

ಬೆಂಗಳೂರಿನ ಬಹುಮಹಡಿ ಕಟ್ಟಡದ ಫ್ಲಾಟ್ ಒಂದರಲ್ಲಿ ವಾಸವಾಗಿರುವ ನನಗೆ ಕರೆದ ನೊರೆಹಾಲು ಎಲ್ಲಿ ಸಿಗಲು ಸಾಧ್ಯ! ಈ ಫ್ಲಾಟ್ನಲ್ಲಿ ಎಲ್ಲಾ ಅನುಕೂಲವೇನೋ ಇದೆ. ಆದರೆ ಕೊಟ್ಟಿಗೆ ಇಲ್ಲವಲ್ಲ. ಈಗಂತೂ ಎಲ್ಲಾ ಕಡೆ ಸೀಮೆ ಹಸುನೇ ಸಾಕುವುದು. ಬೆಂಗಳೂರಿನಲ್ಲಿ ಹಸು ನೋಡಲು ಹುಡುಕಿಕೊಂಡು ಹೋಗಬೇಕು. ಸಣ್ಣ ಜಾಗದಲ್ಲಿ ನಾಲ್ಕೈದು ಹಸು ಕಟ್ಟಿದರೆ ಅದೇ ಕೊಟ್ಟಿಗೆ. ಅಲ್ಲಿ ಸುತ್ತಲೂ ಸೆಗಣಿ, ಗಂಜಲದ ವಾಸನೆ, ನೊಣ ಇದೆಲ್ಲಾ ಸಾಮಾನ್ಯ. ಆದರೆ ಊರಿನಲ್ಲಿ ನಮ್ಮ ಮನೆಯ ಕೊಟ್ಟಿಗೆ ಹೀಗಿರುತ್ತಿರಲಿಲ್ಲ. ಬಹಳವೇ ಸ್ವಚ್ಛವಾಗಿರುತ್ತಿತ್ತು. ಒಂದೇ ಒಂದು ನೊಣ ಕೂಡ ಇರಲಿಲ್ಲ. ಅದಕ್ಕೆಲ್ಲಾ ಕಾರಣ ನಮ್ಮಮ್ಮ.

ಹೌದು! ಅಮ್ಮನಿಗೆ ಬಹುಶಃ ಬಹಳ ಇಷ್ಟವಾದ ಜಾಗ ಅಂದರೆ ನಮ್ಮ ಮನೆಯ ಕೊಟ್ಟಿಗೆ. ನಮ್ಮ ಮನೆಯ ಹಾಗೆಯೇ ಕೊಟ್ಟಿಗೆ ಕೂಡ ದೊಡ್ಡದಿತ್ತು. ಸುಮಾರು 30 ಅಡಿ ಉದ್ದ, 20 ಅಡಿ ಅಗಲದ ಕೊಟ್ಟಿಗೆ. ಬೆಂಗಳೂರಿನಲ್ಲಿ ಇಷ್ಟು ಜಾಗವಿದ್ದರೆ ಮೂರು ಮಹಡಿ ಮನೆ ಕಟ್ಟಿರುತ್ತಿದ್ದರು.

ಈ ಕೊಟ್ಟಿಗೆ ಕಟ್ಟಿರುವುದು ಕೂಡ ಬಹಳವೇ ಸುಲಭದಲ್ಲಿ. ಒಂದು ಕಡೆ ಜಂಬ್ಬಿಟ್ಟಿಗೆ ಗೋಡೆ. ಇನ್ನೊಂದು ಗೋಡೆ ಚಪ್ಪಡಿಕಲ್ಲಿನಲ್ಲಿ. ಹೌದು! ಹನ್ನೆರಡು ಅಡಿಯ ಗೋಡೆಗೂ ಚಪ್ಪಡಿಕಲ್ಲು. ನೆಲಕ್ಕೆ ಚಪ್ಪಡಿಕಲ್ಲು ಎಂದು ಹೇಳಬೇಕೇನಿದೆ? ಅದು ಅದು ಸಾಮಾನ್ಯ ಬಿಡಿ. ಒಂದು ಕಡೆ ಎರಡು ಕಿಟಕಿ, ನೀರು ಇಡುವಂತ ಬಾನಿ, ಹುಲ್ಲು ಹಾಕಲು ಕಟ್ಟೆ. ಇನ್ನೊಂದು ಕಡೆ ನೀರು ಹರಿದು ಹೊರಗೆ ಹೋಗುವಂತೆ ಒಂದು ಸಣ್ಣ ಮೋರಿ. ಬಲಗಡೆ ಗೋಡೆಯ

ತುದಿಯಲ್ಲಿ ಅಟ್ಟಕ್ಕೆ ಮೇಲೆ ಹೋಗಲು ಏಣಿ. ಮರದ ಅಟ್ಟದಲ್ಲಿ ಒಂದು ವರ್ಷಕ್ಕೆ ಆಗುವಷ್ಟು ಇಟ್ಟಿರುವ ಹುಲ್ಲಿನ ದಾಸ್ತಾನು! ಕೊಟ್ಟಿಗೆಯಿಂದ ಹಿಂದಿನ ರಸ್ತೆಗೆ ಹೋಗಲು ಬಾಗಿಲು ತೆರೆದರೆ ಕಾಣುವುದು "ಆಸ್ತಿಕ" ಮತ್ತು "ನಾಳೆ ಬಾ" ಎಂಬ ಬರಹ!

ಊರಿನ ಸಂತೆ ನಡೆಯುತ್ತಿದ್ದುದು ಸೋಮವಾರದಂದು. ಭಾನುವಾರ ರಾತ್ರಿ ಲಾರಿಯಲ್ಲಿ ದಾವಣಗೆರೆಯಿಂದ ಭಟ್ರು ಎಮ್ಮೆಗಳನ್ನು ತುಂಬಿಸಿಕೊಂಡು ತರುತ್ತಿದ್ದರು. ಊರಿನವರೆಲ್ಲ ಅವರಿಗೆ "ಎಮ್ಮೆ ಭಟ್ರು" ಎಂದೇ ಕರೆಯುತ್ತಿದ್ದರು! ಅವರಿಗೆ ಆದು ಗೊತ್ತಿದ್ದರೂ ಅದರ ಬಗ್ಗೆ ತಲೆಕೆಡಸಿಕೊಳ್ಳದೇ ಸಂತೋಷವಾಗಿಯೇ ಸ್ವೀಕರಿಸಿದ್ದರು. ದಾರಿಯಲ್ಲಿ ಸಿಕ್ಕಾಗ "ನಾನು ಸಂಜೆ ಬರುತ್ತೇನೆ ಎಂದು ಅಪ್ಪನಿಗೆ ಹೇಳು" ಎಂದು ಹೇಳುತ್ತಾ "ಎಮ್ಮೆ ಭಟ್ರು ಎಂದು ಹೇಳು, ಊರ ತುಂಬ ಭಟ್ರು ಇದ್ದಾರೆ, ಯಾರು ಎಂದು ಗೊತ್ತಾಗಬೇಕಲ್ಲ!" ಎಂದು ಜೋರಾಗಿ ನಗುತ್ತಿದ್ದರು!

ಊರಿನವರೆಲ್ಲಾ ಎಮ್ಮೆ ತೆಗೆದುಕೊಳ್ಳುವುದು ಇವರ ಕೈಯಲ್ಲೇ. ಅಪ್ಪನೇ ಪ್ರತಿಸಾರಿನೂ ಎಮ್ಮೆ ಆರಿಸಲು ಹೋಗುತ್ತಿದ್ದರು. ಅಪ್ಪ ಆರಿಸಿದ ಹೊಸ ಎಮ್ಮೆ ಮತ್ತು ಹುಟ್ಟಿ ಇನ್ನೂ ಒಂದೆರಡು ದಿನ ಆಗಿರುವ ಕರು ಕರೆದು ಕೊಂಡು ಬರುವ ಭಟ್ಟರ ಆಳು, ನಮ್ಮ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿ, ಹಳೆಯ ಎಮ್ಮೆ ಮತ್ತು ಕರು ಹಿಡಿದುಕೊಂಡು ಹೋಗುತ್ತಿದ್ದ. ಇದೊಂದು ಈಗಿನ ಕಾಲದ ಎಕ್ಸ್‌ಚೇಂಜ್ ವ್ಯಾಪಾರದ ತರಹೇ ಇತ್ತು.

ಪ್ರತಿಸಾರಿನೂ ಅಪ್ಪನೇ ಎಮ್ಮೆ ಆರಿಸಲು ಹೋಗುತ್ತಿದ್ದರು. ಒಂದು ಸಾರಿ ಬೇರೆ ಏನೋ ಕೆಲಸ ಬಂದಿದ್ದ ರಿಂದ ಹೋಗಿರಲಿಲ್ಲ. ಆಗ ಭಟ್ರು ಒಂದು ಎಮ್ಮೆ ಮತ್ತು ಕರು ತಂದು ಬೆಳಿಗ್ಗೆ ಕೊಟ್ಟಿಗೆಯಲ್ಲಿ ಕಟ್ಟಿ ಹೋಗಿದ್ದರು. ಎಲ್ಲಿಗೋ ಹೋಗಿದ್ದ ಅಪ್ಪ ಸುಮಾರು 11 ಗಂಟೆಯ ಹೊತ್ತಿಗೆ ಮನೆಗೆ ಬಂದು ಕೊಟ್ಟಿಗೆಯಲ್ಲಿ ಕಟ್ಟಿದ ಎಮ್ಮೆ ನೋಡಿ, "ಈ ಎಮ್ಮೆ ಬೇಡ ಇದಕ್ಕೆ ಕೋಣದ ಕಣ್ಣು" ಇದೆ ಎಂದರು!. ಈ ಮೊದಲು ಅವರು ಎಮ್ಮೆಯ ಬಾಯಲ್ಲಿ ಇರುವ ಹಲ್ಲನ್ನು ನೋಡಿ ಅದರ ವಯಸ್ಸು ನಿರ್ಧಾರ ಮಾಡುವುದನ್ನು ನೋಡಿದ್ದೆ. ಈಗ ಕಣ್ಣು ಕೂಡ ನೋಡಬೇಕು ಎಂದು ಗೊತ್ತಾಯಿತು. ಕೋಣದ ಕಣ್ಣು ಇದ್ದರೆ ಎಲ್ಲರಿಗೂ ಹಾಯುತ್ತೆ! ಆಗ ಅದರ ಜಾಗದಲ್ಲಿ ಬೇರೊಂದು ಎಮ್ಮೆ ಮತ್ತು ಮತ್ತು ಒಂದು ಸಣ್ಣ ಕರುವನ್ನು ಎಮ್ಮೆ ಭಟ್ಟರು ಕಳುಹಿಸಿದರು.

ಎಮ್ಮೆ ಬಂದ ತಕ್ಷಣ ಅಮ್ಮನ ಸಂಭ್ರಮ ಪ್ರಾರಂಭ ಆಗುತ್ತಿತ್ತು. ಅಮ್ಮ ಬೆಳಿಗ್ಗೆ ಎದ್ದಾಗ ಮಾಡುತ್ತಿದ್ದ ಮೊದಲ ಕೆಲಸ ಎಮ್ಮೆ ಮತ್ತು ಕರುವಿಗೆ ಹುಲ್ಲು ಹಾಕುವುದು. ಅಮ್ಮ ಕೊಟ್ಟಿಗೆ ಬಾಗಿಲ ಹತ್ತಿರ ಬಂದ ತಕ್ಷಣ ಎದ್ದು ನಿಂತು, ಕುತ್ತಿಗೆ ಅಲ್ಲಾಡಿಸಿದಾಗ ಕುತ್ತಿಗೆಗೆ ಕಟ್ಟಿದ ಗೆಜ್ಜೆ ಶಬ್ದ ಮಾಡಿ ಅಮ್ಮನಿಗೆ ಸ್ವಾಗತ ಕೋರುತ್ತಿತ್ತು! ಅಗ ಎಮ್ಮೆಗೆ ಎರಡು ಕಟ್ಟು, ಕರುವಿಗೆ ಅರ್ಧ ಕಟ್ಟು ಭತ್ತದ ಒಣಹುಲ್ಲು ಹಾಕುತ್ತಿದ್ದರು. ಸ್ವಲ್ಪ ಹೊತ್ತು ಬಿಟ್ಟು ಹಾಲು ಕರೆದುಕೊಂಡು ಬರುತ್ತಿದ್ದರು. ಮೊದಲ ದಿನ ಬೆಳಿಗ್ಗೆ ಎರಡು ಸೇರು ಹಾಲು ಕೊಟ್ಟಿದ್ದ ಎಮ್ಮೆ ಸಂಜೆಯ ಹೊತ್ತಿಗೆ ಹಾಲು ಎರಡು ಪಾವಿಗೆ ಇಳಿದಿರುತಿತ್ತು. "ಕೆಚ್ಚಲು ಕಟ್ಟಿಸಿದ್ದಾರೆ ವ್ಯಾಪಾರ ಮಾಡಕ್ಕೆ" ಎಂದು ಅಮ್ಮ ಹೇಳುತ್ತಿದ್ದರು. ವ್ಯಾಪಾರ

ಮಾಡಲು ಬಂದವರಿಗೆ ಕೆಚ್ಚಲು ಜೋರಾಗಿ ಕಾಣಲಿ ಎಂಬ ಕಾರಣಕ್ಕೆ ಹಿಂದಿನ ದಿನ ಹಾಲು ಕರೆಯುತ್ತಿರಲಿಲ್ಲ ವಂತೆ! ಹೊಸದಾಗಿ ಕರು ಹಾಕಿರುವ ಎಮ್ಮೆ ಇನ್ನೆಷ್ಟು ಹಾಲು ಕೊಡಲು ಸಾಧ್ಯ. ಅದರೆ ಅಮ್ಮನ ಆರೈಕೆಯಲ್ಲಿ ಅದು ಮೂರುನಾಲ್ಕು ದಿನಗಳಲ್ಲಿಯೇ ಸುಧಾರಿಸಿಕೊಂಡು ದೊಡ್ಡ ಕೊಳದಪ್ಪಲೆ ತುಂಬ ಹಾಲು ಕೊಡುತ್ತಿತ್ತು.

ಸ್ವಲ್ಪ ಹೊತ್ತಿಗೆ ಮನೆಯ ಕೆಲಸದವಳಾದ ಲಕ್ಷ್ಮೀ ಎಮ್ಮೆಗೆ ಸ್ನಾನ ಮಾಡಿಸುತ್ತಿದ್ದಳು. "ಯಾವಾಗಲೂ ಸಗಣಿ ಮೇಲೆ ಬಿದ್ದುಕೊಂಡು ಮೈಯಲ್ಲಾ ಮೆತ್ತಿಕೊಳ್ಳುತ್ತೀಯಲ್ಲೋ, ಅದರಲ್ಲೇನು ಗಂಟಿದೆಯಾ?" ಎಂದು ಬೈಯುತ್ತಾ, ಹುಲ್ಲಿನ ಚೆಂಡಿನಲ್ಲಿ ಮೈಯುಜ್ಜಿ ಸ್ನಾನ ಮಾಡಿಸಿ, ಆಗಾಗ ಸ್ವಲ್ಪ ಕೊಬ್ಬರಿಎಣ್ಣೆ ಹಚ್ಚಿ ಮತ್ತೆ ಮಿರಿಮಿರಿ ಮಿಂಚುವ ಹಾಗೆ ಮಾಡುತ್ತಿದ್ದಳು. ಆಮೇಲೆ 'ಹಿಂಡಿ' ಹಾಕುತ್ತಿದ್ದಳು. 'ಹಿಂಡಿ' ಹಾಕಿದರೆ ಚೆನ್ನಾಗಿ ಹಾಲು ಕೊಡುತ್ತದಂತೆ. ಮತ್ತೆ ಸಂಜೆ ಹೊತ್ತಿಗೆ ಅಮ್ಮ ಹುಲ್ಲು ಹಾಕಿ ಹಾಲು ಕರೆಯುತ್ತಿದ್ದರು. ಸಂಜೆ ಸ್ವಲ್ಪ ಹಾಲು ಕಡಿಮೆ. ರಾತ್ರಿ ಮಲಗುವಾಗ ಬಾನಿಯಲ್ಲಿ ನೀರು ಇದೆಯಾ ಎಂದು ಪರೀಕ್ಷೆ ಮಾಡುತ್ತಿದ್ದರು. ಬೇಸಿಗೆಯಲ್ಲಿ ಕೆಲವೊಮ್ಮೆ ಹಸಿ ಹುಲ್ಲು ಮಾರಲು ಬರುತ್ತಿತ್ತು. ಕೆಲವೊಮ್ಮೆ ಅದನ್ನು ತೆಗೆದುಕೊಂಡು ಹಾಕಿರುವುದೂ ಉಂಟು. ಇದರ ಜೊತೆ ಅಕ್ಕಿ ತೊಳೆದ ನೀರು, ಅನ್ನ ಬಸಿದ ಗಂಜಿ ಇವೆಲ್ಲ ಎಮ್ಮೆಗೆ. ಆಗೆಲ್ಲಾ ಸೇರಿನಲ್ಲಿ ಅಕ್ಕಿ ಅಳೆದು ಅಡಿಗೆ ಮಾಡುತ್ತಿದ್ದ ಕಾಲ. ಹಾಗಾಗಿ ಇವೆಲ್ಲಾ ಬೇಕಾದಷ್ಟು ಇರುತ್ತಿತ್ತು. ಜೊತೆಗೆ ಆಗಾಗ ಅಕ್ಕಿ ನುಚ್ಚು, ಹತ್ತಿ ಬಿಡಿಸಿದಾಗ ಸಿಗುತ್ತಿದ್ದ ಬೀಜ, ಬೆಲ್ಲ ಕೂಡ. ಇಷ್ಟೆಲ್ಲ ಉಪಚಾರ ಮಾಡಿಸಿಕೊಂಡ ಎಮ್ಮೆ ಅಮ್ಮನಿಗೆ ಮಾತ್ರ ಹಾಲು ಕೊಡುತ್ತಿತ್ತು. ಅಮ್ಮ ಇಲ್ಲದಿದ್ದರೆ ಮನೆ ಕೆಲಸದ ಲಕ್ಷ್ಮೀಗೆ ಮಾತ್ರ ಹಾಲು ಕೊಡುತ್ತಿತ್ತು. ಉಳಿದವರಿಗೆ ಏನು ಮಾಡಿದರೂ ಕೊಡುತ್ತಿರಲಿಲ್ಲ. ಮೂಕಪ್ರಾಣಿಗೆ ಗೊತ್ತಾಗುವುದಿಲ್ಲ ಎಂದು ಹೇಳಿದವರು ಯಾರು?

ಮಾರ್ಚ್, ಎಪ್ರಿಲ್ ತಿಂಗಳಿನಲ್ಲಿ ಎತ್ತಿನ ಗಾಡಿಯಲ್ಲಿ ಒಣಗಿದ ಹುಲ್ಲು (ಭತ್ತದ ಹುಲ್ಲು) ಮಾರಲು ಬರುತ್ತಿತ್ತು. ಅದನ್ನು ಕೊಟ್ಟಿಗೆಯ ಹಿಂಭಾಗದ ಬಾಗಿಲಲ್ಲಿ ಹಾಕಿಸಿಕೊಂಡು, ನಂತರ ಮನೆಯವರೆಲ್ಲಾ ಸಾಲಾಗಿ ನಿಂತು, ಒಬ್ಬರಿಂದ ಇನ್ನೊಬ್ಬರಿಗೆ ಪಾಸ್ ಮಾಡಿ ಅಟ್ಟದಲ್ಲಿ ಶೇಖರಣೆ ಮಾಡುತ್ತಿದ್ದೆವು. ಈಗ ಲೆಕ್ಕ ಹಾಕಿ ಒಂದು ವರ್ಷಕ್ಕೆ ಎಷ್ಟು ಹುಲ್ಲು ಬೇಕಾಗುತ್ತೆ ಅಂತ! ಹುಲ್ಲು ಮೇಲೆ ಸಾಗಿಸುವಾಗ ಮೈ, ಕೈ, ಮುಖ ಎಲ್ಲ ತಾಗುತ್ತಿತ್ತು. ಅಲ್ಲೆಲ್ಲಾ ಕಡಿತ ಬರುತ್ತಿತ್ತು! ಆ ಹುಲ್ಲುಕಡ್ಡಿಯಲ್ಲಿ ನಾವು ಸ್ಟ್ರಾ ಮಾಡಿಕೊಂಡು ಸೋಪು ಗುಳ್ಳೆ ಮಾಡುವುದು, ಗಂಟಿನ ಹತ್ತಿರ ಸೀಳಿ, ಪೀಪಿ ತರಹ ಊದುವುದು ಕೂಡ ನಡೆಯುತ್ತಿತ್ತು.

ಮೊದಲು ಬೆಳಿಗ್ಗೆ ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಎಮ್ಮೆ ಮೇಯಿಸುವವರು ಬರುತ್ತಿದ್ದರು. ಅವರು ಎಲ್ಲರ ಮನೆಯ ಎಮ್ಮೆಗಳನ್ನು ಹೊಡೆದುಕೊಂಡು ಹೋಗಿ ಸಂಜೆ ಐದರ ಹೊತ್ತಿಗೆ ಹಿಂತಿರುಗಿ ಕರೆದುಕೊಂಡು ಬರುತ್ತಿದ್ದರು. ಈ ಎಮ್ಮೆಗಳು ಮಧ್ಯ ರಸ್ತೆಯಲ್ಲೇ ಹೋಗುವುದು. ಹಾಗಾಗಿ ವಾಹನದಲ್ಲಿ ಬರುವವರು ಇವುಗಳನ್ನು "ಸ್ಪೀಡ್ ಬ್ರೇಕರ್" ಎಂದು ಕರೆಯುತ್ತಿದ್ದರು. ಕೆಲವೊಮ್ಮೆ ಎಮ್ಮೆ ಸಂಜೆ ಮನೆಗೆ ಬರದೆ ತಪ್ಪಿಸಿ ಕೊಳ್ಳುವುದೂ ಇತ್ತು. ಮಾರನೇ ದಿನ ಬೆಳಿಗ್ಗೆ ಆದರೂ ಪತ್ತೆ ಇರುತ್ತಿರಲಿಲ್ಲ. ಊರಿನ ದೊಡ್ಡಿಯಲ್ಲಿ ಮೊದಲು ಹೋಗಿ ನೋಡುತ್ತಿದ್ದರು. ದೊಡ್ಡಿ

ಅಂದರೆ ಏನು ಎಂದು ಮರೆತುಹೋಗಿದೆಯಾ? ಬೇರೆಯವರ ತೋಟ, ಗದ್ದೆಗೆ ಮೇಯಲು ನುಗ್ಗಿದ ಹಸು, ಎಮ್ಮೆಗಳನ್ನು ಇಲ್ಲಿ ತಂದು ಬಿಡುತ್ತಿದ್ದರು! ಫೈನ್ ಕಟ್ಟಿ ಬಿಡಿಸಿಕೊಂಡು ಹೋಗಬೇಕಿತ್ತು!

ಊರಿನ ಗಾಂಧಿ ಚೌಕದ ಹತ್ತಿರ ಒಬ್ಬ ಗಡ್ಡ ಬಿಟ್ಟುಕೊಂಡು, ನೋಡಲು ಭಿಕ್ಷುಕನ ತರಹ ಇರುವ ಮನುಷ್ಯ ಓಡಾಡಿಕೊಂಡು ಇರುತ್ತಿದ್ದ. ಅವನ ಹೆಸರೇನು? ಯಾರಿಗೂ ಗೊತ್ತಿಲ್ಲ. ಅವನಿಗೆ ಹೋಗಿ ಹೇಳಿ ಬಂದರೆ ಅರ್ಧ ಗಂಟೆ ಬಿಟ್ಟು ಬರುತ್ತಿದ್ದ. ಎಮ್ಮೆ ಕಟ್ಟುವ ಗೂಟದ ಹತ್ತಿರ ಮಣ, ಮಣ (ಅಭ್ರಟಕಟ!) ಎಂದು ಏನೇನೋ ಐದು ನಿಮಿಷ ಒದರುತ್ತಿದ್ದ. ನಂತರ ಅಲ್ಲಿ ಎರಡು ಊದಿನ ಕಡ್ಡಿ ಹಚ್ಚಿ, ನಿಂಬೆಹಣ್ಣು ಇಡುತ್ತಿದ್ದ. ಅವನು ಪೂಜೆ ಮಾಡಿ ಹೋದ ಸ್ವಲ್ಪ ಹೊತ್ತಿಗೆ ಎಮ್ಮೆ ಎಲ್ಲಿದ್ದರೂ ತಾನಾಗಿಯೇ ಬಂದು ಬಾಗಿಲ ಬಳಿ ನಿಲ್ಲುತ್ತಿತ್ತು! ಆ ಎಮ್ಮೆಗೆ ದಾರಿ ತೋರಿಸಿದವರು ಯಾರು? ಈ ವಿಚಿತ್ರ ಮಾತ್ರ ಯಾರಿಗೂ ಅರ್ಥವಾಗಿರಲಿಲ್ಲ.

ಎಲ್ಲೆಲ್ಲೂ ಏನೇನೊ ತಿಂದುಕೊಂಡು ಬಂದರೆ ನಮಗೆ ಹೊಟ್ಟೆ ಕೆಡುವಂತೆ ಎಮ್ಮೆಗೂ ಹೊಟ್ಟೆ ಕೆಡುತ್ತಿತ್ತು. ಹೊಟ್ಟೆ ಕೆಟ್ಟರೆ ಆ ಮಂತ್ರವಾದಿಯೇ ವೈದ್ಯ! ಅವನೇ ಏನೋ ಒಂದು ಹಸಿರು ಬಣ್ಣದ ಔಷಧಿ ಮಾಡಿ, ಮೂಗುದಾರ ಹಿಡಿದುಕೊಂಡು ಒಂದು ಇಡೀ ದೊಡ್ಡ ಪೌಂಡ್ ಬಾಟಲಿಯಲ್ಲಿ ಎಮ್ಮೆಗೆ ಔಷಧಿ ಕುಡಿಸುತ್ತಿದ್ದ! ಆ ಔಷಧಿ ಕುಡಿದು ಒಂದು ಗಂಟೆಯ ಒಳಗೇ ಮಲಗಿದ್ದ ಎಮ್ಮೆ ಚಂಗನೆ ನೆಗೆದು ಎದ್ದು ನಿಲ್ಲುತ್ತಿತ್ತು!

ಸ್ವಲ್ಪ ವರ್ಷಗಳ ನಂತರ ಸರ್ಕಾರಿ ಪಶುವೈದ್ಯ ಆಸ್ಪತ್ರೆಗೆ ವೈದ್ಯರೊಬ್ಬರು ಬಂದರು. ಅವರೇನು ಓದಿದ್ದರೋ ನನಗೆ ಆಗ ಗೊತ್ತಿರಲಿಲ್ಲ. ಆದರೆ ಎಲ್ಲರೂ ಅವರನ್ನು "ದನದ ಡಾಕ್ಟರ್" ಎಂದೇ ಕರೆಯುತ್ತಿದ್ದರು! ಅವರ ಕೈಲಿ ಔಷಧಿ ತರುತ್ತಿತ್ತು. ಎಮ್ಮೆ ಮಾತ್ರೆ ನೋಡಿದ್ದೀರಾ? ನಮಗೆ ಜ್ವರ ಬಂದಾಗ ಕೊಡುತ್ತಿದ್ದ ಮಾತ್ರೆ ಒಂದು ಐವತ್ತು ಹಾಕಿದರೆ, ಬಹುಶಃ ಒಂದು ಎಮ್ಮೆ ಮಾತ್ರೆ ಆಗುತ್ತೆ!. ಅಷ್ಟು ದಪ್ಪ! ಎಮ್ಮೆಗೆ ಇಂಜಕ್ಷನ್ ಕೊಡುವುದು ನೋಡಿದ್ದೀರಾ? ಮೂಗುದಾರ ಹಿಡಿದುಕೊಂಡು ಒಬ್ಬರು ನಿಲ್ಲಬೇಕು. ಆಮೇಲೆ ಬರೀ ಸೂಜಿ ತೆಗೆದು ಕೊಂಡು 'ಪಟ್' ಎಂದು ಕುತ್ತಿಗೆ ಹತ್ತಿರ ಹೊಡೆಯುತ್ತಿದ್ದರು. ಒಂದೆರಡು ಸಾರಿ ಹೊಡೆದ ಮೇಲೆ ಆ ಸೂಜಿ ಒಳಗೆ ಹೋಗುತ್ತಿತ್ತು. ನಂತರ ಅದಕ್ಕೆ ಸಿರಿಂಜ್ ಹಾಕಿ ಇಂಜಕ್ಷನ್ ಕೊಡುತ್ತಿದ್ದರು. ನಮಗೆಲ್ಲಾ ಜ್ವರ ಬಂದಾಗ ಕೊಡುತ್ತಿದ್ದ ಪೆನ್ಸಿಲಿನ್ ಇಂಜಕ್ಷನ್ ಐದು ಎಂ.ಎಲ್, ಆದರೆ ಎಮ್ಮೆಗೆ ಕೊಡುವ ಇಂಜಕ್ಷನ್ ಸುಮಾರು ಒಂದು ನೂರು ಎಂ.ಎಲ್. ಆದರೂ ಇರುತ್ತಿತ್ತು! ಒಂದು ಸಾರಿ ಅದೇನೋ ಎಲ್ಲಾ ಜಾನುವಾರುಗಳಿಗೆ "ಚಪ್ಪಟೆ" ರೋಗವಂತೆ, ಬಂದಿತ್ತು. ಅದೊಂದು ಸಾಂಕ್ರಮಿಕ ರೋಗ. ಇಡೀ ತಾಲೂಕಿನ ಸಾವಿರಾರು ಜಾನುವಾರುಗಳಿಗೆ ಈ ಒಬ್ಬರೇ "ದನದ ಡಾಕ್ಟರ್", ಹಳ್ಳಿ ಹಳ್ಳಿಗಳಿಗೆ ಹೋಗಿ ಲಸಿಕೆ ಹಾಕಿ ಎಲ್ಲಾ ಜಾನುವಾರುಗಳನ್ನೂ ಉಳಿಸಿದ್ದರು.

ಎಮ್ಮೆ ಕಾಯಿಸುವವನು ಬರದೇ ಇದ್ದಾಗ ಅದನ್ನು ಪಕ್ಕದ ಖಾಲಿ ಜಾಗದಲ್ಲಿ ಇದ್ದ ಮರಕ್ಕೆ ಕಟ್ಟಿಹಾಕಿ ಮೈಮೇಲೆ ಬಿಸಿಲು ಬೀಳಿಸುವ ಪ್ರಯತ್ನ ಆಗುತ್ತಿತ್ತು. ಮಲೆನಾಡಿನ ಮಳೆಗಾಲದಲ್ಲಿ ಅವು ಮನೆಗಳಲ್ಲೇ ಬಂದಿ. ಕಪ್ಪು ಬಣ್ಣದ ಎಮ್ಮೆ ಆಷಾಢ ಮಾಸ ಮುಗಿಯುವ ಹೊತ್ತಿಗೆ ಕೆಂಪಗೆ ಆಗಿರುತ್ತಿತ್ತು. ಗಣಪತಿ ಹಬ್ಬದ ಹೊತ್ತಿಗೆ ಮನೆಗೆ

ಬರುತ್ತಿದ್ದ 'ಎಮ್ಮೆ ಭಟ್ಟರು' ಕೊಟ್ಟಿಗೆಗೆ ಹೋಗಿ ಎಮ್ಮೆ ನೋಡಿಕೊಂಡು ಬಂದು, "ಅಮ್ಮ, ನಿಮ್ಮ ಮನೆ ಎಮ್ಮೆ ಅಮೇರಿಕಾ ಎಮ್ಮೆ ಆಗಿದೆ" ಎಂದು ನಮ್ಮಮ್ಮನಿಗೆ ತಮಾಷೆ ಮಾಡುತ್ತಿದ್ದರು!

ಯಾವತ್ತೂ ಕೂಗದ ಎಮ್ಮೆ ದಸರಾನೋ ಅಥವಾ ದೀಪಾವಳಿಯ ಹೊತ್ತಿಗೋ ಬೆಳಿಗ್ಗೆ ಮುಂಚೆ "ಆssಯ್" ಎಂದು ಜೋರಾಗಿ ಕೂಗುತ್ತಿತ್ತು. ಎರಡನೆಯ ದಿನವೂ ಹಾಗೆ ಕೂಗಿದರೆ ಆಳು ಬಂದು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ. ಅಲ್ಲೊಂದು ಇಂಜಕ್ಷನ್ ಹಾಕಿಸಿಕೊಂಡು ಬಂದರೆ ಅವು ಮತ್ತೆ ಕೂಗುತ್ತಿರಲಿಲ್ಲ! ನಂತರ ಕ್ರಮೇಣ ಹಾಲು ಕಡಿಮೆಯಾಗಿ ನಿಂತುಹೋಗುತ್ತಿತ್ತು. ಆದರೂ ಅಮ್ಮನ ಉಪಚಾರ ಅದಕ್ಕೆ ಜೋರಾಗಿಯೇ ನಡೆಯುತ್ತಿತ್ತು. ಇನ್ನೆರಡು ತಿಂಗಳಲ್ಲಿ ಕರು ಹಾಕುತ್ತದೆ ಎಂದು ಹೇಳುತ್ತಿದ್ದರು. ಮನೆಗೆ ಹಾಲು ಬೇಕಲ್ಲ! ಆಗ 'ಎಮ್ಮೆ ಭಟ್ಟರು' ಹೊಸ ಎಮ್ಮೆ ಮತ್ತು ಕರು ತಂದು ಕಟ್ಟಿ ಹಳೆಯದನ್ನು ಕರೆದುಕೊಂಡು ಹೋಗುತ್ತಿದ್ದರು.

ಎಷ್ಟು ಹಾಲು ಕೊಡಲಿ, ಏನೇ ಮಾಡಲಿ, ಎಮ್ಮೆಗೆ ಮಾತ್ರ ಪೂಜೆಯ ಭಾಗ್ಯವಿಲ್ಲ. ನಮ್ಮಮ್ಮ ಪೂಜೆ ಮಾಡಲು ಒಂದು ಹಸು ಮತ್ತು ಕರು ಕೂಡ ಇಟ್ಟುಕೊಂಡಿದ್ದರು. ಇದು ಊರಿನ ಗಿಡ್ಡ ಜಾತಿ ಹಸು ಮತ್ತು ಕರು. ಒಂದೆರಡು ಸಣ್ಣ ಲೋಟದಷ್ಟು ಹಾಲು ಕೊಟ್ಟರೆ ಹೆಚ್ಚು. ಆ ಹಾಲು ದೇವರ ಪೂಜೆಗೆ ಅಷ್ಟೇ. ಜಾಸ್ತಿ ಹಾಲು ಕೊಡುವ ಎಮ್ಮೆ, ಬರೀ ಎಮ್ಮೆ! ಈ ಹಸುವಿಗೆ ಒಬ್ಬೊಬ್ಬರು ಒಂದೊಂದು ಹೆಸರಿಟ್ಟು ಕರೆಯುತ್ತಿದ್ದರು. ಅದರಲ್ಲೂ ಗಂಗಾ, ತುಂಗ, ಭದ್ರ ಎಂದು ಒಳ್ಳೆಯ ನದಿಯ ಹೆಸರುಗಳೇ. ಹಸುವಿನ ಕರುವಿನ ಹತ್ತಿರ ಹೋಗಿ, ಕುತ್ತಿಗೆ ಸವರಿ ಮುದ್ದು ಮಾಡಿ ಬರುವವರು ಪಕ್ಕದಲ್ಲೇ ಇರುತ್ತಿದ್ದ ಎಮ್ಮೆ ಕರುವನ್ನು ಮುದ್ದುಮಾಡದೇ ತಾರತಮ್ಯ ಮಾಡುತ್ತಿದ್ದರು. ಆದರೆ ಎಮ್ಮೆ ಮಾತ್ರ ಇದ್ಯಾವುದನ್ನೂ ತಲೆಗೆ ಹಾಕಿಕೊಳ್ಳದೇ ತನ್ನ ಪಾಡಿಗೆ ತಾನು ಮಧ್ಯ ಮಧ್ಯ ಬಾಯಾಡಿಸಿಕೊಂಡು ಮಲಗಿರುತ್ತಿತ್ತು.

ನಿಜವಾಗಲೂ ಸ್ಥಿತಪ್ರಜ್ಞ ಎಂದರೆ ಎಮ್ಮೆಯೇ! ನಾನು ಪಾಠ ಓದದೇ ಯಾವಾಗಲೂ ಆಟ ಆಡಿಕೊಳ್ಳುತ್ತಾ ಇದ್ದರೆ "ನಿಂಗೆ ಯಾಕೆ ಸ್ಕೂಲು, ಹೋಗಿ ದನ ಕಾಯಿ" ಎಂದು ಅಮ್ಮನ ಕೈಯಲ್ಲಿ ಬೈಸಿಕೊಳ್ಳುತ್ತಿದ್ದೆ! ಎಷ್ಟು ಸಾರಿ ಈ ತರಹ ಬೈಸಿಕೊಂಡೆ ಎಂದು ಲೆಕ್ಕವೇ ಇಲ್ಲ ಬಿಡಿ! ಎಷ್ಟು ಹೇಳಿದರೂ ಕಿವಿ ಮೇಲೆ ಹಾಕಿಕೊಳ್ಳದಿದ್ದರೆ "ಎಷ್ಟು ಹೇಳಿದರೇನು, ಎಮ್ಮೆ ಚರ್ಮದವನು, ಒಂದು ಮಾತೂ ಕಿವಿ ಮೇಲೆ ಹಾಕಿಕೊಳ್ಳಲ್ಲ" ಎಂದು ಬೈದು ಸುಮ್ಮನಾಗುತ್ತಿದ್ದರು.

ಹಸು ಮಾತ್ರ ಹಾಲು ಕೊಡದೇ ಇದ್ದರೂ ಮನೆಯಲ್ಲೇ ಇರುತ್ತಿತ್ತು. ನಂತರ ಅದು ಮನೆಯಲ್ಲೇ ಕರು ಹಾಕಿದಾಗ ಸಂಭ್ರಮ ನೋಡಬೇಕು. ಅಮ್ಮ ಅದರ ಪಾದವನ್ನು ಒಳ್ಳೆಯ ಚಾಕುವಿನಿಂದ ಕತ್ತರಿಸಿ ಸರಿಪಡಿಸುತ್ತಿದ್ದರು. ನಂತರ ಚಕ್ಕನೆ ಅದು ಎದ್ದು ನಿಲ್ಲುತ್ತಿತ್ತು. ಒಂದು ದಿನದ ನಂತರ ನಮಗೆಲ್ಲಾ ಅಕ್ಕಿ ರೊಟ್ಟಿ ಜೊತೆ ಗಿಣ್ಣದ ಸಮಾರಾಧನೆ...!

ಕೊಟ್ಟಿಗೆ ಇದ್ದ ಮೇಲೆ ಸೆಗಣಿ ತೊಟ್ಟಿ ಕೂಡ ಇರಲೇಬೇಕಲ್ಲ! ಇನ್ನೊಂದು ಮೂಲೆಯಲ್ಲಿ ಸುಮಾರು ಎರಡಾಳು ಆಳದ ಗುಂಡಿ. ಇನ್ನೇನೂ ಅಲ್ಲ, ಉದ್ದನೆಯ ಚಪ್ಪಡಿಕಲ್ಲಿನಿಂದ ಮಾಡಿದ್ದ ಗುಂಡಿ. ಇದರಲ್ಲಿ ಸೆಗಣಿಯ ಜೊತೆಗೆ ಊಟ, ತಿಂಡಿಗೆ ಹಾಕಿಕೊಳ್ಳುತ್ತಿದ್ದ ಬಾಳೆಎಲೆ, ಅಂಗಳದಲ್ಲಿ ಒಟ್ಟುಮಾಡಿದ ದರಗು (ಒಣಗಿದ ಎಲೆಗಳು) ಎಲ್ಲಾ ಹಾಕುತ್ತಿತ್ತು. ಸೆಗಣಿಯಿದ್ದ ಮೇಲೆ ಬೆರಣಿ ಮಾಡದೇ ಇರಲು ಸಾಧ್ಯವೇ? ಚಪ್ಪಡಿಕಲ್ಲಿನ ಗೋಡೆಗೆ ಉಳಿದವರೆಲ್ಲಾ ವೃತ್ತಾಕಾರದ ಬೆರಣಿ ತಟ್ಟಿದರೆ, ನಾನು ಚೌಕಾಕಾರದ ಬೆರಣಿ ಮಾಡುತ್ತಿದ್ದೆ. ಆದರೆ ಅದೆಲ್ಲಾ ಎರಡು ದಿನದ ಆಟ ಅಷ್ಟೇ. ಆಗ ಮಾಡುವ ರಂಪ ತೆಗೆಯುವುದಕ್ಕೆ ಮತ್ತೆ ಕೆಲಸದ ಲಕ್ಷ್ಮಿಯೇ ಬರಬೇಕು. "ಇದೇನ್ ಕೆಲಸ ಕೆಲಸ ರಘಯ್ಯ, ಕೆಳಗಡೆ ಸೆಗಣಿ ಗದ್ದೆನೇ ಮಾಡಿದ್ದೀರಿ" ಎನ್ನುತ್ತಿದ್ದಳು. ಅವಳು ಬೆರಣಿ ಮಾಡಲು ಒಂದು ಸಾರಿ ಚಪ್ಪಡಿಕಲ್ಲಿನ ಗೋಡೆಗೆ ತಟ್ಟಿದರೆ ನಿಲ್ಲುತ್ತಿದ್ದ ಸೆಗಣಿ, ನಾನು ಒಂದು ಹತ್ತು ಸಲ ತಟ್ಟಿದರೆ ಒಂದು ಸಾರಿ ಮಾತ್ರ ನಿಲ್ಲುತ್ತಿತ್ತು. ಅದು ನನ್ನ ತಪ್ಪೇ?

ಆಮೇಲೆ ವರ್ಷಕ್ಕೊಮ್ಮೆ ಹಳ್ಳಿಯಿಂದ ಬರುವ ಎತ್ತಿನಗಾಡಿ ಗೊಬ್ಬರವನ್ನು ತುಂಬಿಸಿಕೊಂಡು ಹೋಗುತ್ತಿತ್ತು. ಆದರೆ ಈ ಗೊಬ್ಬರದ ಗುಂಡಿಯಲ್ಲಿ ನೊಣಗಳು ಇರುತ್ತಿರಲಿಲ್ಲ. ಅದು ಹೇಗೆ ಸಾಧ್ಯವಾಯಿತು? ನನಗಿನ್ನೂ ಅರ್ಥವಾಗಿಲ್ಲ.

ಈಗ ಅಮ್ಮನೂ ಇಲ್ಲ, ಕೊಟ್ಟಿಗೆಯೂ ಇಲ್ಲ! ಆಗ ತಾನೇ ಕರೆದುಕೊಂಡು ಬಂದ ಬಿಸಿ ನೊರೆಹಾಲಿನಿಂದ ಮಾಡಿದ ಕಾಫಿಯೂ ಇಲ್ಲ! ಈಗ ಊರಲ್ಲೇ ಇಲ್ಲದ ಕೊಟ್ಟಿಗೆ ಬೆಂಗಳೂರಿನ ಆಕಾಶದಲ್ಲಿ (ಎರಡನೆಯ ಮಹಡಿಯಲ್ಲಿ) ಇರುವ ಒಂದು ಗೂಡಿನಲ್ಲಿ (ಫ್ಲಾಟ್ನಲ್ಲಿ) ಎಲ್ಲಿಂದ ಬರಬೇಕು?

ಆದರೂ ಆ ನೊರೆ ಹಾಲಿನ ಕಾಫೀಯ ರುಚಿ ಮನದಲ್ಲಿ ಸ್ಥಿರವಾಗಿ ನಿಂತಿದೆ.

*****

ಲಲಿತ ಪ್ರಬಂಧ

ಅರಳಿಹುದು ಕಥಾಪುಷ್ಪ

-ಶೀಲಾ ಅರಕಲಗೂಡು

ಕತೆ ಬರೆಯೋದು ಅಂದ್ರೇನು ಹುಡುಗಾಟ ಕೆಟ್ಹೋಯ್ತೆ? ಅಂದ್ಕೊಂಡಾಕ್ಷಣ ಬರೆಯೋಕಾಗುತ್ಯೇ? ನನ್ನ ನೋಡ್ದೋರೆಲ್ಲಾ,, 'ಕತೆ ಬರೆದಾಯ್ತೇ? ಎಷ್ಟು ಕತೆ ಬರೆದಿರಿ?' ಅಂತ ಕೇಳೋದೇ? ಇನ್ನು ಕೆಲವರಂತೂ, 'ಹತ್ತೋ ಹನ್ನೆರಡೋ ಕತೆಗಳನ್ನು ಬರೆದು ಒಟ್ಟಿಗೆ ಪುಸ್ತಕ ರೂಪದಲ್ಲಿ ತಂದುಬಿಡಿ' ಅಂತ ಬಿಟ್ಟಿ ಸೂಚನೆ ಬೇರೆ ಕೊಡ್ತಿದಾರೆ. ಹಾಗೆ ಕೇಳುವವರದೇನೂ ತಪ್ಪಿಲ್ಲ ಬಿಡಿ. ನಾನೇ ಅಲ್ವೇ? ಹುಟ್ಟದೇ ಇರೋ ಕತೆ ಬಗ್ಗೆ ಒಂದೇ ಸಮನೆ ಪುಂಗಿ ಊದ್ತಾ ಇರೋದು? ಬಂಡ್ವಾಳವೇ ಇಲ್ಲದೆ ಬಡಾಯಿ ಕೊಚ್ತಿದೀನಿ. ಅದೇನೋ ಅಂತಾರಲ್ಲ, 'ಕೂಸು ಹುಟ್ಟೋಕೆ ಮುಂಚೆ ಕುಲಾವಿ ಹೊಲೆದರು' ಅಂತ, ಹಾಗೆ.

ನನ್ನ ಕತೆ ಎಲ್ಲಿಗೆ ಬಂತು ಅಂತ ಈಗ ಹೇಳ್ತೀನಿ ಕೇಳಿ. ಕಳೆದ ಬಾರಿ ನೀವೆಲ್ಲ ಸಿಕ್ಕಾಗ ಕತಾಕೃಷಿ ಬಗ್ಗೆ ನಾನು ಮಾತನಾಡಿದ್ದು ನಿಮಗೆ ನೆನಪಿದೆಯಲ್ವೇ? ನಿಮಗೆ ತಿಳಿಸಿದ ಹಾಗೆ ಒಂದೊಳ್ಳೆಯ ಕತೆಯ ಬೀಜವನ್ನು ನನ್ನೆದೆಯ ಚಿಂತನೆ ಎಂಬ ತೋಟದಲ್ಲಿ ಬಿತ್ತಿದ್ದೆ. ದಿನನಿತ್ಯ ಅದರ ಆರೈಕೆಯಲ್ಲೇ ತೊಡಗಿದ್ದೆ. ಬಹುಶಃ ನೀವೆಲ್ಲ ತುಂಬಾ ಒಳ್ಳೆಯ ಮನಸ್ಸಿನಿಂದ ಹಾರೈಸಿದ್ರಿ ಅನ್ಸುತ್ತೆ, ಅದಕ್ಕೇ ಏನೋ, ಆರೆಂಟು ದಿನಗಳ ನಂತರ ಸಣ್ಣಗೆ ಮೊಳಕೆಯೊಡೆಯಿತು. 'ನಾನು ಜೀವಂತವಾಗಿದ್ದೇನೆ, ಬೆಳೆಯಲಾಸಕ್ತಿಯಿದೆ' ಎಂಬಂತೆ ತನ್ನ ಮೂತಿಯನ್ನು ಮೆಲ್ಲಗೆ ಭೂಮಿಯಾಚೆ ಹೊರಕ್ಕೆ ತಂದಿತು. ತನ್ನ ಸಣ್ಣ ಕಣ್ಣುಗಳನ್ನು ಪಿಳಕಿಸುತ್ತಾ ಯಾರನ್ನೋ ನೋಡಲು ತವಕಿಸುವ ಪ್ರಯತ್ನ ಮಾಡುತ್ತಿತ್ತು. ನಾನಂತೂ ಬೀಜ ನೆಟ್ಟಿದಾಗಿನಿಂದ ಪ್ರತಿದಿನ ಬೆಳಿಗ್ಗೆ ಬೀಜ ನೆಟ್ಟ ಭಾಗದ ಮುಂದೆ ಕುಳಿತು ಅದರೊಂದಿಗೆ ಪ್ರೀತಿಯಿಂದ ಮಾತನಾಡುತ್ತಿದ್ದೆ, ಲಲ್ಲೆಗರೆಯುತ್ತಿದ್ದೆ. ಒಬ್ಬ ಗರ್ಭಿಣಿ ಹೆಣ್ಣು ಮಗಳು ತನ್ನ ಭ್ರೂಣದೊಂದಿಗೆ ಮಾಡುವ ಸಂಭಾಷಣೆಯಂತಿರುತ್ತಿತ್ತು ನನ್ನ ಮಾತು. ಹಾಡು ಹೇಳಿ ಸಂಭ್ರಮಿಸುತ್ತಿದ್ದೆ.

ಬಾ ಕಂದ ಬಾ
ನೀನಿಳೆಗೆ ಬಾ
ಕತೆಗಾರ್ತಿಯೆಂದೆನಗೆ
ಹೆಸರಿಡಲು ಬಾ ಬಾ

ನಾ ನಿನ್ನ ಮೃದುವಾಗಿ
ಮುಟ್ಟುವೆನು ಬಾ
ಘಾಸಿಗೊಳಿಸದೆ ನಿನ್ನ
ಮುದ್ದಿಸುವೆ ಬಾ ಬಾ
ನಿನಗಾಗಿ ಕಾದಿರುವೆ

ಲೋಕವೂ ಕಾದಿಹುದು
ಹೆಚ್ಚು ಕಾಯಿಸದೆ ನೀ
ಬೇಗೆದ್ದು ಬಾ ಬಾ

ನನ್ನಾತ್ಮ ನಿನ್ನೊಳಗೆ
ನಿನ್ನಾತ್ಮ ನನ್ನೊಳಗೆ
ಒಂದಾಗಿ ಬೆಳಕಂತೆ
ಸ್ಫುರಿಸೋಣ ಬಾ ಬಾ

ಹೀಗೆ, ನನಗೆ ತೋಚಿದಂತೆ ಹಾಡು ರಚಿಸಿ, ಬೀಜಕ್ಕೆ ಮಾತ್ರ ಕೇಳುವಂತೆ ಕೆಳದನಿಯಲ್ಲಿ ಪ್ರತಿನಿತ್ಯ ಹಾಡುತ್ತಿದ್ದೆ. ನನ್ನ ಪ್ರೀತಿಯ ಸ್ವಾಗತಕ್ಕೋ ಅಥವಾ ನನ್ನ ಕರ್ಕಶ ಧ್ವನಿಯಿಂದ ತಪ್ಪಿಸಿಕೊಳ್ಳಲಿಕ್ಕೋ ಬೀಜ ಮೊಳಕೆಯೊಡೆದು ಬೇಗಬೇಗನೆ ಬೆಳೆಯತೊಡಗಿತು. ಕೆಲದಿನಗಳಲ್ಲಿ ಹಸಿರು ಬಣ್ಣದ ಚಿಗುರೆಲೆಗಳೂ ಮೂಡಿದವು, ಕತೆಯ ಪಾತ್ರಗಳಂತೆ. ನಾನು ನನ್ನ ಅನುಭವಗಳ ಆಧಾರದ ಮೇಲೆ ಆಲೋಚನೆ-ಚಿಂತನೆ ಮಾಡಿ ಪಾತ್ರಗಳನ್ನು ಸೃಷ್ಟಿಸುವುದರ ಜೊತೆಗೆ ಅವುಗಳ ಪೋಷಣೆಯನ್ನೂ ಮಾಡತೊಡಗಿದೆ.

ಈಗ ನನಗೆ ಪ್ರತಿನಿತ್ಯ ನನ್ನ ಕತೆಯದೇ ಧ್ಯಾನ. ಕೆಲವರ ಕತೆಗಳು ಅದೆಷ್ಟು ಬೇಗ ಬೆಳೆದುಬಿಡುತ್ತವೆ, ನನ್ನದೇಕಿಲ್ಲ? ಎಂಬ ಪ್ರಶ್ನೆ ನನ್ನ ಮನದಲ್ಲಿ ಮೂಡಿತು. ಈ ದಿನಗಳಲ್ಲಿ ಅನೇಕ ಕತೆಗಾರರ ಬಗ್ಗೆ ತಿಳಿಯುವ ಪ್ರಯತ್ನ ಮಾಡಿದೆ. ಆಗ ಗೊತ್ತಾಗಿದ್ದು ಏನಪ್ಪಾ ಅಂದ್ರೆ, ಹೆಸರಾಂತ ಕತೆಗಾರರೂ ಕೆಲವೊಮ್ಮೆ ಕತೆ ಬರೆದು ಮುಗಿಸಲು ಸಿಕ್ಕಾಪಟ್ಟೆ ಸಮಯ ತೆಗೆದುಕೊಂಡಿದ್ದಾರೆ ಎನ್ನುವುದು. ಅದೇನೋ, ಕೆಲ ಕತೆಗಳು ಹಾಗೇ ಅಂತೆ. ಒಂಥರಾ ಗಜಗರ್ಭದಂತೆ. ಕಾಯಿಸಿ ಕಾಯಿಸಿ ನಂತರ ಹೊರಗೆ ಬರುತ್ತವಂತೆ. ಬಹುಶಃ ನನ್ನ ಕತೆಯ ರೀತಿಯೂ ಹಾಗೆಯೇ ಏನೋ ಅಂದುಕೊಂಡೆ. ಪರವಾಗಿಲ್ಲ, ನನಗೆ ತಾಳ್ಮೆ ಜಾಸ್ತಿ. ಹಾಗಾಗಿ ಬೇಸರಿಸದೆ ಕಾಯತೊಡಗಿದೆ. ನನ್ನ ಪ್ರೀತಿ, ಕಾಳಜಿ, ಹಾಗೂ ಅವಿರತ ಪೋಷಣೆ ಮುಂದುವರೆಸಿದೆ.

ಯಾವುದೇ ಒಳ್ಳೆಯ ಕೆಲಸ ಅಡೆತಡೆಗಳಿಲ್ಲದೆ ಮುಂದೆ ಸಾಗದು ಅಂತಾರೆ. ನನ್ನ ಕತೆಯ ಬೆಳವಣಿಗೆಯಲ್ಲಿಯೂ ಹಾಗೆಯೇ ಆಯ್ತು. ಕತೆಯ ಗಿಡದಲ್ಲಿ ಮೊಗ್ಗು ಮೂಡುವ ಸಮಯದಲ್ಲಿ ಹುಳುಗಳ ಕಾಟ ಶುರುವಾಯ್ತು. ಎಲೆಗಳನ್ನು ತಿಂದು ಹಾಳುಮಾಡತೊಡಗಿದವು. ಕತೆಯ ಪಾತ್ರಗಳಲ್ಲಿ ಕೆಲವು ಕಾಯಿಲೆಯಿಂದ ಹಾಸಿಗೆ ಹಿಡಿದವು. ನನಗೆ ಸಂಕಟವಾಯ್ತು. ನೋಡಿಕೊಂಡಿರಲಾಗದೆ, ವೈದ್ಯಳಲ್ಲದಿದ್ದರೂ, ನನಗೆ ತೋಚಿದ ಔಷಧಿ-ಉಪಚಾರ ಮಾಡಿದೆ. ಅದೃಷ್ಟವಶಾತ್ ಎಲ್ಲ ಪಾತ್ರಗಳೂ ಬದುಕಿಕೊಂಡವು.

ನಿನ್ನೆ ರಾತ್ರಿ ಮಲಗುವ ಮುಂಚೆ ಎಂದಿನಂತೆ ಒಂದಷ್ಟು ಓದಲು ಕುಳಿತೆ. ಸಣ್ಣ ಕತೆಗಳ ಪುಸ್ತಕವೊಂದು ಮುಂದಿತ್ತು. ಮೂರು ಕತೆಗಳನ್ನೋದಿ ಮಲಗಿದೆ. 'ದೇವರೇ, ನನ್ನ ಕತೆಯೂ ಮೂಡಿಬರುವ ಹಾಗೆ ನನ್ನನ್ನು ಕರುಣಿಸಪ್ಪಾ' ಎಂದು ಪ್ರಾರ್ಥಿಸಿದೆ. ನಿಸ್ಪೃಹ ಮನಸ್ಸಿನಿಂದ ಕೇಳಿಕೊಂಡರೆ ದೇವರು ಕರುಣಿಸಲಾರನೇ? ಅಷ್ಟಕ್ಕೂ ಅವನ ಬೆಂಬಲದಲ್ಲಿ ಸಂಪೂರ್ಣ ನಂಬಿಕೆಯಿರುವಾಗ ಚಿಂತೆ ಏಕೆ?'ಎಂದು ನಿಶ್ಚಿಂತಳಾಗಿ ನೆಮ್ಮದಿಯಿಂದ ನಿದ್ದೆ ಹೋದೆ.

ಇಂದು ಬೆಳಿಗ್ಗೆ ಎದ್ದು ನನ್ನ ಕತೆಯ ಗಿಡದ ಬಳಿ ಬಂದೆ. ಅಚ್ಚರಿ ಕಾದಿತ್ತು. ಚೆಂದದ ಕತೆಯ ಪುಷ್ಪವೊಂದು ಅತ್ಯದ್ಭುತವಾಗಿ ಅರಳಿ ನಿಂತಿತ್ತು. ನನ್ನ ಹೃದಯ ಸಂತೋಷದಿಂದ ಒಡೆದುಹೋಗುವಂತಾಯ್ತು. ಎಂದೋ ಹಾಕಿದ ಕತಾಬೀಜವೊಂದು ಹೀಗೆ ಅರಳಿ ಸೌಂದರ್ಯವೇ ತಾನೆಂಬಂತೆ ನನ್ನನ್ನು ನೋಡಿ ಮುಗುಳ್ನಕ್ಕಿತ್ತು. ಆ ದೇವರ ಕರುಣೆಗೆ ಅಲ್ಲೇ ವಂದಿಸಿದೆ. ಕತಾಪುಷ್ಪವನ್ನು ಗಿಡದಿಂದ ಮೃದುವಾಗಿ ಬಿಡಿಸಿ ಮೊದಲು ದೇವರಿಗೆ ಅರ್ಪಿಸಿ ನಂತರ ಓದುಗ ಬಂಧುಗಳಿಗೆ ತೋರಿಸಲು ನಿರ್ಧರಿಸಿದೆ.

*****

ಬಾ ಗೆಳತಿ ಬಾ ಕುಳಿತು ಹರಟೋಣ

– ರಾಧಿಕಾ ವಿ ಗುಜ್ಜರ್

ಪತಿಯ ಆಫೀಸು,
ಹಿರಿಯರ ಆರೋಗ್ಯ,
ಮಕ್ಕಳ ಓದು, ಆರೈಕೆ,
ಎಲ್ಲವನ್ನು ಸ್ವಲ್ಪ ಹೊತ್ತು ಮರೆಯೋಣ

ಹಲವು ಮುಗಿಸುವಿಕೆಗಳು,
ನಿತ್ಯದ ಏಣಿಯಾಟಗಳು,
ಅದೇ ತಪ್ಪದ ದಿನಚರಿ,
ಎಲ್ಲವ ಸ್ವಲ್ಪ ಹಿಂದೆ ಸರಿಸೋಣ

ಅಚಾನಕ್ ಬಂದಿದೆ ಕಸುವು
ಕಿತಾಪತಿ ಮಾಡುವ ಹುಕಿಯು
ಮಧ್ಯವಯಸ್ಸಿಗೆ ನಿಂತಿದೆ ಬದುಕು
ನೆತ್ತಿಯಿಂದ ಹರಡಿವೆ ಬಿಳಿಕೂದಲು
ಒರಗುವ ಯೌವ್ವನದ ಬೆನ್ನು ನೇರಮಾಡಿ
ಚಿರಯೌವನದ ಬಾಗಿಲು ಬಡಿಯೋಣ

ಇಡೀ ಇಡೀ ರಾತ್ರಿ ಜಾಗರಣೆ ಮಾಡುವ
ಮಾತು ಮಾತಿಗೂ ಗೊಳ್ಳೆಂದು ನಗುವ
ಕಾಟು-ಚಿತ್ತು ಮಾಡಿದ ತರಲೆಯ ಸವರಿ
ಕಾಡಿದ ಭಯಗಳ ಮರಳಿ ಒರೆಸಿ
ಕೈ ಹಿಡಿದು ಒಮ್ಮೆ ಅತ್ತು ಹಗುರಾಗೋಣ
ಕೊಟ್ಟವರ ಕರವಸ್ತ್ರಕೆ
ಮೊದಲು ಮೂಗೊರೆಸೋಣ

ಗೆಳೆತನವೇ ನಂನಮ್ಮ ಸಂಚಯಗಳು
ಸದಾ ಉಮೇದು ನೀಡುತ್ತಿವೆ ಮನಕೆ
ಲವಲವಿಕೆಯು ಒಗ್ಗಟ್ಟಲ್ಲಿ ಬಂಧಿ
ಬೀಗದ ಕೈಗಳು ಒಬ್ಬರಿಗೊಬ್ಬರಾಗೋಣ

ನಾಲ್ಕಾರು ಗೆಳತಿಯರಾದರೂ ಅದೇ ಶಕ್ತಿ
ಕಷ್ಟಗಳು ಬಳ ಬರಲು ಹೆದರುವ ರೀತಿ
ಕಣ್ಣೀರು ಸೆರಗುಗಳ ಎಣಿಸಿ ಸೋಲಲು
ಗೆರೆಗಳು ಹಣೆಗೇರದಂತೆ ತಡೆಯೋಣ

ನಮ್ಮ ಸಂಸಾರ ನಮಗೆ ಆದ್ಯತೆ
ನಮ್ಮವರಿಗಾಗಿ ಬದುಕಿ ಸಾಯುತ್ತೇವೆ
ಎರಡು ದಿನ ಬಿಡುವು ಮಾಡಿಕೊಂಡು
ನಮಗಾಗಿ ನಾವು ಜೀವಿಸೋಣ

ಜವಾಬ್ದಾರಿಯ ಹೊರೆ ಹಗುರಾಗದೆ
ಮಂಜುಗಟ್ಟಿದೆ ದಣಿದ ಕಾಲು
ಸ್ನೇಹದ ಬಿಸಿಲಿಗೆ ಕೊಂಚ ಒರಗಿ
ಬೆಚ್ಚಗಾಗುತ್ತಾ ಮತ್ತೆ ಚುರುಕಾಗೋಣ

***

೧೨.೦೩.೨೦೨೨ ರಂದು ನಡೆದ

ನೋಡಿಯೋ ಸಾಹಿತ್ಯ ದಾಸೋಹ – ೧೯೯

ಅಧ್ಯಕ್ಷರ ಅನಿಸಿಕೆಗಳು

– ರೇಣುಕಾ ದೇಸಾಯಿ

ಎಲ್ಲರಿಗೂ ನಮಸ್ಕಾರಗಳು. ಎಲ್ಲರಿಂದಲೂ ಪ್ರೋತ್ಸಾಹದ ಮಹಾಪೂರ. ನಾಗರತ್ನ ಚಂದ್ರಶೇಖರ್ ಅವರಿಂದ ಆದರದ ಸ್ವಾಗತ ಮತ್ತು ಪರಿಚಯದಿಂದ ಮನಸ್ಸು ಸಂತೋಷದಿಂದ ತುಂಬಿದೆ.

ಇಂದು ೧೯೯ನೇ ದಾಸೋಹ. ೨೦೦ರ ಗಡಿರೇಖೆಯ ಮುನ್ನಾ ದಾಸೋಹದ ಅಧ್ಯಕ್ಷತೆ ವಹಿಸುವ ಯೋಗ ದೊರೆತದ್ದು ನನ್ನ ಸೌಭಾಗ್ಯ ಅಂದುಕೊಳ್ಳುವೆ. ಸ್ವಾತಂತ್ರೋತ್ಸವದ ಮುನ್ನಾದಿನ ರಾಷ್ಟ್ರಪತಿ ಭಾಷಣ ಹೇಗೆ ಪ್ರಾಮುಖ್ಯವೋ ಹಾಗೆ ಇನ್ನೂರರ ದಾಸೋಹದ ಮುನ್ನಾ ತಿಂಗಳ ದಾಸೋಹ ಎಂದು ಭಾವಿಸುವೆ. ಈ ಅವಕಾಶ ಕೊಟ್ಟ ವೇದಿಕೆಗೆ, ಸಂಚಾಲಕ ಸಮಿತಿಗೆ ವಂದನೆಗಳು. ಅದರಲ್ಲೂ ರವೀಂದ್ರ ಮತ್ತು ಮಹಾಬಲ ಇವರಿಬ್ಬರ ಪ್ರೋತ್ಸಾಹ ದೊಡ್ಡದು.

ಮಹಾಬಲ ಸರ್ ೨೦೨೧ನೇ ನವೆಂಬರ್ ತಿಂಗಳ ದಾಸೋಹದ ಅಧ್ಯಕ್ಷತೆ ವಹಿಸಲು ಸಾಧ್ಯವೇ? ಎಂದು ಕೇಳಿದ್ದರು. ಆಗ ಬೇರೆ ಕಾರ್ಯನಿಮಿತ್ತ ನಾನು ಬೇಡವೆಂದು ಹೇಳಿದ್ದೆ. ಬಹುಶಃ ೧೯೯ರ ಅಧ್ಯಕ್ಷತೆ ನನ್ನ ಹೆಸರಲ್ಲಿತ್ತು ಅನ್ನಿಸುತ್ತದೆ. ದೈವವೋ, ವಿಧಿನಿಯಮವೋ, ವಿಧಿಲಿಖಿತವೋ ಹೇಳಲಾಗದು. ನಮ್ಮ ಜೀವನದಲ್ಲಿ ಪ್ರತಿ ನಿಮಿಷ ಹೇಗೆ ಇರಬೇಕೆಂಬುದನ್ನು ಭಗವಂತ ಮೊದಲೇ ನಿರ್ಧರಿಸಿರುತ್ತಾನೆ. ಅದರಂತೆ ಅವನ ಕೈಯಲ್ಲಿ ಆಡುವ ಗೊಂಬೆಗಳು ನಾವು. ಸೂತ್ರಧಾರಿ ಅವನಿದ್ದಾಗ ಪಾತ್ರಧಾರಿಗಳಾದ ನಮಗೇಕೆ ಭಯ, ಆತಂಕ, ಎನ್ನುವ ಭಾವದಿಂದಲೇ ಪ್ರತಿ ಕೆಲಸವನ್ನೂ ಒಪ್ಪಿಕೊಂಡು ನಿಭಾಯಿಸುವದು ಮೊದಲಿನಿಂದಲೂ ನಾನು ಭಾವಿಸಿಕೊಂಡು ಬಂದ ರೂಢಿ ಅನ್ನಿ, ಇಲ್ಲ ಪದ್ಧತಿ ಅನ್ನಿ. ಅದೇ ಭಾವದಲ್ಲಿ ಈ ಕೆಲಸ ಒಪ್ಪಿ ನಿಭಾಯಿಸುತ್ತಿರುವೆ.

ಬದುಕು ಜಟಕಾ ಬಂಡಿ ವಿಧಿ ಅದರ ಸಾಹೇಬ
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು
ಮದುವೆಗೊ ಮಸಣಕೊ ಬೇಕೆಂದ ಕಡೆಗೋಡು
ಪದಕುಸಿಯೆ ನೆಲವಿಹುದೊ ಮಂಕುತಿಮ್ಮ

ಎಂದು ಸಾರುವ ಕಗ್ಗ ನನಗೆ ಜೀವನದಲ್ಲಿ ಗೀತೆಯ ಬೋಧನೆ ಇದ್ದಂತೆ. ಮೇಲಾಗಿ 'ಸಮನ್ವಯ ಸಮಿತಿ – ಕನ್ನಡವೇ ಸತ್ಯ' ವೇದಿಕೆ ನಾನು ನನ್ನ ನಲವತ್ತು ವರುಷಗಳ ವೃತ್ತಿ ಜೀವನದಲ್ಲಿ ಕಂಡುಕೊಂಡು ಬಂದ ಆಯ್ದ ಹಿರಿಕಿರಿಯರ ಗುಂಪು. ಈ ಗುಂಪು ನನ್ನದು, ಇಲ್ಲಿ ನನಗೆ ಏನೇ ಕೆಲಸ ನಿರ್ವಹಿಸಿದರೂ ನಿರ್ವಂಚನೆಯಿಂದ, ಶುದ್ಧಭಾವದಿಂದ ಸ್ವೀಕರಿಸಿ ನಿಭಾಯಿಸುವದೊಂದೇ ನನ್ನ ಗುರಿ. ಹೀಗಾಗಿ ನೀವು ಅಧ್ಯಕ್ಷತೆ ವಹಿಸುವ ಕಾರ್ಯಕ್ರಮಕ್ಕೆ ಆತಿಥ್ಯ ವಹಿಸುವಿರಾ? ಎಂದು ತುಂಬಾ ವಿನಮ್ರದಿಂದ ಮಹಾಬಲ ಸರ್ ಕೇಳಿದಾಗ, ಯಾಕಾಗಬಾರದು, ಅಧ್ಯಕ್ಷರಿಗೆ ಕೊನೆಯವರೆಗೂ ಕೇಳುವದನ್ನು ಬಿಟ್ಟರೆ ಬೇರೇನೂ ಕೆಲಸವಿರುವದಿಲ್ಲ. ಮೇಲಾಗಿ ಬ್ಯಾಂಕಿನವರ ಗುಣ, ಏಕಕಾಲದಲ್ಲಿ ಎರಡೆರಡು ಕೆಲಸ ಮಾಡಬಲ್ಲೆವು. ಮೊದಲೇ ಎಲ್ಲರ ಪ್ರಸ್ತುತಿ ಓದಿ ನನ್ನ ಅಭಿಪ್ರಾಯ ಬರೆದು ಆಗಿದೆ,

ಈಗ ನಿಮ್ಮಗಳ ಪ್ರಸ್ತುತಿ ನಿಮ್ಮ ಬಾಯಿಂದಲೇ ಕೇಳುತ್ತಾ ಈ ಕೆಲಸ ನಿರ್ವಹಿಸುವೆ ಏನಂತೆ? ಅಂದುಕೊಂಡು ಅದಕ್ಕೆ ಒಪ್ಪಿದೆ. ಒಟ್ಟಿನಲ್ಲಿ ವೇದಿಕೆಯ ಕೆಲಸ, ಆತಿಥ್ಯವೋ, ಅಧ್ಯಕ್ಷತೆಯೋ ಎಲ್ಲಾ ಸಮಾನ. 'ಆಳಾಗಿ ದುಡಿಯುವವ ಅರಸನಾಗಿ ಇರಬಲ್ಲ' ಎನ್ನುವಂತೆ ವೇದಿಕೆಗಾಗಿ, ಸಾಹಿತ್ಯ ಸೇವೆಗಾಗಿ ಈ ಎಲ್ಲ ಕೆಲಸ ಎಂದು ಹೇಳುತ್ತಾ, ಈ ಅವಕಾಶಕ್ಕಾಗಿ ಎಲ್ಲರಿಗೂ ವಂದಿಸುತ್ತಾ ನನ್ನ ಅಧ್ಯಕ್ಷ ನುಡಿಯೆಡಗೆ ನಡೆಯುವೆ.

ಅಂದಹಾಗೆ ಇಂದು ಭಾಗವಹಿಸಿದ ಎಲ್ಲರೂ ವಿದ್ವಾನ್‌ಗಳು. ಅವರ ಪ್ರಸ್ತುತಿ ಇಲ್ಲಿ ನಾನು ವಿಮರ್ಶೆ ಮಾಡಲಾರೆ. ಆದರೆ ನನ್ನ ಅಭಿಪ್ರಾಯವನ್ನಂತೂ ಟಿಪ್ಪಣಿ ಮಾಡಿಟ್ಟುಕೊಂಡಿರುವೆ. ಅದನ್ನು ಒಂದಾದ ಮೇಲೆ ಒಂದರಂತೆ ಮಂಡಿಸುವೆ. ಇಂದಿನ ಇನ್ನೊಂದು ವಿಶೇಷವೆಂದರೆ ಹೆಸರು ಕೊಟ್ಟ ಹದಿನೇಳು ದಾಸೋಹಿಗಳು ತಮ್ಮ ಸರದಿ ಪ್ರಕಾರವೇ ಓದಿದ್ದಾರೆ ಮತ್ತು ಎಂದಿನಂತೆ ವೈವಿಧ್ಯಮಯ ಲೇಖನಗಳು, ಹಾಗೇನೇ ವಿಷಯ ವಸ್ತುವಿನ ಭಂಡಾರ ಎಂದು ಹೇಳಲು ಇಷ್ಟಪಡುತ್ತೇನೆ.

(೧) ಶ್ರೀಮತಿ ಮಾಲತಿ ಶ್ರೀನಿವಾಸನ್ ಬರೆದ ಲಘು ಲೇಖನ **"ಹಲ್ಲಿದ್ದಾಗ ಕಡ್ಲೆ ಇಲ್ಲ, ಕಡ್ಲೆ ಇದ್ದಾಗ ಹಲ್ಲಿಲ್ಲ"** ತುಂಬಾ ಸೊಗಸಾಗಿದೆ. ಲಘು ಮಾತಿನಿಂದ ಪ್ರಾರಂಭವಾದ ಅವರ ಲೇಖನ ಓದುತ್ತಾ ಹೋದಾಗ ನಾಗವೇಣಿ ಮಾಲತಿ... ಮೊದಲು ಸುಂದರ ಮಾಲತಿ ಕಣ್ಣೆದುರು ಬಂದರು, ನಂತರ ಪ್ರಬುದ್ಧ ಮಾಲತಿ ತನ್ನ ಅತ್ತೆಯನ್ನು ಮಕ್ಕಳೊಂದಿಗೆ ಹೋಲಿಸಿ ಒಳ್ಳೆಯ ಮನಸ್ಸಿನ ಸೊಸೆಯಾಗಿ ಕಂಡರೆ, ಮನೆಯಲ್ಲಿ ಅವಶ್ಯಕತೆಗಿಂತ ಹೆಚ್ಚಿರುವ ಸಾಮಾನು ನೋಡಿ ಕೊರಗಿದ ವೃದ್ಧಾಪ್ಯದೆಡೆಗೆ ಜಾರಿದ ಮಾಲತಿ ಕಂಡರು. ತಕ್ಷಣವೇ ಗಾದೆಯನ್ನು ಬದಲಿಸಲು, ಸುಳ್ಳಾಗಿಸಲು ತಯಾರಾಗುವ ತುಂಟ ಮಾಲತಿ ಕಂಡು ಮುಕ್ತಾಯವಾಗುವ ಲೇಖನ ಆರು ನಿಮಿಷದಲ್ಲಿ ಆಧ್ಯಾತ್ಮ ಭೋದಿಸಿದೆ. ಸರಳ ಸುಂದರ ಲೇಖನ. ಅಭಿನಂದನೆಗಳು ಮಾಲತಿಯವರಿಗೆ.

(೨) ನಂತರದ ಪ್ರಸ್ತುತಿ ಶ್ರೀಮತಿ ಗಿರಿಜಾ ರಾಜ್ ಅವರದು. **'ಹೊಂದಾಣಿಕೆ ಎಂಬ ಮರೀಚಿಕೆ'** ಎಂಬ ಸಣ್ಣ ಕಥೆಯನ್ನು ಪತ್ರಗಳಿಂದಲೇ ಹೆಣೆದು ಅದ್ಭುತವಾಗಿ ರಚಿಸಿದ್ದಾರೆ. ಅವರೊಬ್ಬ ನುರಿತ ಬರಹಗಾರ್ತಿ, ಈ ಪ್ರಯೋಗದಲ್ಲಿ ಅವರ tag line "ಪತ್ರ ಹೃದಯಕ್ಕೆ ಹತ್ರ" ಎನ್ನುವದಾಗಿದೆ. ಈ ಕಥೆಯಲ್ಲಿ ಎರಡು ಹೆಣ್ಣುಗಳ ದುಃಖದ ಜೀವನದ ದರ್ಶನವಿದೆ. ಓದಿ ಹೃದಯ ಭಾರವಾಯ್ತು. ಅಷ್ಟರಮಟ್ಟಿಗೆ ಗಿರಿಜಾ ರಾಜ್ ಅವರ ಬರವಣಿಗೆ ಜೀವಂತಿಕೆಯಿಂದ ಕೂಡಿದೆ. ಈ ಹೊಸ ಪ್ರಯೋಗ ವೇದಿಕೆಯ ಲೇಖಕರಲ್ಲಿ ಹೊಸ ಹೊಳವು ತರುತ್ತದೆ ಎನ್ನುವದು ನನ್ನ ಅಭಿಪ್ರಾಯ. ಗಿರಿಜಾ ಅವರಿಗೆ ಅಭಿನಂದನೆಗಳು.

(೩) ಮೂರನೇ ಪ್ರಸ್ತುತಿ ಶ್ರೀ ಬೆಂ.ಶ್ರೀ.ರವೀಂದ್ರ ಅವರ ಕವನ **"ತಲೆ ತಲವಾರ್ ಮತ್ತು ತಲೈವರುಗಳು"**. ಯುದ್ಧದ ಚಿತ್ರಣ, ಯುದ್ಧದ ಬಗೆಗೆ, ಅದರಲ್ಲೂ ಯೂಕ್ರೇನ್ ರಷ್ಯಾ ಯುದ್ಧ ಪ್ರಾರಂಭವಾದ ಮೇಲೆ, ಇದು ಯುದ್ಧದ ಬಗೆಗಿನ ಅವರ ಎರಡನೇ ಕವನ. ಶ್ರೀಯುತರ ಕವನ ಯುದ್ಧದ ಭೀಕರತೆ, ನಿರರ್ಥಕತೆ, ಅನಿವಾರ್ಯತೆ ಎಲ್ಲವನ್ನೂ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ.

ಎದುರು ಬದರಾದವರು ಯುದ್ಧದಲಿ
ಒಬ್ಬರಿನ್ನೊಬ್ಬರ ಅರಿಯದ ಅರಿಗಳು
ದ್ವೇಷ ಮತ್ಸರಗಳಿಲ್ಲ ಆದರೆ ಸಾಯಿಸುತ್ತಾರೆ

ಎನ್ನುವ ಸಾಲುಗಳು ಇಡೀ ಯುದ್ಧದ ಅರ್ಥಹೀನತೆಯನ್ನು ಹೇಳುತ್ತದೆ. ಅಭಿನಂದನೆಗಳು ರವೀಂದ್ರ ಅವರಿಗೆ.

(೪) ಶ್ರೀ ಮಹಾಬಲ ಅವರು ಬರೆದ "ಚೆಂಬೆಳಕಿನತ್ತ ಒಂದು ಅನಿರೀಕ್ಷಿತ ಭೇಟಿ". ಧಾರವಾಡದಲ್ಲಿ ಅವರು ಕವಿ ಚೆನ್ನವೀರ ಕಣವಿಯವರ ಮನೆಗೆ ಅನಿರೀಕ್ಷಿತವಾಗಿ ಹೋಗಿ ಬಂದಿದ್ದನ್ನು ಸರಳ ಸುಂದರವಾಗಿ ಹೇಳುತ್ತಾ ಕವಿಕಾವ್ಯದ ಬಾಗಿಲು ತೆರೆಯುತ್ತಾರೆ. ಮಲ್ಲಿಗೆಯ ಕವಿಯ ಮಗನಿಂದ ಅನೇಕ ಹೆಸರಾಂತ ಸಾಹಿತಿಗಳ ಗುಣಶೀಲಗಳು, ಸರಳತೆ ನಮಗೆ ಮುದ ಕೊಟ್ಟಿರುತ್ತವೆ, ನಮ್ಮ ಕನ್ನಡ ನಾಡಿನ ಅಸಲಿ ಸಾಹಿತ್ಯ ಜಗತ್ತನ್ನು ಪರಿಚಯಿಸುತ್ತವೆ. ಅವರ ಕವಿ ಪರಿಚಯದ ಒಂದೊಂದು ಘಟನೆಯೂ ನಮಗೆ ರಸನಿಮಿಷ. ಅಷ್ಟರಮಟ್ಟಿಗೆ ಅವರಿಗೆ ನಾವು ಆಭಾರಿ. ಅಭಿನಂದನೆಗಳು ಮಹಾಬಲ ಅವರಿಗೆ.

(೫) ನಂತರ ಶ್ರೀ ಎನ್. ಶಂಕರ್ ರಾವ್ ಅವರು ಪ್ರಸ್ತುತಿಪಡಿಸಿದ್ದು ಒಂದು ಭಕ್ತಿ ಗೀತೆ, "ವೈರಾಗ್ಯ ಮೂರ್ತಿ". ವೈರಾಗ್ಯಕ್ಕೆ ಒಂದು ಮೂರ್ತರೂಪ ಕೊಟ್ಟದ್ದು ಶ್ರವಣಬೆಳಗೊಳದಿ ನಿಂತಿರುವ ಬಾಹುಬಲಿ ವಿಗ್ರಹ. ಅವರ ಜೀವನದ ಸಮಗ್ರ ವಿಷಯ ಬರುವಂತೆ ಸುಂದರವಾಗಿ ರಚಿಸಿದ್ದಾರೆ. ನನಗೇನೋ ಮತ್ತೆಮತ್ತೆ ಓದಿದಾಗ ಸಂಗೀತ ಬಲ್ಲವರು ಇದಕ್ಕೊಂದು ಸಂಗೀತ ಸಂಯೋಜನೆ ಮಾಡಿ ಹಾಡಬಹುದೇನೋ ಅನ್ನಿಸಿತು. ಒಂದು ಅರ್ಥಪೂರ್ಣ ಮತ್ತು ಭಾವಪೂರ್ಣ ಕವನ. ಅಭಿನಂದನೆಗಳು ಶ್ರೀ ಶಂಕರ್ ರಾವ್ ಅವರಿಗೆ.

(೬) ನಂತರ ಪ್ರಸ್ತುತಿಪಡಿಸಿದವರು ಶ್ರೀ ಜಿ.ವಿ.ಅರುಣ ಅವರು. ಡಾ. ಬಿ.ಎಸ್.ಸತ್ಯನಾರಾಯಣ ರಾವ್ ಅವರ ಪತ್ತೇದಾರಿ ಕಥಾಸಂಕಲನ "ತುಂಟ ಕುದುರೆ ಮತ್ತು ಇತರ ಕಥೆಗಳು" ಪರಿಚಯ ಮಾಡಿದರು. ನಮಗೆ ಕುತೂಹಲ ಮೂಡುವಂತೆ ಪುಸ್ತಕ ಪರಿಚಯ ಸಾಗುತ್ತದೆ. ಸತ್ಯನಾರಾಯಣ ರಾವ್ ಅವರು ವೃತ್ತಿಯಲ್ಲಿ ಚಿಕ್ಕಮಕ್ಕಳ ಹೃದ್ರೋಗತಜ್ಞರು. ಆದರೆ ಪತ್ತೇದಾರಿ ಕಥೆ ಬರೆದಿರುವ ಪರಿ ಬೆರಗು ತರಿಸುತ್ತದೆ. ಪತ್ತೇದಾರಿ ಕಥೆಯಷ್ಟೇ ಪುಸ್ತಕ ಪರಿಚಯ ಕೂಡಾ ಕುತೂಹಲಭರಿತವಾಗಿ, ಸೊಗಸಾಗಿ ಬಂದಿದೆ. ಆ ಕಥಾಸಂಕಲನದ ಎಲ್ಲಾ ಕಥೆಗಳು ರೋಚಕವಾಗಿವೆ. ಹೃದ್ರೋಗತಜ್ಞರಾಗಿದ್ದು ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ಸಮಾಜದ ಹಿತಕಾಯುವ ಮತ್ತು ಕನ್ನಡ ಸಾಹಿತ್ಯ ಲೋಕಕ್ಕೆ ಅಮೂಲ್ಯವಾದ ೨೨ ಕೃತಿಗಳನ್ನು ಕೊಟ್ಟ ಅಪರೂಪದ ವ್ಯಕ್ತಿ ಡಾ. ಸತ್ಯನಾರಾಯಣ ರಾವ್ ಅವರಿಗೆ ನಮ್ಮದೊಂದು ಅಭಿನಂದನೆಯನ್ನು ಶ್ರೀ ಜಿ.ವಿ.ಅರುಣ ಅವರು ಕೊಟ್ಟ ಫೋನಿಗೆ ಕರೆಮಾಡಿ ತಿಳಿಸೋಣ. ಪತ್ತೇದಾರಿ ಕಥೆಯಷ್ಟೆ ರೋಚಕವಾಗಿ ಪುಸ್ತಕವನ್ನು ಪರಿಚಯಿಸಿದ ಅರುಣ ಅವರಿಗೆ ಅಭಿನಂದನೆಗಳು.

(೭) ನಂತರ ಶ್ರೀಮತಿ ನಾಗರತ್ನ ಚಂದ್ರಶೇಖರ್ ಕೂಡಾ 'ಪಲಾಯನ' ಎಂಬ ಬರಹದ ಮೂಲಕ ಒಂದು ಪುಸ್ತಕ ಪರಿಚಯಿಸುತ್ತಾರೆ. ಕೆರೋಲಿನ್ ಜೆ. ಸೋಪ್ ಬರೆದ ಆತ್ಮಕಥಾನಕ 'Escape' ಎನ್ನುವ ಪುಸ್ತಕದಿಂದ ಪ್ರಭಾವಿತರಾಗಿ ಪುಸ್ತಕದ ಪರಿಚಯ ಮಾಡಿಕೊಡುತ್ತಾರೆ ಮತ್ತು ಇದರ ಅನುವಾದ ಕೂಡಾ ಮಾಡಿದ್ದಾರೆ. 'ಎಸ್ಕೇಪ್' ಎನ್ನುವದು ಒಂದು ಶೋಷಿತ ಹೆಣ್ಣಿನ ಜೀವನ ವೃತ್ತಾಂತ ಎಂದು ಹೇಳುತ್ತಾ ಪುಸ್ತಕವನ್ನು ಬಹಳ ವಾಸ್ತವಿಕವಾಗಿ ಪರಿಚಯಿಸಿದ್ದಾರೆ. ಪ್ರತಿಸಲವೂ ದಾಸೋಹದಲ್ಲಿ ನಗೆ ಲೇಖನ ಬರೆಯುತ್ತಿದ್ದ ನಾಗರತ್ನ ಅವರು ಇಂದು 'ಶೋಷಣೆಗೊಳಗಾಗಿ ತನ್ನ ಮಕ್ಕಳೊಂದಿಗೆ ಪಲಾಯನ ಮಾಡಿದ ಒಂದು ದಿಟ್ಟ ಹೆಣ್ಣಿನ ಬದುಕಿನ ನೈಜ ಕಥೆ ಇಲ್ಲಿದೆ' ಎನ್ನುವ ಅವರ ಬರವಣಿಗೆ ಹೆಜ್ಜೆಹೆಜ್ಜೆಗೂ ಕುತೂಹಲ, ಹೆಣ್ಣಿನ ದಿಟ್ಟತನ ತೋರಿಸುತ್ತದೆ. ಅಸಂಖ್ಯಾತ ಸ್ತ್ರೀಯರು ಕಾಲದೇಶಗಳ ಎಲ್ಲೆಯನ್ನು ಮೀರಿ ಕಷ್ಟದಲ್ಲಿ ತೊಳಲಾಡುವದು ಸಾಮಾನ್ಯ ಸಂಗತಿ ಎಂದು ಈ ಪುಸ್ತಕ ಓದಿದ ಎಲ್ಲರ ಅರವಿಗೆ ಬರುತ್ತದೆ. ಒಂದೊಳ್ಳೆ ಪುಸ್ತಕ ಪರಿಚಯಿಸಿದ ನಾಗರತ್ನ ಅವರಿಗೆ ಅಭಿನಂದನೆಗಳು.

(೮) ಶ್ರೀಮತಿ ಸರಸ್ವತಿ ನಟರಾಜ್ ಅವರ ಲೇಖನ "ತಿರು ಚೆಂಗಟ್ಟಾನ್ ಗುಡಿಯಲ್ಲಿ ವಾತಾಪಿ ಗಣಪತಿ". 'ವಾತಾಪಿ ಗಣಪತಿಂ ಭಜೆ' ಕೀರ್ತನೆಯ ಐತಿಹ್ಯ ಮತ್ತು ಗಣಪತಿ ವಿಗ್ರಹದ ಮೂಲವನ್ನು ಹೇಳುವ ಲೇಖನ ಇದು.

ನನಗೆ ವೈಯಕ್ತಿಕವಾಗಿ ತುಂಬಾ ಇಷ್ಟವಾಯ್ತು. ಇಂತಹ ಸಂಗತಿಗಳನ್ನು ಹಂಚುವದರಿಂದ ಜನರಲ್ಲಿ ಇತಿಹಾಸದ ಬಗ್ಗೆ ತಿಳುವಳಿಕೆ ಬರುತ್ತದೆ. ನಮ್ಮ ಕನ್ನಡ ನಾಡಿನ ಚಾಲುಕ್ಯ ವಂಶದ ವೀರರಾಜ ಪುಲಕೇಶಿಯ ರಾಜಧಾನಿ ವಾತಾಪಿಯಿಂದ ಯುದ್ಧದ ಸಮಯದಲ್ಲಿ ಹೋದ ಗಣಪತಿ ವಿಗ್ರಹ, ತಿರುವಾರೂರು ಸಮೀಪದಲ್ಲಿನ ತಿರುಚೆಂಗಟ್ಟಾನ್ ಗುಡಿಯಲ್ಲಿ ಪ್ರತಿಷ್ಠಾಪನೆ ಆಗುತ್ತದೆ. ಈ ಗಣಪತಿಯ ಮೇಲೆ ದಾಸಶ್ರೇಷ್ಠ ಮುತ್ತುಸ್ವಾಮಿ ದೀಕ್ಷಿತರು ರಚಿಸಿದ 'ವಾತಾಪಿ ಗಣಪತಿಂ ಭಜೆ' ಅಸಂಖ್ಯಾತ ಸಂಗೀತ ಕೀರ್ತನೆಗಳ ಸಾಗರದಲ್ಲಿ ಅಗ್ರಗಣ್ಯವಾಗಿದ್ದು ಎಲ್ಲರಿಂದ ಸ್ತುತಿಸಲ್ಪಡುವ ಕೀರ್ತನೆ. ಅಭಿನಂದನೆಗಳು ಸರಸ್ವತಿಯವರಿಗೆ, ಇಂತಹ ಅಮೂಲ್ಯ ಸಂಗತಿ ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕೆ.

(೯) ನಂತರದ ಸರದಿ ಶ್ರೀಮತಿ ರತ್ನಾ ಮೂರ್ತಿಯವರದು. ರತ್ನಾ ಮೂರ್ತಿಯವರು ಸಕಲ ಕಲಾವಲ್ಲಭೆ. ಇಂದು ಅವರು ಬರೆದ **"ಹಣಮಂತನ ಅಣಿಮುತ್ತುಗಳು"** ಲೇಖನ ಚೇತೋಹಾರಿಯಾಗಿದೆ. ಆಗಿನ ಕಾಲೇಜು ದಿನಗಳನ್ನು ಕಣ್ಣಿಗೆ ಕಟ್ಟಿದಂತೆ ಬರೆದಿದ್ದಾರೆ. ಮೇಲಾಗಿ ಈ ಅಣಿಮುತ್ತುಗಳ ನಾಯಕಿ ಅವರೇ ಆಗಿರುವುದರಿಂದ ಅದಕ್ಕೊಂದು ಗಟ್ಟಿ ನೆಲೆ ಬಂದಿದೆ, ಹದಿವಯಸ್ಸಿನ ಹುಮ್ಮಸ್ಸು ತುಂಬಿದೆ. ಗೌರಮ್ಮನ ವಚನದಂತೆ "ಹಣಮಂತನ ಅಣಿಮುತ್ತು" ಸಾವಿರಾಗಲಿ. ಆದ್ರೆ ನನ್ನಂತೆ ಹಳ್ಳಿಯವನಾದ ಹಣಮಂತನಿಗೆ ಸದಾ ಅವರಜ್ಜನ ಕೈಯಲ್ಲಿ ಬಾಸುಂಡೆ ಬರುವಂತೆ ಹೊಡಿಸಬೇಡಿ, ಜಾಣ ಕೌಶಲ್ಯ ತುಂಬಿದ ಹಣಮಂತ ಎಂದಾಗಲಿ. ಅಭಿನಂದನೆಗಳು ರತ್ನಾ ಮೂರ್ತಿಯವರಿಗೆ.

(೧೦) ಶ್ರೀಮತಿ ಶಾಂತಿವಾಸು ಇಂದು ಪ್ರಸ್ತುತಿಪಡಿಸಿದ ಕವನ **"ನವ ಸಖಿ"**. ಶಾಂತಿವಾಸು ಅರ್ಥಪೂರ್ಣ ಕವನ ಬರೆಯುವದರಲ್ಲಿ ಸಿದ್ಧಹಸ್ತರು. ಈ ಕವನದ ಸುಂದರ ಸಾಲಿನಲ್ಲಿ ತಮ್ಮ ಬಾಲ್ಯದ ಜನಜೀವನವನ್ನು ನೆನಪಿಸಿಕೊಂಡಿದ್ದಾರೆ. ಹಳೆಯದನ್ನು ನೆನಪಿಸಿಕೊಳ್ಳುವ ಸಾವಿರಾರು ಕವನ, ಲೇಖನ, ಹರಟೆ, ಮತ್ತು ಸಿನಿಮಾ ಗೀತೆ ಬಂದಿವೆ, ವಾಟ್ಸಾಪ್ ಸುದ್ದಿಗಳ ಮಹಾಪೂರವೇ ಇದೆ. ಆದರೆ ಶ್ರೀಮತಿ ಶಾಂತಿವಾಸು ಅವರು ಬರೆದ ಕವನ ಸಾಹಿತ್ಯಕವಾಗಿ ತುಂಬಾ ಭಾವಪೂರ್ಣ, ಅರ್ಥಪೂರ್ಣ. ಅಭಿನಂದನೆಗಳು ನಿಮಗೆ.

(೧೧) ಶ್ರೀ ಮನೋಹರ ಗೋಖಲೆ ಇಂದು ಸಣ್ಣದೊಂದು ಸ್ವಗತ ಮತ್ತು ಒಂದು ಕವನ ಪ್ರಸ್ತುತಿಪಡಿಸಿದ್ದಾರೆ. 'ತುಷಾರ' ಮಾಸಪತ್ರಿಕೆ ತನ್ನ ೫೦ನೇ ವರ್ಷದ ಸುವರ್ಣ ಮಹೋತ್ಸವಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಹೊರತಂದ ೧೬೪ ಪುಟಗಳ ಪತ್ರಿಕೆ. ನಾವೆಲ್ಲ ಕನ್ನಡಿಗರು ಹೆಮ್ಮೆಪಡುವಂತಹ ಪತ್ರಿಕೆ. ಅದು ಮನೋಹರ ಅವರಿಗೆ ಇಷ್ಟದ ಪತ್ರಿಕೆ. ಅದಕ್ಕೆ **'ತುಷಾರದ ಓದು'** ಎಂದು ಅಭಿಮಾನದ ನುಡಿಗಳನ್ನಾಡಿ ಅಚ್ಚ ಕನ್ನಡ ವೇದಿಕೆಯಲ್ಲಿ ಹಂಚಿಕೊಂಡಿದ್ದು ತುಂಬಾ ಸೂಕ್ತ.

ಇನ್ನು ಅವರ ಕವನ **"ಮಾಧ್ಯಮಿಗಳಿಗೆ"**. ಮಾಧ್ಯಮ ಮಿತ್ರರಿಗೆ ಸಹಸ್ರ ನಾಮಾರ್ಚನೆ ಮಾಡಿ ಬುದ್ಧಿ ಹೇಳಿದ್ದಾರೆ. "ಕೀರ್ತಿಶನಿ ಕ್ಷಿಪ್ರಧನದ ಬೆನ್ನುಬಿದ್ದವರೇ" ಎಂದು ಛಾಟಿ ಬೀಸಿದ್ದಾರೆ. ಕವನ ತುಂಬಾ ಚೆನ್ನಾಗಿ ಮೂಡಿಬಂದಿದೆ. ಅಭಿನಂದನೆಗಳು ಗೋಖಲೆಯವರಿಗೆ.

(೧೨) ಶ್ರೀ ವಿಠ್ಠಲ್ ಇಚೇರಿ ಅವರು ವೇದಿಕೆಯಲ್ಲಿ ವಿಶಿಷ್ಟ ಸ್ಥಾನ ಹೊಂದಿದವರು. ಎಲ್ಲರ ಬರಹ ಓದಿ ಸ್ಪಂದಿಸುವ ಕರುಣಾಳು. ಸಣ್ಣ ಕಥೆಗಳ ಬಗೆಗೆ ಒಂದು ಪಿಎಚ್‌ಡಿ ಪಡೆಯುವಷ್ಟು ಓದಿ, ಆ ದಿಸೆಯಲ್ಲಿ ಈ ವೇದಿಕೆಯ ಸದಸ್ಯರ ತಿಳುವಳಿಕೆ ಹೆಚ್ಚಿಸಿದವರು. ಇಂದು **"ರಸ್ಕಿನ್ ಬಾಂಡ್ ಕಥೆಗಳು"** ಮತ್ತು ಇದರ ಜನಕ ರಸ್ಕಿನ್ ಬಗೆಗೆ ಬರೆದಿದ್ದಾರೆ. ಎಂದಿನಂತೆ ಇದು ಸಣ್ಣ ಕಥೆಗಳ ಬಗೆಗೆ ಜ್ಞಾನಾರ್ಜನೆ ಪಡೆದುಕೊಳ್ಳುವ ಆಸಕ್ತಿ ಇರುವವರಿಗೆ ತುಂಬಾ

ಉಪಯುಕ್ತ ಮಾಹಿತಿ. ಇನ್ನೊಂದು ಗಮನಿಸುವ ವಿಷಯವೆಂದರೆ ರಸ್ಕಿನ್ ಬಾಂಡ್ ವಿಫುಲ ಸಾಹಿತ್ಯ ಬರೆದಿದ್ದಾರೆ. ಮಕ್ಕಳಿಗೆ ಸಾಹಿತ್ಯ ಬರೆಯುವದೆಂದರೆ ಮಕ್ಕಳ ಕಣ್ಣಿನಿಂದ ಜೀವನವನ್ನು ನೋಡಬೇಕು. ಅದಕ್ಕೆ ರಸ್ಕಿನ್ ಬಾಂಡ್ ಅವರ ಸ್ನೇಹಿತರು ಅವರಿಗೆ 'ನೀವು ಟೀನ್‌ಏಜ್ ಮುಟ್ಟಲೇ ಇಲ್ಲ' ಎಂದು ಹೇಳುತ್ತಿದ್ದರು ಎನ್ನುವದು ನನ್ನ ಗಮನ ಸೆಳೆದ ವಿಷಯ. ಇದೇ ಸರಳ ಸೂತ್ರ ಇಟ್ಟುಕೊಂಡು ರಸ್ಕಿನ್ ಬಾಂಡ್ ಬರೆದ ಒಂದು ನೈತಿಕ ಕಥೆ "ನೀಲಿ ಕೊಡೆ ಕಾಣಿಕೆ" ತುಂಬಾ ಚೆನ್ನಾಗಿದೆ. ಇಂತಹ ಉಪಯುಕ್ತ ಮಾಹಿತಿಯಿಂದ ವೇದಿಕೆಯನ್ನು ಸಂಪದ್ಭರಿತ ಮಾಡಿದ ಶ್ರೀ ವಿಠ್ಠಲ ಇಜೇರಿ ಅವರಿಗೆ ಅಭಿನಂದನೆಗಳು.

(೧೩) ನಂತರ ಓದಿದವರು ಶ್ರೀ ಹು.ವಾ.ಶ್ರೀಪ್ರಕಾಶ್. ಅವರ ಸಣ್ಣ ಕಥೆಯ ಹೆಸರು "ಸತಿ ಸುಕನ್ಯ". ಕಥೆ ಓದುತ್ತಾ ಹೋದಂತೆ ಕಣ್ಣು ಕದಲಿಸದೆ ಓದಿದೆ, ಕರಾರುವಕ್ಕಾದ ನಿರೂಪಣೆ, ನನಗೆ ಇದು ಕಥೆ ಎನ್ನಿಸಲಿಲ್ಲ, ಬ್ಯಾಂಕಿನಲ್ಲಿ ಆದ ನಿಜ ಘಟನೆ, ಅದರಲ್ಲೂ ಹು.ವಾ.ಶ್ರೀಯವರೇ ಮ್ಯಾನೇಜರ್ ಆಗಿದ್ದು, ಅವರ ಅನುಭವವನ್ನು ಕಥೆಯಾಗಿಸಿದ್ದಾರೆ ಅನ್ನಿಸಿತು. ಯಾಕೆಂದರೆ ಕಥಾವಸ್ತುವಿನಲ್ಲಿ ಜೀವಂತಿಕೆ ಇದೆ. ವಸ್ತುನಿಷ್ಠತೆ ಇದೆ, ಜೀವನದ ನಗ್ನ ಸತ್ಯವಿದೆ. ಇಂದು ಶ್ರೀಮತಿ ಗಿರಿಜಾ ರಾಜ್ ಪ್ರಸ್ತುತಪಡಿಸಿದ 'ಪತ್ರದ ಮುಖೇನ ಕಥೆ' ಮತ್ತು ಈ ಕಥೆ ಜೀವನದ ಸಂಕಷ್ಟಗಳನ್ನು ತೆರೆದಿಟ್ಟರೂ ಅಲ್ಲಿ ಗಂಡು ಹೆಣ್ಣನ್ನು ಶೋಷಿಸಿದರೆ, ಇಲ್ಲಿ ಯಾರು ಯಾರಿಗೆ ಶೋಷಣೆ ಎಂದು ಹೇಳುವದು ಕಷ್ಟ ಮತ್ತು ಚರ್ಚಾಸ್ಪದವಾಗಿದೆ. ಶಿವಮೂರ್ತಿಯ ನೆಲೆಗಟ್ಟಲ್ಲಿ ನೋಡಿದರೆ ಅವನು ಅವರ ಮನೆಯ ಎಲ್ಲ ಕಷ್ಟ ದುಃಖಗಳಿಗೆ ನೆರವಾಗಿ ತನಗೆ ಆಸರೆಯಾಗಿ ಸುಕನ್ಯ ಅವಳನ್ನು ಪಡೆದಿರುವ, ಅದರಲ್ಲಿ ತನ್ನ ಸ್ವಾರ್ಥ ಮಾತ್ರ ಇಲ್ಲ, ಆ ಮನೆಯವರ ಸ್ವಾರ್ಥವೂ ಇದೆ ಎಂದಾದರೆ, ಸುಕನ್ಯ ಅವಳ ದೃಷ್ಟಿಯಲ್ಲಿ ಅವನು ಸಹಾಯ ಮಾಡುವ ನೆಪದಲ್ಲಿ ಸುಕನ್ಯಳ ಜೀವನ ಆಹುತಿ ಆಯ್ತು. ಇಲ್ಲಿ ಶೋಷಣೆ ಯಾರಿಂದ ಯಾರಿಗೆ ಎನ್ನುವದು ಚರ್ಚಾಸ್ಪದ ವಸ್ತುವಾಗುತ್ತದೆ. ಅಭಿನಂದನೆಗಳು ಹು.ವಾ.ಶ್ರೀ ಅವರಿಗೆ.

(೧೪) ಪೋ.ರ. ಅವರು ಇಂದು ಪ್ರಸ್ತುತಿ ಮಾಡಿದ್ದು ಒಂದು ಸಣ್ಣ ಕಥೆ "ಆ ಘಟನೆಗೂ ಮುನ್ನ". ಅವರು ಹೇಳಿದಂತೆ ಅದು ಒಂದು ಕಥೆ. ಆದರೆ ಕಥೆ ಓದುತ್ತಾ ಹೋದಂತೆ ಸಮಾಜದಲ್ಲಿ ಶೋಷಣೆ ಯಾವಯಾವ ಸ್ತರದಲ್ಲಿ ಯಾರು ಯಾರಿಗೆ ಮಾಡುತ್ತಾರೆ ಎನ್ನುವದೇ ವಿಸ್ಮಯ, ಪಾಪದ ಸೇಲ್ಸ್‌ಮನ್ ವಿಶ್ವೇಶ್ವರ ಕೆಲಸ ಕಳೆದುಕೊಂಡದ್ದು ಮನಸ್ಸಿಗೆ ನೋವುಂಟು ಮಾಡಿತು. ಬೀಜದಿಂದ ವೃಕ್ಷವೋ ವೃಕ್ಷದಿಂದ ಬೀಜವೋ ಎನ್ನುವ ಜಿಜ್ಞಾಸೆ ಇಲ್ಲಿ. ಅಷ್ಟು ಕಠೋರ ನಿಯಮ ಇಡದಿದ್ದರೆ ಕೆಲಸಗಾರರು ಕೆಲಸ ಮಾಡುವದಿಲ್ಲ. ಆಗ ಮಾಲೀಕನಿಗೆ ನಷ್ಟ, ತೀರಾ ಕಟ್ಟಳೆಗಳಿದ್ದರೆ ನ್ಯಾಯಯುತವಾಗಿ ದುಡಿದು ದುರಾದೃಷ್ಟದಿಂದ ಅದು ಫಲಿಸದಿದ್ದಾಗ ಕೆಲಸಗಾರನಿಗೆ ಅನ್ಯಾಯ. ಒಟ್ಟಿನಲ್ಲಿ ಜೀವನ ಒಂದು ಸಂಘರ್ಷ, ಒಂದು ಕಗ್ಗಂಟು. ಕಥೆ ಚೆನ್ನಾಗಿದೆ. ರಮೇಶ್ ಸರ್, ತಮಗೆ ಅಭಿನಂದನೆಗಳು.

(೧೫) ಶ್ರೀ ಎನ್.ವಿ.ರಘುರಾಂ ಅವರು ಪ್ರಸ್ತುತಪಡಿಸಿದ ಲೇಖನ "ನಮ್ಮ ಮನೆಯ ಕೊಟ್ಟಿಗೆಯ ಸುತ್ತ". ಇದನ್ನು ಅವರೇ ಅದೊಂದು ತಮ್ಮ ಮನೋಲಹರಿ ಎಂದು ಕರೆದಿದ್ದಾರೆ. ನಿಜವಾಗಲೂ ಅದನ್ನು ಓದುತ್ತಿದ್ದರೆ ನಮ್ಮೂರಿನ ನಮ್ಮ ಮನೆಯ ಕೊಟ್ಟಿಗೆ ನೆನಪಾಯ್ತು. ಓದುತ್ತಾ ಓದುತ್ತಾ, 'ಎಮ್ಮೆ ಭಟ್ರು' ಅದೆಲ್ಲ ಓದುವಾಗ ನಗು ಬಂದರೂ ಉಳಿದೆಲ್ಲ ಚಿತ್ರ ಗತಿಸಿಹೋದ ನನ್ನ ತಾಯಿಯ ಮನೆಯ ಕೊಟ್ಟಿಗೆ ನೆನಪಾಗಿ ಹೃದಯ ಭಾರವಾಯ್ತು. "ತಾಯಿ ನೆನಪಾಗಿ ಕಣ್ಣೀರ ತಂದೆ" ಎಂದು ದುಃಖದಿಂದ ಮನಹಾಡಿತು. ನೀವು ಹೇಳಿದಂತೆ ನಮ್ಮ ಮನೆಯಲ್ಲೂ ಎಮ್ಮೆ ಹಸುವಿನ ತಾರತಮ್ಯ ಇತ್ತು. ನನ್ನ ಅಜ್ಜಿ ಹಸುವನ್ನು, ಕರುವನ್ನು ಗಂಗೆ, ಗೌರಿ ಎಂದು ಮುದ್ದು ಮಾಡಿ, ಮುದ್ದು ಬೈಗುಳದಿಂದ ಬೈಯುತ್ತಾ, ಹಸುವಿಗೆ ನಿನ್ನ ಬಾಯಲ್ಲಿ ಅಚ್ಯುತನಿರುವನು, ನಿನ್ನ ಕಾಲುಗಳಲ್ಲಿ ಪಂಚ ಪಾಂಡವರಿರುವರು ಎನ್ನುತ್ತಾ, ಹಸುವಿನ ಅಂಗ ಅಂಗಗಳಲ್ಲಿ ವಾಸಿಸುವ ದೇವರ ಹೆಸರು ಹೇಳುತ್ತಾ ನಾಲ್ಕು ಪಾದ, ಬಾಲದ ಹುಟ್ಟುವ ಭಾಗ ನಮಸ್ಕರಿಸಿ, ಒಂದಿಷ್ಟು ರಮಿಸಿ, ಗೋಮೂತ್ರವನ್ನು ತೀರ್ಥದ ತರಹ ತೆಗೆದುಕೊಳ್ಳುತ್ತಿದ್ದರು.

ನಮ್ಮ ತಾಯಿಯವರಿಗೆ ಇದೆಲ್ಲ ಸಾಧ್ಯವಿರಲಿಲ್ಲ. ಕಾರಣ ಅವರಿಗೆ ಮನೆಯ ಕೆಲಸದ ಒತ್ತಡ. ಇನ್ನು ನಾವು ಚಿಕ್ಕವರು ಕೊಟ್ಟಿಗೆ ಬಾಗಿಲಿಗೆ ಪ್ರತಿದಿನ ಬೆಳಗ್ಗೆ ನೀರುಹಾಕಿ ರಂಗೋಲಿ ಇಟ್ಟು, ಅರಿಷಿಣ ಕುಂಕುಮ ಇಟ್ಟು, ನಂತರ ಇರುವ ಎಲ್ಲಾ ಹಸುವಿಗೂ ನಾಲ್ಕೂ ಕಾಲಿಗೆ ನೀರು ಹಾಕಿ ಅರಿಷಿಣ ಕುಂಕುಮ ಇಡುವ ಕೆಲಸವಿರುತಿತ್ತು. ಅದು ನೀವು ಹೇಳಿದಂತೆ ಗಿಡ್ಡ ತಳಿ, ಎರಡು ಲೋಟ ಹಾಲು ಕೊಡುವ ಹಸು ಆದರೂ ಅದಕ್ಕೆ ಭಕ್ತಿ, ಪ್ರೀತಿ ಲಭಿಸುತ್ತದೆ. ಎಮ್ಮೆಗೆ ಈ ಸೌಲಭ್ಯ ಇಲ್ಲ. ಹೀಗೆ ನಮ್ಮ ಮನೆಯ ಕೊಟ್ಟಿಗೆಯನ್ನು ನೆನಪಿಸಿದ್ದೀರಿ ಧನ್ಯವಾದಗಳು. ತೌರು ಮನೆಯ ನೆನಪು ಹೆಣ್ಣಿಗೆ ಕೊನೆತನಕ.

(೧೬) ಶ್ರೀಮತಿ ಶೀಲಾ ಅರಕಲಗೂಡು ಅವರು ವೇದಿಕೆಯ ವಿಶಿಷ್ಟ ವ್ಯಕ್ತಿ. ತಮ್ಮ ಬರಹ, ಅದನ್ನು ವ್ಯಕ್ತಪಡಿಸುವ ಶೈಲಿ ಎಲ್ಲವೂ ವಿಭಿನ್ನ. ಸಕಲಕಲಾವಲ್ಲಭೆ. ಈಗ ಮೂರು ದಾಸೋಹದಲ್ಲೂ ಕಥೆಯ ರಚನೆ ಬಗೆಗೆ ಮೊದಲು ಬರಹಗಾರನ ತುಮುಲ, ವಿಚಾರಧಾರೆ ಚೆನ್ನಾಗಿ ಚಿತ್ರಿಸಿದ್ದಾರೆ. ಅವರ ಇಂದಿನ ಪ್ರಸ್ತುತಿ **"ಅರಳಿಹುದು ಕತಾಪುಷ್ಪ"**. ತಮ್ಮದೇನೋ ಲಲಿತ ಪ್ರಬಂಧ ಎಂದು ಹೇಳಿದರೂ, ಬರಹಗಾರನ ಮೊದಲ ದಿನಗಳ ತಯಾರಿ, ಮನಸ್ಸಿನ ಭಾವನೆ ಮತ್ತೆ ತಿರುಗಿ ತಿರುಗಿ ಬರುವ ಆಲೋಚನೆ ಎಳೆಎಳೆಯಾಗಿ ವರ್ಣಿಸಿದ್ದಾರೆ. ಅವರ ಮೂರು ಲೇಖನಗಳನ್ನೂ ಒಟ್ಟಿಗೇ ಓದಿದರೆ ಪ್ರಾರಂಭಿಕ ಕಥೆಗಾರನಿಗೆ ಮನೋಬಲ ಕೊಡುತ್ತದೆ. ಅವನನ್ನು ಎದುರುಕೂಡಿಸಿ ಕಥೆ ಬರೆಯುವದಕ್ಕೆ ಮುಂಚೆ ಈ ರೀತಿ ತಯಾರಿ ಮಾಡು, ಇಂತಿಂತಹ ಯೋಚನೆ ಬರುತ್ತದೆ ಧೃತಿಗೆಡಬೇಡಾ, ಎಲ್ಲರಿಗೂ ಆಗುವ ದ್ವಂದ್ವ ನಿನಗೂ ಆಗಿದೆ, ಅದಕ್ಕೆ ಪರಿಹಾರವೂ ಅಲ್ಲೇ ಇರುತ್ತೆ ಎಂದು ಹೇಳಿದ್ದಾರೆ. ಭಲೇ!! ಶೀಲಾ ಟೀಚರ್. ಎಲ್ಲರಿಗೂ ಪಾಠ ಚೆನ್ನಾಗಿ ಹೇಳಿದ್ದಾರೆ. ಇವರೊಬ್ಬ ಸಮರ್ಥ ಶಿಕ್ಷಕಿ. ಅವರಿಗೆ ನನ್ನ ಅಭಿನಂದನೆಗಳು.

(೧೭) ಕೊನೆಯದಾಗಿ ಓದಿದ ಶ್ರೀಮತಿ ರಾಧಿಕಾ ಗುಜ್ಜರ್ ಅವರು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮುಂದಿಟ್ಟುಕೊಂಡು "ಬಾ ಗೆಳತಿ ಬಾ ಕುಳಿತು ಹರಟೋಣ" ಎನ್ನುವ ಕವನ ಪ್ರಸ್ತುತಿಪಡಿಸಿದರು. ಅವರದೇನಿದ್ದರೂ ಕವಿತಾ ವಸ್ತುವಿನ ಸುತ್ತಮುತ್ತ ಜೇಡ ನಯವಾದ ಬಲೆ ಹೆಣೆದಂತೆ ಸುಂದರವಾಗಿ ಬಲೆ ಹೆಣೆಯುವ ಕುಸುರಿ ಕೆಲಸ, ಬಹು ಸುಂದರವಾಗಿ ಮೂಡಿಸುತ್ತಾರೆ. ಈ ಕವನದಲ್ಲೂ ಅಷ್ಟೇ, ಮಧ್ಯ ವಯಸ್ಸಿನ ಇಬ್ಬರು ಹೆಣ್ಣುಮಕ್ಕಳ ಮನಸ್ಸನ್ನು ಹರಟೆಯ ತಲೆಬರಹ ಕೊಟ್ಟು ಸುಂದರವಾಗಿ ರಚಿಸಿದ್ದಾರೆ. ರಾಧಿಕಾ ಅವರಿಗೆ ಅಭಿನಂದನೆಗಳು.

ಮೇಲಿನ ಎಲ್ಲ ಬರಹಗಳ ಸಮಗ್ರ ಓದಿಗೆ ಅವಕಾಶ ಕೊಟ್ಟ ವೇದಿಕೆಗೆ ಮತ್ತು ಸದಸ್ಯರಿಗೆ ನನ್ನದೊಂದು ಭಿನ್ನಹದೊಂದಿಗೆ ಅಧ್ಯಕ್ಷ ಮಾತು ಮುಗಿಸುತ್ತೇನೆ.

ಅಣ್ಣಗಳಿರಾ.. .. ಅಕ್ಕಗಳಿರಾ.. ..
ನನ್ನ ಒಡಹುಟ್ಟುಗಳಿರಾ ..   ..
ನಾನು ನಿಮ್ಮವಳೆಂದು ಬಗೆದು
ನನ್ನ ಅನಿಸಿಕೆ ಮನ್ನಿಸಿ
ತಪ್ಪು ಒಪ್ಪುಗಳೆನ್ನದೆ, ಬರಿ
ಗುಂಪು ಚರ್ಚೆಯೆಂದು ಬಗೆದು
ಚಂದದಿಂದಲಿ ಇನ್ನೂರರ
ದಾಸೋಹದೆಡೆಗೆ ನಡೆಯುವಾ

ಗೋವಿನ ಹಾಡು ಬರೆದ ಕವಿಗೆ ಮತ್ತು ನಿಮಗೆಲ್ಲ ವಂದಿಸುತ್ತಾ ನನ್ನ ಮಾತು ಮುಗಿಸುವೆ.

****